ಭಕ್ತಾಮರಾದಿ ಪಂಚಸ್ತೋತ್ರ
ಭಾವಪ್ರಕಾಶಿಕಾ

ಪಂಡಿತರತ್ನ
ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್
ಜನ್ಮ ಶತಾಬ್ದ 1888-1988

ಪಂಡಿತರತ್ನ ಎರ್ತೂರು ಶಾಂತಿರಾಜ ಶಾಸ್ತ್ರಿಗಳ ಕೃತಿಗಳು

ಸಂಖ್ಯೆ	ಕೃತಿಯ ಹೆಸರು	ಪ್ರಕಟಿಸಿದ್ದು
1.	ಪಂಚಸ್ತೋತ್ರ : ಭಾವ ಪ್ರಕಾಶಿಕಾ (154 ಪುಟಗಳು)	1913
2.	ಜೈನ ಪದ ಸಮುಚ್ಚಯ (36)	1911
3.	ಜಿನಭಜನಸಾರ (152)	1911, 1919, 1926, 1947
4.	ಪೂಜಾಸಾರಸಮುಚ್ಚಯಃ (308)	1919, 1923, 1936
5.	ರತ್ನಾಕರಸಪಾದಶತಕಮ್ (132)	1922
6.	ಶತಕತ್ರಯೀ (124)	1922
7.	ಶತಕತ್ರಯ (ರತ್ನಾಕರ ವಿರಚಿತ) (150)	1922, 1941
8.	ಅನ್ಯಯೋಗವ್ಯವಚ್ಛೇದಿಕಾ (102)	1923
9.	ಮಹಾಪುರಾಣ (ಪೂರ್ವಪುರಾಣಂ ಮತ್ತು ಉತ್ತರಪುರಾಣಂ) (3242)	1925, 1933, 1940, 1981
10.	ಜಿನಭಕ್ತಿ ಸಾರವು (ಪರಿಶೋಧಿಸಲ್ಪಟ್ಟ ಗ್ರಂಥ) (32)	1925
11.	ಮೂರು ನೋಂಪಿಗಳ ಕಥೆಗಳು (32)	1926, 1927
12.	ದ್ರವ್ಯ ಸಂಗ್ರಹಃ—(ಜೈನ ಸಿದ್ಧಾಂತ ಸಂಗ್ರಹ) (118)	1928, 1951, 1974
13.	ನೇಮಿಜಿನೇಶಸಂಗತಿ (ಹರಿವಂಶ ಪುರಾಣ) (630)	1931
14.	ಶಾಸ್ತ್ರೀಯ ಯಜ್ಞ—ಪುಸ್ತಕ ವಿಸರ್ಜ (38)	1931
15.	ಶ್ರವಣಬೆಳ್ಗೊಳ ಶ್ರೀಗಳವರ ಭಾಷಣ ಸಂಗ್ರಹ (344)	1932
16.	ನಂದೀಶ್ವರಾಷ್ಟಾಹ್ನಿಕಪೂಜಾದಿಸಂಗ್ರಹಃ (230)	1932, 1934, 1938
17.	ನಾಗಕುಮಾರಚರಿತಂ (384)	1933
18.	ಶತಕದ್ವಯ (ರತ್ನಾಕರ ವಿರಚಿತ) (48)	1933
19.	ದಶಭಕ್ತಿಃ (276)	1934, 1953
20.	ಶ್ರೀ ಪಾರ್ಶ್ವತೀರ್ಥಕರಚರಿತ (36)	1934
21.	ಚತುರ್ವಿಂಶತಿತೀರ್ಥಕರಾರಾಧನ (278)	1935
22.	ಶ್ರೀ ಜಂಬೂಸ್ವಾಮಿಚರಿತ (66)	1935, 1951
23.	ದ್ವಾದಶಾನುಪ್ರೇಕ್ಷೆ (48)	1936, 1950
24.	ಪರಮಾತ್ಮಬೋಧ (24)	1937
25.	ಮೃತ್ಯುಮಹೋತ್ಸವ (30)	1938

(3ನೆ ರಕ್ಷಾಪುಟವನ್ನು ನೋಡಿ)

ಜನ್ಮಶತಾಬ್ದಿ ಪ್ರಕಟಣೆ - ೨೨

ಭಕ್ತಾಮರಾದಿ ಪಂಚಸ್ತೋತ್ರ ಭಾವಪ್ರಕಾಶಿಕಾ

ಲೇಖಕರು :

ಎರ್ತೂರು ಶಾಂತಿರಾಜಶಾಸ್ತ್ರಿ

ಪ್ರಕಾಶನ :

ಪಂಡಿತರತ್ನ ಎರ್ತೂರು ಶಾಂತಿರಾಜಶಾಸ್ತ್ರಿ ಟ್ರಸ್ಟ್

ಜನ್ಮಶತಾಬ್ದಿ ೧೮೮೮–೧೯೮೮

BHAKTAMARADI PANCHASTOTRA BHAVAPRAKASHIKA Written in Kannada by Panditaratna A. Shanthiraja Shastry, Mysore.
Published by: Panditaratna A. Shanthiraja Shastry Trust, 'Shanthi' No. 369, 42nd Cross, 8th Block, Jayanagar, Bangalore-560 082. Second Edition, March 1989.
Pp. (xvi+112) 1000 Copies, Price Rs. 10/-

© Panditaratna A. Shanthiraja Shastry Trust.

ದ್ವಿತೀಯ ಮುದ್ರಣ : ಮಾರ್ಚ್ ೧೯೮೯
೧೦೦೦ ಪ್ರತಿಗಳು

ಬೆಲೆ : ಹತ್ತು ರೂಪಾಯಿಗಳು.

ಪ್ರಥಮ ಮುದ್ರಣ : 1913 – ವರ್ಧಮಾನ ಮುದ್ರಣಾಲಯ, ಮೈಸೂರು.

ದ್ವಿತೀಯ ಮುದ್ರಣ : 1989 – ಲೋಟಸ್ ಪ್ರಿಂಟರ್ಸ್, ಬೆಂಗಳೂರು.

ಆಶೀರ್ವಚನ

ಭಕ್ತಾಮರ ಸ್ತೋತ್ರ, ಕಲ್ಯಾಣಮಂದಿರ ಸ್ತೋತ್ರ, ಏಕೀಭಾವ ಸ್ತೋತ್ರ, ವಿಷಾಪಹಾರ ಸ್ತೋತ್ರ ಹಾಗೂ ಭೂಪಾಲ ಸ್ತೋತ್ರಗಳನ್ನು ಜೈನ ಧರ್ಮೀಯರು ಪೂಜ್ಯಭಾವನೆಯಿಂದ, ಶ್ರದ್ಧಾಭಕ್ತಿಗಳಿಂದ ಪಠನ ಮಾಡುತ್ತಾರೆ. ಶ್ರೀ ಮಾನತುಂಗಾಚಾರ್ಯರು, ಶ್ರೀ ಸಿದ್ಧಸೇನ ದಿವಾಕರರು, ಶ್ರೀ ವಾದಿರಾಜರು, ಶ್ರೀ ಧನಂಜಯರು, ಶ್ರೀ ಭೂಪಾಲರು ಈ ಸ್ತೋತ್ರಗಳನ್ನು ರಚಿಸಿದ್ದು ಪ್ರತಿಯೊಂದು ಶ್ಲೋಕದಲ್ಲಿಯೂ ಶ್ರೀ ಜಿನೇಶ್ವರರ ಅನಂತ ಗುಣಗಳನ್ನು ಸ್ತುತಿಸಿ ಭಕ್ತಿಭಾವದಿಂದ ಆರಾಧಿಸಲಾಗಿದೆ.

ಭಕ್ತಮರಾದಿ ಸ್ತೋತ್ರಗಳನ್ನು ಹಲವರು ಬಾಯಿಪಾಠ ಮಾಡಿಕೊಂಡು ನಿತ್ಯವೂ ಪಠನ ಮಾಡುತ್ತಾರೆ. ಸಂಸ್ಕೃತದಲ್ಲಿ ರಚಿತವಾಗಿರುವ ಈ ಸ್ತೋತ್ರಗಳ ಅರ್ಥವನ್ನು ತಿಳಿದರೆ ಮನಸ್ಸು ಮತ್ತಷ್ಟು ಆಕರ್ಷಿತವಾಗುತ್ತದೆ. ಅರ್ಥ ತಿಳಿಯದೆ ಪಠನ ಮಾಡುವುದಕ್ಕೂ, ಅರ್ಥ ತಿಳಿದು ಪಠನ ಮಾಡುವುದಕ್ಕೂ ಬಹಳಷ್ಟು ವ್ಯತ್ಯಾಸವಿದೆ.

ಸಂಸ್ಕೃತ ಶ್ಲೋಕದೊಡನೆ ಪ್ರತಿಯೊಂದು ಶ್ಲೋಕಕ್ಕೂ ಉತ್ತಮ ಭಾವಾರ್ಥವನ್ನು ಎರ್ತೂರು ಶ್ರೀ ಶಾಂತಿರಾಜಶಾಸ್ತ್ರಿಗಳವರು ಬರೆದು ಉಪಕಾರ ಮಾಡಿದ್ದಾರೆ. ಸಂಸ್ಕೃತ ಅಧ್ಯಯನವು ಕಡಿಮೆಯಾಗುತ್ತಿರುವ ಈ ಕಾಲದಲ್ಲಿ ಸಂಸ್ಕೃತ ಸ್ತೋತ್ರಗಳಿಗೆ ಕನ್ನಡದಲ್ಲಿ ಭಾವಾರ್ಥ ನೀಡುವ ಕಾರ್ಯ ಹೆಚ್ಚು ಹೆಚ್ಚು ನಡೆದರೆ ಸಂಸ್ಕೃತ ಬಾರದವರಿಗೆ ಮಹದುಪಕಾರ ಮಾಡಿದಂತಾಗುತ್ತದೆ.

1913 ರಷ್ಟು ಹಿಂದೆಯೇ ಶ್ರೀ ಶಾಂತಿರಾಜಶಾಸ್ತ್ರಿಗಳವರು ಬಹುಶಃ ಇದನ್ನು ಮನಗಂಡು ಈ ಗ್ರಂಥದ ಐದೂ ಸ್ತೋತ್ರಗಳಿಗೆ ಉತ್ತಮವಾದ ಭಾವಾರ್ಥವನ್ನು ಬರೆದು ಪ್ರಕಟಿಸಿದ್ದಾರೆ. ಅವರ ಜನ್ಮಶತಾಬ್ದಿಯ ಸಂದರ್ಭದಲ್ಲಿ 'ಭಕ್ತಮರಾದಿ ಪಂಚಸ್ತೋತ್ರ ಭಾವಪ್ರಕಾಶಿಕಾ' ಎಂಬ ಹೆಸರಿನಲ್ಲಿ ಪ್ರಕಟವಾಗಿರುವ ಕೃತಿಯ ಪುನರ್ ಮುದ್ರಣವಾಗುತ್ತಿರುವುದು ಅಭಿನಂದನಾರ್ಹವಾಗಿದೆ. ಕೃತಿಯ ಪುನರ್‌ಮುದ್ರಣದಲ್ಲಿ ನೆರವಾಗುತ್ತಿರುವ ಸಕಲರಿಗೆ ಸನ್ಮಂಗಲವಾಗಲಿ.

ಶ್ರವಣಬೆಳಗೊಳ — ಕರ್ಮಯೋಗಿ
೧೦-೩-೧೯೮೯ — ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ

ಪ್ರಕಾಶಕರ ವಿಜ್ಞಾಪನೆ

ಈ ಗ್ರಂಥದ ೫೦೦ ಪ್ರತಿಯನ್ನು ಹಿಂದೆ ೧೯೬೩ರಲ್ಲಿ ಶ್ರೀ ಶಾಂತಿರಾಜ ಶಾಸ್ತ್ರಿಗಳವರೇ ಸಮಾಜಬಾಂಧವರ ನಿತ್ಯ ಬಳಕೆಗಾಗಿ ಈ ಪಂಚಸ್ತೋತ್ರ ಗ್ರಂಥ ವನ್ನು ಭಾವಾರ್ಥ ಸಹಿತ ಮುದ್ರಣ ಮಾಡಿಸಿ "ಪಂಚಸ್ತೋತ್ರ ಭಾವ ಪ್ರಕಾಶಿಕಾ" ಎಂಬ ಶಿರೋನಾಮದಲ್ಲಿ ಪ್ರಕಾಶಪಡಿಸಿದ್ದರು.

ಈಗ ಈ ಗ್ರಂಥದ (೬೦೦ ಪ್ರತಿಗಳು) ದ್ವಿತೀಯ ಮುದ್ರಣಕ್ಕೆ ಬೆಳಗಾವಿಯ ಧರ್ಮಾಭಿಮಾನಿಗಳಾದ ಶ್ರೀ ಜೀವಂಧರ ಸಾತಪ್ಪ ಹಣಮಣ್ಣವರ ರವರು ಮುಂದಾಗಿರುವುದು ಶ್ಲಾಘನೀಯ. ಈ ಮುದ್ರಣದಲ್ಲಿ ಸಾಧ್ಯ ವಾದಷ್ಟೂ ತಪ್ಪು-ಒಪ್ಪುಗಳನ್ನು ಗಮನಿಸಿ ಸರಿಪಡಿಸಲಾಗಿದೆ. ಹಳೆಯ ಮಾದರಿಯ ಅಕ್ಷರಗಳಿಗೆ ಬದಲಾಗಿ ಆಧುನಿಕ ಮಾದರಿಯ ಅಕ್ಷರಗಳನ್ನು ಬಳಸಲಾಗಿದೆ. ಹಾಗೂ ಕೆಲವು ಕ್ಲಿಷ್ಟವಾದ ಪದಗಳ ಬದಲು ಸರಳ ಪದ ಗಳನ್ನು ಬಳಸಿ ಮೂಲಕೃತಿಗೆ ಯಾವ ರೀತಿಯ ಅಪಚಾರವೂ ಆಗದಂತೆ ವಿಷಯಾನುಕ್ರಮ ಒಂದನ್ನು ಸೇರಿಸಿ, ಸ್ವ॥ ಎ. ಶಾಂತಿರಾಜಶಾಸ್ತ್ರಿಗಳವರ ಮೂಲ ಮುನ್ನುಡಿಯೊಡನೆ ಭಕ್ತಾಮರಾದಿ ಪಂಚಸ್ತೋತ್ರ ಭಾವಪ್ರಕಾಶಿಕಾ ಎಂದು ಗ್ರಂಥದ ಶಿರೋನಾಮದ ಮಾರ್ಪಾಟಿನೊಂದಿಗೆ ಈ ಗ್ರಂಥವನ್ನು ಪ್ರಕಾಶಪಡಿಸಲಾಗಿದೆ.

ಈ ಮುದ್ರಣಕ್ಕೆ ಶ್ರೀಕ್ಷೇತ್ರ ಶ್ರವಣಬೆಳಗೊಳದ ಪರಮಪೂಜ್ಯ ಕರ್ಮ ಯೋಗಿ ಸ್ವಸ್ತಿಶ್ರೀ ಚಾರುಕೀರ್ತಿಭಟ್ಟಾರಕ ಸ್ವಾಮೀಜಿಯವರು 'ಶುಭಾಶೀ ರ್ವಚನ' ದಯಪಾಲಿಸಿರುತ್ತಾರೆ. ಅವರಿಗೆ ಈ ಟ್ರಸ್ಟ್ ಭಕ್ತಿಪೂರ್ವಕ ವಂದನೆ ಗಳನ್ನು ಸಮರ್ಪಿಸುತ್ತದೆ.

ಈ ಗ್ರಂಥದ ಪ್ರತಿಯು ನಮ್ಮಲ್ಲಿಲ್ಲದೆ ಪುನರ್ಮುದ್ರಣಕ್ಕೆ ತೊಂದರೆ ಯಾಗಿದ್ದಾಗ ಇದರ ಮೂಲ ಪ್ರತಿಯನ್ನೊದಗಿಸಿಕೊಟ್ಟ ತುಮಕೂರಿನ ಶ್ರೀ ಸಿ. ರಾಮಚಂದ್ರಸ್ವಾಧ್ವಾದಿ ಹಾಗೂ ಮೂಡಬಿದಿರೆಯ ಡಾ॥ ಎಂ. ಪಿ. ರವಿ ಕೀರ್ತಿರವರಿಗೂ, ಈ ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಲೋಟಸ್ ಪ್ರಿಂಟರ್ಸ್‌ನ ಮಾಲಿಕರವರಿಗೂ, ಅಂದವಾದ ರಕ್ಷಾಕವಚವನ್ನು ರಚಿಸಿಕೊಟ್ಟ ಬೆಂಗಳೂರಿನ ಶ್ರೀ ಆರ್. ಎಸ್. ಪದ್ಮರಾಜ್ ರವರಿಗೂ ಮತ್ತು ರಕ್ಷಾಕವಚವನ್ನು ಅಂದವಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಬಿ.ಬಿ.ಡಿ. ಪವರ್ ಪ್ರೆಸ್‌ನ ಮಾಲೀಕರಿಗೂ ಟ್ರಸ್ಟ್ ಕೃತಜ್ಞವಾಗಿದೆ.

ಬೆಂಗಳೂರು. ಪಂಡಿತರತ್ನ

೧೦-೩-೧೯೮೯ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್

ಸಮರ್ಪಣೆ

ರವಿವಾರ ದಿನಾಂಕ ೨೦-೧೦-೧೯೮೮ ರಂದು ಬೆಳಗಾವಿಯ ಮಾಣಿಕ ಬಾಗ ಬೋರ್ಡಿಂಗಿನ ಆವರಣದಲ್ಲಿ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಮತ್ತು ಬಿ. ಬಿ. ಪಾಟೀಲರುಗಳ ಶತಮಾನೋತ್ಸವವನ್ನು ಒಳ್ಳೆಯ ಉತ್ಸಾಹಪೂರ್ಣ ವಾತಾವರಣದಲ್ಲಿ ಆಚರಿಸಲಾಗುತ್ತಿತ್ತು. ಈ ಕಾರ್ಯಕ್ರಮ ವೀಕ್ಷಣೆಗಾಗಿ ಶ್ರೀ ಜೀವಂಧರ ಸಾತಪ್ಪ ಹಣಮಣ್ಣವರ ಮೆಲ್ಲಗೆ ಒಳ ಪ್ರವೇಶಿಸುತ್ತಲಿದ್ದರು. ಅವರನ್ನು ಕಂಡ ಶ್ರೀ ಅ. ನಾ. ಚಂದ್ರಕೀರ್ತಿಯವರು ವೇದಿಕೆಯಿಂದಿಳಿದು ಶಾಂತಿರಾಜಶಾಸ್ತ್ರಿಗಳ ಜನ್ಮಶತಮಾನೋತ್ಸವ ನಿಮಿತ್ತ ಅನೇಕ ಪುಸ್ತಕ ಪ್ರಕಟಣೆ ನೆರವೇರಬೇಕಾಗಿದೆ. ಕಾರಣ ತಮ್ಮ ಹಣದ ಸಹಾಯವಾದರೆ ಮಹದುಪಕಾರ ವಾಗುತ್ತದೆ ಎಂದು ಮೆಲುದನಿಯಲ್ಲಿ ಕೇಳುತ್ತಿದ್ದಂತೆಯೇ ಮರುಮಾತನಾಡದೆ ಎರಡು ಸಾವಿರದ ಐದುನೂರು ರೂಪಾಯಿಗಳ ದಾನವನ್ನು ಘೋಷಿಸಿ ಹಣ ವನ್ನು ಸಂದಾಯ ಮಾಡಿದ ವ್ಯಕ್ತಿಯನ್ನು ಸಮಾಜ ಮರೆಯುವಂತಿಲ್ಲ.

ಶ್ರೀ ಜೀವಂಧರ ಸಾತಪ್ಪ ಹಣಮಣ್ಣವರು ಬೆಳಗಾವಿಯ ಸಮೀಪದಲ್ಲಿ ರುವ ಅನಗೋಳದಲ್ಲಿ ೧೯೩೭ರಲ್ಲಿ ಜನ್ಮ ತಾಳಿದರು. ಪ್ರಾರಂಭದಿಂದಲೂ ಕೃಷಿಯನ್ನೇ ಅವಲಂಬಿಸಿದ ಇವರು ತಮ್ಮ ತಾರುಣ್ಯದಲ್ಲಿ ಕಂಟ್ರಾಕ್ಟರ್ ವೃತ್ತಿ ಯನ್ನು ಕೈಗೆತ್ತಿಕೊಂಡು ಯಶಸ್ಸು ಪಡೆದರು. ಈಗ ಇವರೊಬ್ಬ ಒಳ್ಳೆಯ ಕಂಟ್ರಾಕ್ಟುದಾರ ಎಂದೇ ಹೆಸರು ಗಳಿಸಿದ್ದಾರೆ.

ಶ್ರೀಯುತರು ಹಸನ್ಮುಖಿಗಳಾಗಿದ್ದು ಸ್ವಚ್ಛ ಮನಸ್ಸಿನವರಾಗಿದ್ದಾರೆ. ಸದೃಢ ದೇಹಹೊಂದಿದ ಇವರು ಎಲ್ಲರೊಂದಿಗೆ ಒಂದಾಗಿ ಸಮಾಜದ ಕೆಲಸಕ್ಕೂ ಕೈಗೂಡಿಸುತ್ತಲಿರುತ್ತಾರೆ. ಬೆಳಗಾವಿ ಜಿಲ್ಲಾ ತರುಣ ಸಂಘದ ಸಂಸ್ಥಾಪಕ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಾ ಬಂದ ಇವರು ೧೯೮೫ರಲ್ಲಿ ಸಂಘದ ಅಧ್ಯಕ್ಷ ಸ್ಥಾನಕ್ಕೇರಿದರು. ಅದರಂತೆ ಅನಗೋಳದಲ್ಲಿರುವ ಸಾಪ್ತಾಹಿಕ ಫಂಡನ್ನು ದೊಡ್ಡಪ್ರಮಾಣದಲ್ಲಿ ಬೆಳೆಸಿದ ಶ್ರೇಯಸ್ಸು ಇವರದಾಗಿದೆ. ಸಾಮಾಜಿಕ ಕಾರ್ಯಗಳಿಗೆ ಮಹತ್ವಕೊಡುವ ಇವರು ಧಾರ್ಮಿಕ ಕಾರ್ಯ ಗಳಿಗೂ ಅತ್ಯಂತ ಹೆಚ್ಚಿನ ಮಹತ್ವ ಕೊಡುತ್ತಾರೆ. ಯಾವುದೇ ಧಾರ್ಮಿಕ

ಸಭೆ ಸಮಾರಂಭಗಳಲ್ಲಿ ತಮ್ಮ ಸಾದಾ ವೇಷಭೂಷಣದಲ್ಲಿ ಕಾಣಿಸಿಕೊಳ್ಳುವ ಇವರು ಅನೇಕ ಧಾರ್ಮಿಕ ಸಂಸ್ಥೆಗೆ ಉದಾರ ಮನಸ್ಸಿನಿಂದ ಸಹಾಯ ಸಲ್ಲಿಸುತ್ತಾ ಬಂದಿದ್ದಾರೆ.

ಈ ಧರ್ಮಪ್ರೇಮಿಗಳು ೩೦-೧೦-೧೯೮೮ ರಂದು ಜರುಗಿದ ಶತಾಬ್ದಿ ಕಾರ್ಯಕ್ರಮದ ಜ್ಞಾಪಕಾರ್ಥವಾಗಿ ಈ

"ಭಕ್ತಾಮರಾದಿ ಪಂಚಸ್ತೋತ್ರ ಭಾವಪ್ರಕಾಶಿಕಾ"

ಎಂಬ ಗ್ರಂಥದ ದ್ವಿತೀಯ ಮುದ್ರಣದ ೬೦೦ ಪ್ರತಿಗಳಿಗೆ ಧನಸಹಾಯ ಮಾಡಿರುತ್ತಾರೆ. ಇದಕ್ಕಾಗಿ ಇವರಿಗೆ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ಅಭಾರಿಯಾಗಿದೆ.

ಇವರಿಗೆ ಭಗವಂತನು ಇನ್ನೂ ಹೆಚ್ಚಿನ ಆಯುರಾರೋಗ್ಯ, ಸಹಾಯ ಮಾಡುವ ಶಕ್ತಿ ದಯಪಾಲಿಸಲೆಂದು ಹಾರೈಸುವ,

ಪಂಡಿತರತ್ನ
ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್.

ವಿಜ್ಞಾಪನಾ

ಪೂರ್ವದಲ್ಲಿ ಶ್ರೀ ಮಾನತುಂಗಾಚಾರ್ಯರು, ಶ್ರೀಸಿದ್ಧಸೇನದಿವಾಕರರು, ಶ್ರೀ ವಾದಿರಾಜರು, ಶ್ರೀ ಧನಂಜಯಕವಿಯು, ಶ್ರೀ ಭೂಪಾಲರು ಎಂಬ ಈ ಐದು ಮಂದಿ ಕವಿ ಶ್ರೇಷ್ಠರು ಕ್ರಮವಾಗಿ ಭಕ್ತಾಮರಸ್ತೋತ್ರ, ಕಲ್ಯಾಣ ಮಂದಿರಸ್ತೋತ್ರ, ಏಕೀಭಾವಸ್ತೋತ್ರ, ವಿಷಾಪಹಾರಸ್ತೋತ್ರ, ಭೂಪಾಲ ಸ್ತೋತ್ರ ಎಂಬ ಈ ಐದು ಸ್ತೋತ್ರಗಳನ್ನು ತಮ್ಮ ಆಪತ್ಪರಿಹಾರಾರ್ಥವಾಗಿ ಭವರೋಗವೈದ್ಯನಾದ ಶ್ರೀ ಜಿನೇಶ್ವರನನ್ನು ತಮ್ಮ ಶುದ್ಧಾಂತಃಕರಣದಿಂದ ಸ್ಮರಿಸುತ್ತಾ ಭಕ್ತಿರಸದಲ್ಲಿ ಮಗ್ನರಾಗಿ ರಚಿಸಿರುತ್ತಾರೆ.

ಇವರಲ್ಲಿ ಮೊದಲನೇ ಮಾನತುಂಗಾಚಾರ್ಯರಿಗೆ ಭೋಜರಾಜನು ೪೮ ಬಂಧನಗಳಿಂದ ಮೂರು ಮೂರಾವರ್ತಿ ಉಪಸರ್ಗವನ್ನು ಮಾಡಿಸಿದನು. ಈ ವಿಪತ್ಪರಿಹಾರಕ್ಕಾಗಿ ಯಂತ್ರ ಮಂತ್ರಗಳಿಂದ ಕೂಡಿದ ೪೮ ಶ್ಲೋಕ ಪರಿಮಿತ ವಾದ ಭಕ್ತಾಮರಸ್ತೋತ್ರವನ್ನು ಮಾಡಿ, ತಮ್ಮ ಉಪಸರ್ಗವನ್ನು ನಿವಾರಣೆ ಮಾಡಿಕೊಂಡು ರಾಜನಿಂದಲೂ ಪೂಜಿಸಲ್ಪಟ್ಟರು. ಎರಡನೇ ಸಿದ್ಧಸೇನ ದಿವಾಕರರು ಪಾಂಡುರೋಗ ನಿವಾರಣೆಗಾಗಿ ಕಲ್ಯಾಣಮಂದಿರಸ್ತೋತ್ರವನ್ನು ಮಾಡಿ ಇದರ ಮಾಹಾತ್ಮ್ಯದಿಂದ ಆಪತ್ಪರಿಹಾರವಾಗಿ ಬಂಗಾರದಂತೆ ಶರೀರ ವುಳ್ಳವರಾಗಿ ರಾಜಪೂಜಿತರಾದರು. ನಾಲ್ಕನೇ ಧನಂಜಯಕವಿಯು ವಿಷ ನಿವಾರಣಾರ್ಥವಾಗಿ ವಿಷಾಪಹಾರಸ್ತೋತ್ರವನ್ನು ರಚಿಸಿದನು. (ಈ ಕವಿಗಳ ವಿಸ್ತಾರವಾದ ಕಥೆಗಳನ್ನು ಪ್ರಕಾಶಪಡಿಸಬೇಕೆಂದು ಉದ್ದೇಶವಿತ್ತು. ಆದರೆ ಕೆಲವು ಕವಿಗಳ ಕಥೆಗಳು ದೊರೆಯದಿದ್ದ ಕಾರಣ ಶ್ರೀ ಮಾನತುಂಗಾಚಾರ್ಯರ ವಿಷಯವು ಸ್ವಲ್ಪ ಮಾತ್ರ ಪ್ರಕಾಶಿಸಲ್ಪಟ್ಟಿದೆ. ಮಿಕ್ಕ ಕಥೆಗಳು ಸಂದರ್ಭಾನು ಗುಣವಾಗಿ ಮುಂದಕ್ಕೆ ಪ್ರಕಾಶಿಸಲ್ಪಡುವುವು).

ಈ ಪಂಚಸ್ತೋತ್ರಗಳು ನಮ್ಮ ಜೈನಮತಸ್ಥರಿಗೆಲ್ಲಾ ಬಹಳ ಪೂಜ್ಯ ವಾದವುಗಳಾಗಿವೆ. ಅನೇಕರು ಬಹಳ ಶ್ರದ್ಧೆಯಿಂದ ಪ್ರತಿನಿತ್ಯವೂ ಪಠನ ಮಾಡುತ್ತಾರೆ. ಅನೇಕರು ಇದರಿಂದುಂಟಾಗುವ ಫಲವನ್ನು ಪಡೆದಿರುತ್ತಾರೆ. ಭಕ್ತಿರಸದಿಂದ ಭರಿತವಾದ ಈ ಸ್ತೋತ್ರಗಳನ್ನು ನೋಡಿ ಭಿನ್ನಮತೀಯರು

ಕೂಡ ತಲೆ ತೂಗುತ್ತಾರೆ. ಆದರೆ ನಮ್ಮ ಸಮಾಜದಲ್ಲಿ ಅನೇಕರಿಗೆ ಸಂಸ್ಕೃತ ವಿದ್ಯೆಯು ಅಪರಿಚಿತವಾಗಿರುವುದರಿಂದ ಈ ಸ್ತೋತ್ರಗಳಲ್ಲಿ ಯಾವ ಅಮೃತವು ತುಂಬಿದೆಯೆಂದು ತಿಳಿಯಲಾರರು. ಅನೇಕರು ಅಶುದ್ಧ ಪ್ರತಿಗಳನಿಟ್ಟುಕೊಂಡು ಅಶುದ್ಧವಾಗಿಯೇ ಪಠಿಸುವರು. "ನಹಿಮಂತ್ರೋಕ್ಷರನ್ಯೂನೋನಿಹಂತಿವಿಷ ವೇದನಾಂ" ಅಂದರೆ ವಿಷವನ್ನು ಪರಿಹರಿಸುವ ಮಂತ್ರದಲ್ಲಿ ಅಕ್ಷರವು ಹೆಚ್ಚು ಕಡಿಮೆಯಾಗಿದ್ದರೆ ವಿಷ ನಿವಾರಣೆಯಾಗುವುದಿಲ್ಲ. ಅದರಂತೆ ಅಶುದ್ಧವಾಗಿ ಪಠಿಸುವುದರಿಂದ ಹೆಚ್ಚಿನ ಫಲವುಂಟಾಗಲಾರದು. ಈ ನ್ಯೂನತೆಗಳನ್ನು ಹೋಗಲಾಡಿಸಿ, ಈ ಸ್ತೋತ್ರಗಳು ಎಲ್ಲರಿಗೂ ಉಪಯುಕ್ತವಾಗುವಂತೆ ವಿದ್ವಾನ್, ವೇ. ಶ್ರೀನಿವಾಸಯ್ಯಂಗಾರ್ಯರ ಸಂಪೂರ್ಣ ಸಹಾಯದಿಂದ "ಪಂಚಸ್ತೋತ್ರ ಭಾವಪ್ರಕಾಶಿಕಾ" ಎಂಬೀ ಪುಸ್ತಕವನ್ನು ಪ್ರಕಾಶಪಡಿಸಿದ್ದೇನೆ. ಇದರಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥಿಸುವ,

ಮೈಸೂರು, ಸಮಾಜದಾಸ,
ವೀರಶಕ ೨೪೫೯. ಎ. ಶಾಂತಿರಾಜಯ್ಯ

ಶ್ರೀ ಮಾನತುಂಗಾಚಾರ್ಯರು

ವೀರಶಕ ಹನ್ನೊಂದನೇ ಶತಮಾನದಲ್ಲಿ ಉಜ್ಜಯಿನೀ ನಗರದಲ್ಲಿ ರಾಜ್ಯ ಭಾರವನ್ನು ಮಾಡುತ್ತಿದ್ದ ಭೋಜಮಹಾರಾಜನ ಆಸ್ಥಾನವು ಅನೇಕ ವಿದ್ವಾಂಸರುಗಳಿಂದಲೂ, ಕವಿಗಳಿಂದಲೂ ಅಲಂಕರಿಸಲ್ಪಟ್ಟಿದ್ದಿತು. ಈ ವಿದ್ವದ್ಗೋಷ್ಠಿಯಲ್ಲಿ ಕಾಳಿದಾಸನು ತಿಲಕಪ್ರಾಯನಾಗಿದ್ದನು. ಈತನು ಸಕಲ ಶಾಸ್ತ್ರಪುರಾಣೇತಿಹಾಸಗಳನ್ನು ತಿಳಿದವನಾಗಿಯೂ, ಕವಿ ಶಿರೋಮಣಿಯಾಗಿಯೂ, ವಾದಚತುರನಾಗಿಯೂ ಇದ್ದನು. ಈತನ ಪಾಂಡಿತ್ಯದ ಕೀರ್ತಿಯು ನಾಲ್ಕು ದಿಕ್ಕುಗಳಲ್ಲಿಯೂ ಹರಡಿ, ಇತರ ಮಹಾಪಂಡಿತರ ಶಿರಃಕಂಪನೆಯನ್ನು ಮಾಡಿಸುತ್ತಿತ್ತು. ಸಾಹಿತ್ಯವಾರಿಧಿಯಹಾದ ಭೋಜ ಮಹಾರಾಜನು ಈ ಕವಿಯ ರಸಿಕತ್ವದಿಂದ ಆನಂದ ಭರಿತನಾಗಿ ಈತನನ್ನು ಕೇವಲ ಆಸ್ಥಾನ ಕವಿಯನ್ನಾಗಿಯೇ ಭಾವಿಸದೆ ತನ್ನ ಪರಮ ಮಿತ್ರನನ್ನಾಗಿ ಎಣಿಸುತ್ತಿದ್ದನು. ಈತನಿಗೆ ಕಾಳಿಕಾದೇವಿಯು ಪ್ರತ್ಯಕ್ಷಳಾಗಿ ಸಕಲ ವಿದ್ಯೆಗಳಲ್ಲಿಯೂ ಪಾರಂಗತನಾಗುವಂತೆ ವರವನ್ನು ಕೊಟ್ಟಿದ್ದುದರಿಂದ ಈತನು ವರಕವಿಯೆಂದು ಲೋಕದಲ್ಲಿ ಪ್ರಖ್ಯಾತನಾಗಿದ್ದನು. ಭೋಜನ ಕಾಲದಲ್ಲಿ ಸಂಸ್ಕೃತವಿದ್ಯೆಯು ಉನ್ನತಸ್ಥಿತಿಯಲ್ಲಿದ್ದುದರಿಂದ ಸಂಸ್ಕೃತ ಪಂಡಿತರನೇಕರು ಹಿಂದೂಸ್ಥಾನದಲ್ಲೆಲ್ಲಾ ತುಂಬಿದ್ದರು. ಪ್ರತಿ ನಿತ್ಯದಲ್ಲೂ ಭೋಜರಾಜನ ಆಸ್ಥಾನದಲ್ಲಿ ತಮ್ಮ ವಿದ್ಯಾಮಹಿಮೆಯನ್ನು ಪ್ರಚುರಗೊಳಿಸಿ ಸನ್ಮಾನವನ್ನು ಹೊಂದುವುದಕ್ಕೆ ಮಹಾ ಮಹಾ ವಿದ್ವಾಂಸರುಗಳು ಬರುತ್ತಲೇ ಇದ್ದರು. ಇಂತಹ ವಿದ್ವಾಂಸರುಗಳೂ ಕೂಡ ಕಾಳಿದಾಸನ ಆಶ್ರಯವನ್ನು ಮಾಡಿ ಭೋಜರಾಜನಿಂದ ಸನ್ಮಾನವನ್ನು ಹೊಂದುತ್ತಿದ್ದರು. ಕಾಳಿದಾಸನು ಬರೆದಿರುವ ಶಾಕುಂತಳ ನಾಟಕ, ರಘುವಂಶ ಕಾವ್ಯವೇ ಮೊದಲಾದ ಉದ್ಗ್ರಂಥಗಳು ಈಗಲೂ ಆತನ ಕವಿತಾ ಮಹಿಮೆಯನ್ನು ಪ್ರದರ್ಶನಗೊಳಿಸುತ್ತಿವೆ.

ಒಂದಾನೊಂದು ದಿವಸ ಉಜ್ಜಯನೀ ಪಟ್ಟಣದ ಪ್ರಸಿದ್ಧ ವರ್ತಕನಾದ ಸುದತ್ತನೆಂಬ ಶ್ರೇಷ್ಠಿಯು ಮನೋಹರನೆಂಬ ತನ್ನ ಮಗನನ್ನು ಕರೆದುಕೊಂಡು ಭೋಜರಾಜನ ಸಭೆಗೆ ಹೋದನು. ಮಹಾರಾಜನು ಮರ್ಯಾದೆಯಿಂದ ಈ

ಶ್ರೇಷ್ಠಿಯನ್ನು ಕುಳ್ಳಿರಿಸಿ ಕುಶಲಪ್ರಶ್ನೆಯನ್ನು ಮಾಡಿದ ನಂತರ, ಮಹಾರಾಜನು ಶ್ರೇಷ್ಠಿಯನ್ನು ಕುರಿತು ನಿನ್ನ ಮಗನಿಗೇನಾದರೂ ವಿದ್ಯಾಭ್ಯಾಸವನ್ನು ಮಾಡಿಸಿದ್ದೀಯೋ, ಎಂಬುದಾಗಿ ಕೇಳಿದನು. ಸುದತ್ತನು ಮಹಾರಾಜನೇ! ಈ ಬಾಲಕನು ಈಗತಾನೆ ವಿದ್ಯಾಭ್ಯಾಸಕ್ಕೆ ಆರಂಭಿಸಿ ನಾಮಮಾಲಾ ಎಂಬ ಗ್ರಂಥದ ಶ್ಲೋಕಗಳನ್ನು ಮಾತ್ರ ಬಾಯಿಂಪಾಠ ಮಾಡಿರುತ್ತಾನೆ. ಈ ಅಶ್ರುತಪೂರ್ವವಾದ ಗ್ರಂಥದ ಹೆಸರನ್ನು ಕೇಳಿ ಭೋಜರಾಜನು ನಾಮಮಾಲಾ ಎಂಬ ಗ್ರಂಥದ ಹೆಸರನ್ನು ಈವರೆಗೆ ನಾನು ಕೇಳಲಿಲ್ಲ. ಇದನ್ನು ಯಾರು ರಚಿಸಿದರೆಂದು ನಿನಗೇನಾದರೂ ತಿಳಿಯುವುದೋ ಎಂದು ಶ್ರೇಷ್ಠಿಯನ್ನು ಕುರಿತು ಪ್ರಶ್ನೆ ಮಾಡಿದನು. ಶ್ರೇಷ್ಠಿಯು ರಾಜನನ್ನು ಕುರಿತು ಮಹಾರಾಜನೆ! ತಮ್ಮ ನಗರದಲ್ಲಿಯೇ ಸ್ಯಾದ್ವಾದ ವಿದ್ಯಾಪಾರಂಗತನಾದ ಶ್ರೀ ಧನಂಜಯ ಮಹಾಕವಿಯು ಇರುತ್ತಾನೆ. ಈ ಗ್ರಂಥವು ಆ ಧನಂಜಯ ಕವಿಯಿಂದ ರಚಿಸಲ್ಪಟ್ಟದ್ದಾಗಿದೆ, ಎಂದು ಹೇಳಿದನು. ಈ ಮಾತನ್ನು ಕೇಳಿ ಸಂಸ್ಕೃತ ವಿದ್ಯಾರಸಿಕನಾದ ಭೋಜರಾಜನು ಶ್ರೇಷ್ಠಿಯನ್ನು ಕುರಿತು ಸುದತ್ತನೆ! ಇಂತಹ ಮಹಾ ವಿದ್ವಾಂಸನ ಭೇಟಿಯನ್ನು ನನಗೆ ಈವರೆಗೆ ನೀನು ಮಾಡಿಸದೆ ಇರಬಹುದೆ, ಎಂದು ಹೇಳಿದನು.

ಇಷ್ಟರಲ್ಲಿ ಕಾಳಿದಾಸನು ಧನಂಜಯನ ಪ್ರಶಂಸೆಯನ್ನು ಕೇಳಿ ಅಸಹನೆಯಿಂದ ರಾಜನನ್ನು ಕುರಿತು ಮಹಾರಾಜನೆ! ಆ ಧನಂಜಯನು ಸಾಮಾನ್ಯ ವರ್ತಕನಾಗಿರುವುದರಿಂದ ಅವನಲ್ಲಿ ಅಂತಹ ವಿದ್ಯೆಯು ಎಲ್ಲಿ ಬಂತು, ಎಂದು ಹೇಳಿದನು. ಆದರೆ ಮಹಾರಾಜನು ವಿದ್ಯಾರಸಿಕನಾದುದರಿಂದ ಈ ಕಾಳಿದಾಸನ ಮಾತನ್ನು ಕೇಳಿಯೂ ಕೇಳದ ಹಾಗೆ ನಟಿಸಿ, ತನ್ನ ಮಂತ್ರಿಯನ್ನು ಕರೆದು ಧನಂಜಯ ಕವಿಯನ್ನು ಕರೆದುಕೊಂಡು ಬರುವಂತೆ ಆಜ್ಞಾಪಿಸಿದನು. ಸ್ವಲ್ಪ ಸಮಯದಲ್ಲಿಯೇ ಧನಂಜಯನು ಸಭಾಸ್ಥಾನಕ್ಕೆ ಬಂದು ಸೇರಿದನು. ಈ ಧನಂಜಯ ಕವಿಯು ಆಶೀರ್ವಾದ ರೂಪವಾದ ಒಂದು ಸುಂದರ ಶ್ಲೋಕವನ್ನು ಹೇಳಿ ಎಲ್ಲಾ ಸಭಿಕರನ್ನು ಆನಂದ ಪರವಶರನ್ನಾಗಿ ಮಾಡಿದನು. ಮಹಾರಾಜನು ಧನಂಜಯನನ್ನು ಸತ್ಕಾರಪೂರ್ವಕವಾಗಿ ಕುಳ್ಳಿರಿಸಿ ಕುಶಲ ಪ್ರಶ್ನಾನಂತರದಲ್ಲಿ ತಾವು ದೊಡ್ಡ ಪ್ರಖ್ಯಾತ ವಿದ್ವಾಂಸರೆಂದು ಕೇಳಿದ್ದೇನೆ. ಆದರೆ ಈವರೆಗೆ ತಮ್ಮ ಭೇಟಿಯು ನನಗೆ ಸಿಕ್ಕದಿರುವುದು ಆಶ್ಚರ್ಯವಾಗಿದೆ ಎಂದು ಹೇಳಿದನು.

ಧನಂಜಯನು ಮುಗುಳುನಗೆಯಿಂದ ಎಲೈ ಕೃಪಾನಾಥನೆ! ಎಷ್ಟರವರೆಗೆ ಪುಣ್ಯದ ಉದಯವಾಗುವುದಿಲ್ಲವೋ ಅಷ್ಟರವರೆಗೆ ತಮ್ಮ ದರ್ಶನವು ಹೇಗೆ ಲಭಿಸೀತು? ಈ ದಿವಸ ತಮ್ಮ ಸಾಕ್ಷಾತ್ ದರ್ಶನವನ್ನು ಮಾಡಿ ಧನ್ಯನಾದೆನು, ಎಂದು ಹೇಳಿದನು.

ನಂತರ ಮಹಾರಾಜನು ಧನಂಜಯನನ್ನು ಕುರಿತು, ನೀವು ಇಷ್ಟು ಪ್ರಖ್ಯಾತ ಪಂಡಿತರಾಗಿರುತ್ತೀರಿ, ನೀವು ಇಷ್ಟು ಸಣ್ಣ ನಾಮಮಾಲಾ ಗ್ರಂಥವನ್ನು ರಚಿಸಿರುವುದು ನಿಮ್ಮ ವಿದ್ವತ್ವಕ್ಕೆ ದೊಡ್ಡ ಮಾತಲ್ಲ, ಇನ್ನೂ ಯಾವುದಾದರೂ ದೊಡ್ಡ ಗ್ರಂಥವನ್ನು ರಚಿಸಿರಬಹುದು, ಎಂದು ಹೇಳಿದನು. ಈ ಮಾತನ್ನು ಕೇಳಿ ಕಾಳಿದಾಸನು ಅಸಹನೆಯಿಂದ ರಾಜನನ್ನು ಕುರಿತು ಎಲೈ ಮಹಾರಾಜನೆ! ಈ ನಾಮಮಾಲಾ ಎಂಬ ಗ್ರಂಥವು ನಮ್ಮದಾಗಿದೆ, ಇದರ ನಿಜವಾದ ಹೆಸರು ನಾಮಮಂಜರೀ ಎಂಬುದಾಗಿದೆ. ಇಂತಹ ಗ್ರಂಥವನ್ನು ಬ್ರಾಹ್ಮಣರೇ ಹೊರತು ಈ ಒಡವರ್ತಕನು ರಚಿಸಲು ಹೇಗೆ ಶಕ್ತನಾದಾನು? ಎಂದು ಹೇಳಿದನು. ಈ ಮಾತನ್ನು ಕೇಳಿ ಧನಂಜಯನು ಅಸಮಾಧಾನದಿಂದ ರಾಜನನ್ನು ಕುರಿತು ಮಹಾರಾಜನೆ! ಈ ಮಾತು ಸರ್ವಥಾ ಸುಳ್ಳಾಗಿದೆ, ನಾನೇ ಈ ಗ್ರಂಥವನ್ನು ಬಾಲಕರಿಗೆ ಪಾಠ ಹೇಳುವುದಕ್ಕಾಗಿ ರಚಿಸಿದ್ದಾಗಿರುತ್ತದೆಂಬ ವಿಚಾರವು ಎಲ್ಲರಿಗೂ ಗೊತ್ತಿದೆ, ತಾವು ಪುಸ್ತಕವನ್ನು ತರಿಸಿ ನೋಡಿದರೆ ಸಮಾಧಾನವಾಗಬಹುದು, ಈ ಕವಿಗಳು ನನ್ನ ಹೆಸರನ್ನು ಲೋಪಪಡಿಸಿ ನಾಮಮಂಜರೀ ಎಂಬ ತಮ್ಮ ಹೆಸರನ್ನು ಇಟ್ಟಿರುತ್ತಾರೆ, ಎಂದು ಹೇಳಿದನು.

ಇದನ್ನು ಕೇಳಿ ಮಹಾರಾಜನು ಬ್ರಾಹ್ಮಣರನ್ನು ಕುರಿತು, ನೀವು ಬಹಳ ಅನರ್ಥ ಮಾಡಿದಿರಿ, ಇತರರ ಕೃತಿಯನ್ನು ತಮ್ಮದೆಂದು ಹೇಳುವುದು ಚೋರಿ ಮಾಡಿದಂತಾಗುವುದಿಲ್ಲವೇ! ಎಂದು ಹೇಳಿದನು. ಈ ಮಾತನ್ನು ಕೇಳಿ ಬ್ರಾಹ್ಮಣರ ಕಡೆಯಿಂದ ಕಾಳಿದಾಸನು ರಾಜನನ್ನು ಕುರಿತು, ಮಹಾರಾಜನೆ! ಈ ಧನಂಜಯನು ಸ್ವಲ್ಪ ದಿವಸಗಳಿಂದ ಮಾನತುಂಗ ಮುನಿಯ ಸಮೀಪದಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದನು. ಇವನಲ್ಲಿ ವಿದ್ವತ್ವದ ಗಂಧವೂ ಇರಲಿಲ್ಲ. ಇಂತಹವನಲ್ಲಿ ಗ್ರಂಥರಚನೆ ಮಾಡುವಷ್ಟು ಪಾಂಡಿತ್ಯವು ಎಲ್ಲಿಬಂತು? ಇದರ ಪರೀಕ್ಷಾರ್ಥವಾಗಿ ತಾವು ಇವನ ಗುರುವನ್ನೇ ಕರೆಯಿಸಿ ನನ್ನೊಡನೆ ವಾಗ್ವಾದ

ಮಾಡಿಸಿದರೆ ಇವನ ಪಾಂಡಿತ್ಯವು ತಮಗೆ ಗೊತ್ತಾಗುವುದು, ಎಂದು ಹೇಳಿದನು. ತನ್ನ ಗುರುವಿಗೆ ತಿರಸ್ಕಾರವಾದ ಈ ಮಾತನ್ನು ಕೇಳಿ ಧನಂಜಯನು ಕೋಪಿಷ್ಠನಾಗಿ ವಿದ್ವಾಂಸರನ್ನು ಕುರಿತು, ನಮ್ಮ ಗುರುಪಾದದಲ್ಲಿ ವಾದ ಮಾಡುವ ವಿದ್ವಾಂಸನು ಯಾರಿದ್ದಾನೆ ? ನಿಮ್ಮಲ್ಲಿ ಎಷ್ಟು ವಿದ್ವತ್ವವು ಇದೆ ಎಂಬುದನ್ನು ನಾನು ನೋಡುತ್ತೇನೆ, ನನ್ನಲ್ಲಿ ವಾದವನ್ನು ಮಾಡಿದನಂತರ ಗುರುಗಳ ಹೆಸರನ್ನು ಎತ್ತಬೇಕು, ಎಂದು ಹೇಳಿದನು.

ಇಷ್ಟಾದಮೇಲೆ ಕಾಳಿದಾಸನಿಗೂ, ಧನಂಜಯನಿಗೂ, ವಿವಿಧ ವಿಷಯಗಳಲ್ಲಿ ಶಾಸ್ತ್ರಾರ್ಥವಾಯಿತು. ಧನಂಜಯನ ಸ್ಯಾದ್ವಾದಮಯವಾದ ವಾದದಿಂದ ಅನೇಕಾವರ್ತಿ ಕಾಳಿದಾಸನು ನಿರುತ್ತರನಾಗಿ ರಾಜನನ್ನು ಕುರಿತು, ಮಹಾರಾಜನೆ ! ನಾನು ಇವನ ಗುರುವಾದ ಮಾನತುಂಗನೊಡನೆ ವಾದಮಾಡುತ್ತೇನೆಂದು ಹೇಳಿದನು. ಯದ್ಯಪಿ ಧನಂಜಯನ ಪಕ್ಷವು ಬಲವಾದದ್ದೆಂದು ರಾಜನು ತಿಳಿದರೂ ಕಾಳಿದಾಸನ ಸಂತೋಷಾರ್ಥವಾಗಿಯೂ, ಶಾಸ್ತ್ರಾರ್ಥವನ್ನು ನೋಡಬೇಕೆಂಬುದಾಗಿಯೂ, ಶ್ರೀ ಮಾನತುಂಗಾಚಾರ್ಯರನ್ನು ಕರೆದುಕೊಂಡು ಬರುವಂತೆ ತನ್ನ ದೂತರನ್ನು ಕಳುಹಿಸಿದನು. ಆ ದೂತರು ರಾಜನ ಆಜ್ಞಾನುಸಾರವಾಗಿ ಮಾನತುಂಗಾಚಾರ್ಯರ ಸಮೀಪಕ್ಕೆ ಹೋಗಿ ಭಗವನ್ ! ಮಾಲವಾಧಿಪತಿಯಾದ ಭೋಜ ಮಹಾರಾಜನು ತಮ್ಮ ಪ್ರಖ್ಯಾತಿಯನ್ನು ಕೇಳಿ ತಮ್ಮ ದರ್ಶನವನ್ನು ಮಾಡಬೇಕೆಂಬ ಅಭಿಲಾಷೆಯುಳ್ಳವನಾಗಿ ಆಸ್ಥಾನಕ್ಕೆ ದಯಮಾಡಬೇಕೆಂದು ನಮ್ಮ ಮೂಲಕ ವಿಜ್ಞಾಪಿಸುತ್ತಾನೆ, ಆದುದರಿಂದ ದಯವಿಟ್ಟು ಬರಬೇಕೆಂದು ವಿಜ್ಞಾಪಿಸಿಕೊಂಡರು.

ಈ ಮಾತನ್ನು ಕೇಳಿ ಮಾನತುಂಗಾಚಾರ್ಯರು ದೂತರನ್ನು ಕುರಿತು ದೂತರುಗಳೇ ! ನಮಗೆ ರಾಜನ ಆಸ್ಥಾನಕ್ಕೆ ಬಂದು ಏನನ್ನು ಪಡೆಯಬೇಕಾಗಿದೆ ? ನಾವು ಯಾರಲ್ಲಿಯೂ ಯಾವ ಪ್ರಕಾರವಾದ ಯಾಚನೆಯನ್ನೂ ಮಾಡುವುದಿಲ್ಲ. ಮತ್ತೇತಕ್ಕೆ ರಾಜನು ನಮ್ಮನ್ನು ಅಪೇಕ್ಷಿಸುವನು ? ಎಂದು ಹೇಳಿದರು. ದೂತರು ಹೋಗಿ ಈ ಮಾತನ್ನು ರಾಜನಿಗೆ ತಿಳಿಸಿದರು. ಇದರ ಮೇಲೆ ರಾಜನು ಪುನಃ ಸೇವಕರನ್ನು ಪೂರ್ವದಂತೆ ಹೇಳಿ ಕಳುಹಿಸಿದನು. ಎರಡನೆಯ ಬಾರಿಯೂ ಮುನಿಗಳು ಮೊದಲಿನಂತೆ ಹೇಳಿ ದೂತರನ್ನು ಹಿಂತಿರುಗಿ ಕಳುಹಿಸಿದರು. ಈ ಪ್ರಕಾರ ಮೂರು ನಾಲ್ಕು ಬಾರಿ ಸೇವಕರನ್ನು ಕಳುಹಿಸಿದರೂ

ಮುನಿಗಳು ಬರಲಿಲ್ಲ. ಐದನೆಯಾವರ್ತಿ ಮಹಾರಾಜನು ಕೋಪವುಳ್ಳವನಾಗಿ ಸೇವಕರನ್ನು ಕುರಿತು ಆ ಮಾನತುಂಗಾಚಾರ್ಯರು ನಮ್ಮ ಮಾತಿನಪ್ರಕಾರ ಬಾರದಿದ್ದರೆ ಹಿಡಿದು ಬಲಾತ್ಕಾರವಾಗಿ ತರಬೇಕು ಎಂದು ಆಜ್ಞಾಪಿಸಿದನು.

ಅನೇಕಾವರ್ತಿ ಹೋಗಿದ್ದ ದೂತರು ಈ ಆಜ್ಞೆಯನ್ನೇ ಹಾರೈಸುತ್ತಿದ್ದರು. ಕೂಡಲೇ ಆ ಸೇವಕರು ಹೋಗಿ ಮುನಿಗಳನ್ನು ಬಲಾತ್ಕಾರದಿಂದ ಹಿಡಿದು ತಂದು ಸಭೆಯಲ್ಲಿ ನಿಲ್ಲಿಸಿದರು. ಆಗ ಉಪಸರ್ಗವಾಯಿತೆಂದು ತಿಳಿದು ಮುನಿಗಳು ಮೌನಧಾರಣೆಯನ್ನು ಮಾಡಿದರು. ರಾಜನು ಈ ಮುನಿಗಳೇನಾದರು ಹೇಳಬಹುದೆಂಬುದಾಗಿ ಕುತೂಹಲವುಳ್ಳವನಾಗಿದ್ದನು. ಆದರೆ ಇವರ ಮುಖದಿಂದ ಒಂದು ಅಕ್ಷರವಾದರೂ ಹೊರಡಲಿಲ್ಲ. ಅಷ್ಟರಲ್ಲಿ ಕಾಳಿದಾಸನೇ ಮೊದಲಾದ ಅನ್ಯವಿದ್ವಾಂಸರು ರಾಜನನ್ನು ಕುರಿತು ಈ ಮುನಿಯು ಕರ್ನಾಟಕ ದೇಶದಿಂದ ಹೊರಟು ಇಲ್ಲಿಗೆ ಬಂದಿದ್ದಾನೆ, ಇವನು ಮಹಾ ಮೂರ್ಖನು, ರಾಜಸಭೆಯನ್ನು ನೋಡಿ ಭಯಭೀತನಾಗಿ ಯಾವುದನ್ನೂ ಹೇಳುವುದಿಲ್ಲ, ಎಂದು ಪರಿಹಾಸ್ಯ ಮಾಡಿದರು.

ಇದರನಂತರ ಅನೇಕರು ಮುನಿಗಳನ್ನು ಕುರಿತು ತಾವು ಸಾಧುಗಳಾಗಿದ್ದೀರಿ ಈಗ ಏನಾದರು ತಾವು ಧರ್ಮೋಪದೇಶವನ್ನು ಹೇಳಬೇಕು, ರಾಜನು ವಿದ್ಯಾರಸಿಕನಾಗಿದ್ದಾನೆ, ಕೇಳಿ ಬಹಳ ಸಂತುಷ್ಟನಾಗುವನು, ಎಂದು ಪ್ರಾರ್ಥಿಸಿಕೊಂಡರು. ಆದರೆ ಮುನಿಗಳು ಪಂಚಪರಮೇಷ್ಠಿಗಳ ಧ್ಯಾನದಲ್ಲಿ ಮಗ್ನರಾಗಿದ್ದರು. ಎಲ್ಲರೂ ಹೇಳಿ ಹೇಳಿ ಸೋತುಹೋದರು. ಆದರೆ ಇವರ ಪ್ರಾರ್ಥನೆಯು ಏನೂ ಫಲಕಾರಿಯಾಗಲಿಲ್ಲ. ಇದರ ಮೇಲೆ ರಾಜನು ಕ್ರೋಧಿತನಾಗಿ ನಲ್ವತ್ತೆಂಟು ಆವರಣ(ಸುತ್ತು)ಗಳ ಮಧ್ಯದಲ್ಲಿರುವ ಬಂಧೀಗೃಹದಲ್ಲಿ ಮುನಿಗಳಿಗೆ ಬೇಡಿ ಹಾಕಿಸಿ ಇರಿಸಿದನು. ಮತ್ತು ಪ್ರತಿಯೊಂದು ಆವರಣದ ದ್ವಾರಕ್ಕೂ ಭದ್ರವಾದ ಬೀಗವನ್ನು ಹಾಕಿಸಿ ಒಬ್ಬೊಬ್ಬ ಪಹರೆದಾರರನ್ನು ಕಾವಲಿರಿಸಿದನು.

ಶ್ರೀ ಮಾನತುಂಗಾಚಾರ್ಯರು ಹೀಗೆ ಮೂರು ದಿವಸ ಪರ್ಯಂತ ಬಂಧನದಲ್ಲಿದ್ದು ನಾಲ್ಕನೆಯ ದಿವಸ ಯಂತ್ರ, ಮಂತ್ರ ಋದ್ಧಿಗರ್ಭಿತವಾದ ಆದಿನಾಥಸ್ತೋತ್ರ (ಭಕ್ತಾಮರಸ್ತೋತ್ರ)ವನ್ನು ರಚಿಸಿ ಪಠಿಸಿದ ಹಾಗೆಲ್ಲಾ

ಬೀಗಗಳೂ ಬೇಡೀ ಸರಪಣಿಗಳೂ ಒಡೆದು ಚೂರುಚೂರಾದವು. ಬಾಗಿಲುಗಳೆಲ್ಲಾ ಸ್ವಭಾವವಾಗಿ ತೆರೆದವು. ಮುನಿಶ್ರೇಷ್ಠರು ಕಾರಾಗೃಹದಿಂದ ಹೊರಕ್ಕೆ ಬಂದರು. ಇವರನ್ನು ನೋಡಿ ಪಹರೆದಾರರು ನಾವು ಬಂಧಿಸುವುದರಲ್ಲಿ ಏನಾದರೂ ವ್ಯತ್ಯಾಸವಾಗಿರಬಹುದು. ರಾಜನು ತಿಳಿದರೆ ದಂಡಿಸಬಹುದು, ಎಂದು ಇತರರಿಗೆ ತಿಳಿಸದೆ ಪುನಃ ಮೊದಲಿನಂತೆ ಬಂಧಿಸಿದರು. ಆದರೆ ಸ್ವಲ್ಪ ಹೊತ್ತಿನ ಮೇಲೆ ಯಥಾಪ್ರಕಾರವಾಗಿ ಬೀಗಗಳು ಒಡೆದು ಹೋಗಿ ಮುನಿಗಳು ಹೊರಕ್ಕೆ ಬಂದರು.

ಈ ಬಾರಿ ಸೇವಕರು ರಾಜನ ಬಳಿಗೆ ಹೋಗಿ ಬಂಧನವು ವಿಮೋಚನೆಯಾದ ವಿಚಾರವನ್ನೆಲ್ಲಾ ಹೇಳಿದರು. ರಾಜನು ಬಹಳ ಆಶ್ಚರ್ಯಯುಕ್ತನಾಗಿ ಸೇವಕರು ಬಂಧಿಸುವುದರಲ್ಲಿ ವ್ಯತ್ಯಾಸವಾಗಿರಬಹುದೆಂದು ಪುನಃ ಮೊದಲಿನಂತೆ ಕಾರಾಗೃಹದಲ್ಲಿ ಇರಿಸಿದನು. ಆದರೆ ಸ್ವಲ್ಪ ಸಮಯದಲ್ಲಿಯೇ ಈ ಸ್ತೋತ್ರ ಮಹಾತ್ಮ್ಯದಿಂದ ಪೂರ್ವದಂತೆ ಬಂಧನ ವಿಮೋಚನೆಯಾಗಿ ಯತಿವರ್ಯರು ಹೊರಟು ಸೀದಾ ಸಭಾಸ್ಥಾನವನ್ನು ಹೊಂದಿದರು. ಈ ಮಹಾತ್ಮರ ದಿವ್ಯಶರೀರ ಮತ್ತು ತಪಃಪ್ರಭಾವದಿಂದ ರಾಜನ ಹೃದಯವು ಮತ್ತು ಆಸನವು ಕಂಪಿತವಾಯಿತು.

ಮಹಾರಾಜನು ಕೂಡಲೇ ಕಾಳಿದಾಸನನ್ನು ಕರೆದು ಕವಿರಾಜನೆ ! ನನ್ನ ಆಸನವು ಕಂಪಾಯಮಾನವಾಗುತ್ತದೆ, ನಾನು ಒಂದು ಕ್ಷಣವೂ ಇದರಲ್ಲಿ ಕುಳಿತುಕೊಳ್ಳಲಾರೆನು, ಇದಕ್ಕೇನಾದರು ಪ್ರತೀಕಾರವನ್ನು ಮಾಡು, ಎಂದು ಹೇಳಿದನು. ಕಾಳಿದಾಸನು ರಾಜನಿಗೆ ಧೈರ್ಯವನ್ನು ಹೇಳಿ ಅದೇ ಸಮಯದಲ್ಲಿ ಯೋಗಾಸನದಲ್ಲಿ ಕುಳಿತು ಕಾಳಿಕಾ ಭಜನೆಯನ್ನು ಮಾಡಲಾರಂಭಿಸಿದನು. ಸ್ವಲ್ಪ ಸಮಯಲ್ಲಿ ಕಾಳಿಕಾದೇವಿಯು ಪ್ರತ್ಯಕ್ಷಳಾದಳು. ಶ್ರೀ ಮಾನತುಂಗ ಮುನಿಗಳ ತಪೋಮಹಿಮೆಯಿಂದ ಇವರ ಪಾರ್ಶ್ವದಲ್ಲಿ ಚಕ್ರೇಶ್ವರೀ ದೇವಿಯು ಪ್ರತ್ಯಕ್ಷಳಾದಳು. ರಾಜಸಭಿಕರು ಚಕ್ರೇಶ್ವರಿಯ ಸೌಮ್ಯವಾದ ದಿವ್ಯರೂಪವನ್ನೂ ಕಾಳಿಕಾದೇವಿಯ ಕ್ರೂರವಾದ ವಿಕಾರರೂಪವನ್ನೂ ನೋಡಿ ಆಶ್ಚರ್ಯಪರವಶರಾದರು. ಚಕ್ರೇಶ್ವರಿಯು ಉಚ್ಚಸ್ವರದಿಂದ ಕಾಳಿಕಾದೇವಿಯನ್ನು ಕುರಿತು, ಕಾಳಿಕೆಯೆ ! ನೀನು ಮಹಾತ್ಮರಾದ ಮುನಿಗಳಿಗೆ ಉಪಸರ್ಗವನ್ನು

ಮಾಡುವುದಕ್ಕಾಗಿ ಬಂದಿರುವೆಯೋ ? ಒಳ್ಳೆಯದು, ನಿನಗೆ ತಕ್ಕ ದಂಡನೆಯನ್ನು ಮಾಡುವೆನು, ಎಂದು ಹೇಳಿದಳು. ಕಾಳಿಕಾದೇವಿಯು ಈ ಪ್ರಭಾವಶಾಲಿನಿಯಾದ ಚಕ್ರೇಶ್ವರಿಯನ್ನು ನೋಡಿದ ಕೂಡಲೇ ಭಯಪಟ್ಟು ಚಕ್ರೇಶ್ವರಿಯನ್ನು ನಾನಾ ಪ್ರಕಾರವಾಗಿ ಸ್ತುತಿಸಿ ಇನ್ನು ನಾನು ಇಂತಹ ಕಾರ್ಯವನ್ನು ಮಾಡುವುದಿಲ್ಲವೆಂದು ಹೇಳಿದಳು. ಚಕ್ರೇಶ್ವರಿಯು ಕಾಳಿಕಾದೇವಿಗೆ ಅನೇಕ ಉಪದೇಶಗಳನ್ನು ಮಾಡಿ ಅಹಿಂಸಾ ವ್ರತವನ್ನು ಪರಿಪಾಲಿಸುವಂತೆ ಪ್ರತಿಜ್ಞೆ ಮಾಡಿಸಿದಳು. ಕಾಳಿಕಾದೇವಿಯು ಮುನಿಗಳಲ್ಲಿ ಕ್ಷಮಾಪಣೆಯನ್ನು ಕೇಳಿಕೊಂಡು ಅದೃಶ್ಯಳಾದಳು.

ರಾಜನು ಮತ್ತು ಕಾಳಿದಾಸ ಮೊದಲಾದವರು ಮುನಿಗಳಲ್ಲಿ ಕ್ಷಮಾಪಣೆಯನ್ನು ಕೇಳಿಕೊಂಡರು. ರಾಜನಾದರೋ ಮುನಿಗಳಲ್ಲಿ ಶ್ರಾವಕ ವ್ರತವನ್ನು ತೆಗೆದುಕೊಂಡು ಅಂದಿನಿಂದ ಜೈನ ಧರ್ಮವನ್ನು ಲೋಕದಲ್ಲಿ ಪ್ರಚಾರಪಡಿಸಿದನು. ಇಷ್ಟಾದ ಮೇಲೆ ಚಕ್ರೇಶ್ವರಿಯು ಅಂತರ್ಧಾನಳಾದಳು. ಇತಿ.

ಈ ಕಥೆಯು ಶ್ರೀ ಜಗಭೂಷಣ ಭಟ್ಟಾರಕರ ಶಿಷ್ಯರಾದ ವಿಶ್ವಭೂಷಣ ಕೃತವಾದ ಸಂಸ್ಕೃತ ಟೀಕೆಯ ಹಿಂದೀಭಾಷಾಂತರದಿಂದ ಸಂಗ್ರಹಿಸಲ್ಪಟ್ಟಿದ್ದಾಗಿರುತ್ತದೆ.

ವಿಷಯಾನುಕ್ರಮ

ಭಕ್ತಾಮರಸ್ತೋತ್ರಂ	...	...	೧೧–೨೯
ಕಲ್ಯಾಣಮಂದಿರ ಸ್ತೋತ್ರಂ	...	...	೩೦–೫೪
ಏಕೀಭಾವಸ್ತೋತ್ರಂ	...	...	೫೫–೭೧
ವಿಷಾಪಹಾರ ಸ್ತೋತ್ರಂ	...	...	೭೨–೯೪
ಭೂಪಾಲ ಸ್ತೋತ್ರಂ	...	...	೯೫–೧೦೯

ಶ್ರೀ ವೀತರಾಗಾಯನಮಃ

॥ ಶ್ರೀ ಮಾನತುಂಗಾಚಾರ್ಯವಿರಚಿತಂ ॥

ಭಕ್ತಾಮರಸ್ತೋತ್ರಂ

೧. ಶ್ರೀ ಮಾನತುಂಗಾಚಾರ್ಯರು ಜನ್ಮ ಸಾಫಲ್ಯಕರವಾದ ಜಿನೇಂದ್ರ ಸ್ತೋತ್ರವನ್ನು ಮಾಡಲಾರಂಭಿಸಿ ಜಿನ ಪರಮಭಕ್ತಿ ಪ್ರೇರಿತರಾಗಿ ಅಷ್ಟಾದಶ ದೋಷರಹಿತನಾಗಿಯೂ, ಆವಿರ್ಭೂತಾನಂತಜ್ಞಾನಾದ್ಯಷ್ಟಗುಣ ಪರಿಪೂರ್ಣನಾಗಿಯೂ, ಲೋಕಾಲೋಕ ಸಾಕ್ಷಾತ್ಕಾರ ರೂಪವಾದ ಕೇವಲಜ್ಞಾನಪ್ರಕಾಶದಿಂದ ಸೂರ್ಯನಂತೆ ಜಗವನ್ನು ಬೆಳಗುವನಾಗಿಯೂ, ಕರ್ಮ ಶತ್ರುಗಳನ್ನು ಜಯಿಸಿದಂತಹ ಆದಿ ಜಿನೇಶ್ವರನ ಪಾದಕಮಲಗಳನ್ನು ಮನವಚನ ಕಾಯಗಳಿಂದ ಏಕರೂಪವಾಗಿ ನಮಸ್ಕರಿಸಿ ಸ್ತೋತ್ರವನ್ನು ಮಾಡುತ್ತಾರೆ.

ಭಕ್ತಾಮರ ಪ್ರಣತಮೌಳಿ ಮಣಿಪ್ರಭಾಣಾ
ಮುದ್ಯೋತಕಂದಳಿತಪಾಪ ತಮೋವಿತಾನಂ ।
ಸಮ್ಯಕ್ಪ್ರಣಮ್ಯ ಜಿನಪಾದಯುಗಂ ಯುಗಾದಾ
ವಾಲಂಬನಂ ಭವಜಲೇ ಪತತಾಂಜನಾನಾಂ ॥ ೧ ॥

ಯಸ್ಸಂಸ್ತುತಸ್ಸಕಲವಾಙ್ಮಯ ತತ್ವಬೋಧಾ
ದುದ್ಭೂತಬುದ್ಧಿ ಪಟುಭಿ ಸ್ಸುರಲೋಕನಾಥೈಃ ।
ಸ್ತೋತ್ರೈರ್ಜಗತ್ರಿತಯಚಿತ್ತ ಹರೈರುದಾರೈಃ
ಸ್ತೋಷ್ಯೇಕಿಲಾಹಮಪಿತಂ ಪ್ರಥಮಂಜಿನೇಂದ್ರಂ ॥ ೨ ॥

೨. ತಾ॥ ಭಕ್ತರಾದಂತಹ ಭವನಾಮರ ವ್ಯಂತರಾಮರ ಜ್ಯೋತಿರ್ದೇವ ಕಲ್ಪಾಮರರೆಂಬ ಚತುರ್ವಿಧವಾದ ದೇವತೆಗಳ ಸಮೂಹಗಳಿಂದಲೂ ಅವರಿಗೆ

ಇಂದ್ರರಾದಂತಹ ಧರಣೇಂದ್ರ ಸೌಧರ್ಮೇಂದ್ರ ಐಶಾನೇಂದ್ರಾದಿಗಳಿಂದಲೂ, ಗರ್ಭಾವತರಣ ಜನ್ಮಾಭಿಷೇಕ ಪರಿನಿಷ್ಕ್ರಮಣ ಕೇವಲಜ್ಞಾನನಿರ್ವಾಣ ಕಲ್ಯಾಣಗಳೆಂಬ ಪಂಚಕಲ್ಯಾಣ ಕಾಲಗಳಲ್ಲಿ ನಮಸ್ಕರಿಸಲ್ಪಟ್ಟು ಆ ನಮಸ್ಕಾರ ಕಾಲದಲ್ಲಿ ಪಾದಾರವಿಂದದಲ್ಲಿ ಪ್ರಸರಿಸುತ್ತಿರುವ ದೇವೇಂದ್ರಾದಿಗಳ ರತ್ನ ಕಿರೀಟಗಳ ಕಾಂತಿಗಳಿಗೆ ಪ್ರಕಾಶವನ್ನುಂಟು ಮಾಡುವುದಾಗಿಯೂ, ಸಮಸ್ತ ಪಾಪಗಳೆಂಬ ಕತ್ತಲೆಯ ಸಮೂಹವನ್ನು ತೊಲಗಿಸುವುದಾಗಿಯು, ಯುಗದ ಆದಿಯಲ್ಲಿ ಭವವೆಂಬ ನೀರಿನಲ್ಲಿ ಬಿದ್ದಿರುವ ಪ್ರಾಣಿಗಳಿಗೆ ಆಶ್ರಯ ಭೂತ ವಾಗಿಯೂ, ಇರುವ ಇಂತಹ ಶ್ರೀ ಆದಿ ಜಿನೇಂದ್ರರ ಪಾದಾರವಿಂದಗಳನ್ನು ಭಕ್ತಿ ಭರಿತವಾದ ಏಕಾಗ್ರಮನಸ್ಸಿನಿಂದಲೂ ಅದಕ್ಕನುಗುಣವಾದ ವಚನಕಾಯ ಗಳಿಂದಲೂ ಚೆನ್ನಾಗಿ ನಮಸ್ಕರಿಸಿ ಭವ್ಯಾತ್ಮರ ಜನ್ಮ ಸಾಫಲ್ಯವನ್ನುಂಟು ಮಾಡುವ ಜಿನೇಂದ್ರಸ್ತುತಿಯನ್ನು ಮಾಡಿ ಯಾವ ಆದಿ ಜಿನೇಂದ್ರರು ಸಕಲ ಶಾಸ್ತ್ರಸಾರಾರ್ಥವನ್ನು ತಿಳಿದಂತಹ ಅತ್ಯಂತ ಪಟುಬುದ್ಧಿಯುಳ್ಳ ದೇವೇಂದ್ರರು ಗಳಿಂದ, ಮೂರುಲೋಕದಲ್ಲಿರುವ ಸಕಲ ಭವ್ಯಾತ್ಮರ ಮನಸ್ಸನ್ನು ಸೆಳೆಯು ವಂತಹ ಪರಮೋತ್ಕೃಷ್ಟವಾದ ಸ್ತೋತ್ರಗಳಿಂದ ಚೆನ್ನಾಗಿ ಸ್ತುತಿಸಲ್ಪಟ್ಟರೋ, ಅಂತಹ ಆದಿ ಜಿನೇಂದ್ರರಾದ ಶ್ರೀ ವೃಷಭಸ್ವಾಮಿಯನ್ನು ನಾನೂ ಕೂಡ ಸ್ತುತಿಸುತ್ತೇನೆ. (ಯೋಗ್ಯತೆ ಇಲ್ಲದಿದ್ದರೂ ಭಕ್ತಿ ಮೂಲಕವಾದ ಚಾಪಲ್ಯ ದಿಂದ ಸ್ತುತಿಸುವೆನೆಂದಭಿಪ್ರಾಯವು.)

ಬುದ್ಧ್ಯಾವಿನಾಪಿ ವಿಬುಧಾರ್ಚಿತಪಾದಪೀಠ
ಸ್ತೋತುಂ ಸಮುದ್ಯತಮತಿರ್ವಿಗತತ್ರಪೋಹಂ ।
ಬಾಲಂ ವಿಹಾಯಜಲಸಂಸ್ಥಿತ ಮಿಂದುಬಿಂಬ
ಮನ್ಯಃಕಇಚ್ಛತಿಜನಸ್ಸಹಸಾಗ್ರಹೀತುಂ ॥ ೩ ॥

೩. ತಾ॥ ಜ್ಞಾನಿಗಳಿಂದಲೂ, ದೇವತೆಗಳಿಂದಲೂ ಪೂಜಿಸಲ್ಪಟ್ಟ ಪಾದಪೀಠವುಳ್ಳ ಸ್ವಾಮಿಯೇ! ಮಾತಿಗೂ ಮನಸ್ಸಿಗೂ ಗೋಚರವಾಗದ ನಿನ್ನ ಗುಣಗಳನ್ನು ಸ್ತೋತ್ರಮಾಡಲು ಯತ್ನಿಸಿದ ನಾನು ನನ್ನ ಮಂದ ಬುದ್ಧಿಯನ್ನು ಭಾವಿಸಿ ನೋಡಿ ನಾಚಿಕೆಯನ್ನೂ ಕೂಡ ಪಡೆಯಲಿಲ್ಲವು. ಹೇಗೆಂದರೆ ನೀರಿನಲ್ಲಿ ಪ್ರತಿಬಿಂಬಿಸಿರುವ ಚಂದ್ರಬಿಂಬವನ್ನು ಕೈಯಿಂದ

ಹಿಡಿದುಕೊಳ್ಳಬೇಕೆಂದು ಇಚ್ಛಿಸಬೇಕಾದರೆ ಸಾಧ್ಯಾಸಾಧ್ಯ ವಿವೇಕವಿಲ್ಲದ ಶಿಶು ಹೊರತು ಇನ್ಯಾವನು ಆಶೆ ಪಡುವನು? ಹಾಗೆಯೇ ಅಜ್ಞನಾದ ನಾನು ನಿನ್ನನ್ನು ಸ್ತುತಿಸಲು ಪ್ರಯತ್ನಿಸುವುದು ಯುಕ್ತವೇ ಸರಿ ಎಂದು ಭಕ್ತಿಯ ಅತಿಶಯದಿಂದ ತನ್ನ ಕೀಳುತನವನ್ನು (ನೈಚ್ಯವನ್ನು) ತಿಳಿಸುತ್ತಾರೆ.

ವಕ್ತುಂ ಗುಣಾನ್‌ಗುಣಸಮುದ್ರಶಶಾಂಕಕಾಂತಾನ್
ಕಸ್ತೇಕ್ಷಮಃಸುರಗುರು ಪ್ರತಿಮೋಪಿಬುದ್ಧ್ಯಾ ।
ಕಲ್ಪಾಂತಕಾಲ ಪವನೋದ್ಧತನಕ್ರಚಕ್ರಂ
ಕೋವಾತರೀತುಮಲಮಂಬುನಿಧಿಂ ಭುಜಾಭ್ಯಾಂ ॥ ೪ ॥

೪. ತಾ॥ ಸ್ತೋತ್ರವೆಂದರೆ ಇರುವ ಗುಣಗಳನ್ನು ಹೇಳುವುದು. ಓ ಸ್ವಾಮಿಯೇ! ತಾವು ಗುಣಗಳಿಗೆ ಸಮುದ್ರದಂತೆ ಇರುವಿರಾದ್ದರಿಂದ ಬೃಹ ಸ್ಪತಿಗೆ ಸಮಾನ ಬುದ್ಧಿಯುಳ್ಳವನೂ ಕೂಡ ಗುಣಗಳೆಂಬ ಸಮುದ್ರಕ್ಕೆ ಚಂದ್ರ ನಂತೆ ಪರಮ ನಿರ್ಮಲನಾಗಿಯೂ, ಮನೋಹರವಾಗಿಯೂ, ಇರುವ ತಮ್ಮ ಗುಣಗಳನ್ನು ಹೇಳಲು ಯಾವನು ಸಮರ್ಥನು? ಅದು ಹೇಗೆಂದರೆ ಪ್ರಳಯ ಕಾಲದ ಗಾಳಿಯ ಹೊಡೆತದಿಂದ ಒಳಗಿದ್ದ ಮೀನು ಮೊಸಳೆ ಮುಂತಾದ ಜಲ ಜಂತುಗಳ ಸಮೂಹವನ್ನುಳ್ಳ ಸಮುದ್ರವನ್ನು ತೋಳುಗಳಿಂದ ದಾಟುವುದ ಕ್ಕೋಸ್ಕರ ಯಾವನು ತಾನೇ ಸಮರ್ಥನಾಗುತ್ತಾನೆ? ಯಾವನೂ ಸಮರ್ಥ ನಲ್ಲವೆಂದರ್ಥವು. ಹಾಗೆ ಪ್ರಥಮ ಜಿನೇಂದ್ರರ ಅವಾಙ್ಮನಸಗೋಚರವಾದ ಗುಣಗಳನ್ನು ಸ್ತುತಿಸಲು ಅತ್ಯಲ್ಪ ಬುದ್ಧಿಯುಳ್ಳ ನಾನು ಸಮರ್ಥನಲ್ಲವು. ಹೀಗೆ ಅಸಮರ್ಥರೆಂದು ತಿಳಿದೂ ಕೂಡ ಸ್ತೋತ್ರವನ್ನು ಮಾಡಲು ಪ್ರವರ್ತಿ ಸುವುದು ಯುಕ್ತವೇ ಸರಿ ಎಂಬ ವಿಷಯದಲ್ಲಿ ಆಚಾರ್ಯರು ಲೋಕದೃಷ್ಟಾಂತ ವನ್ನು ತೋರಿಸಿ ಜನಗಳ ಅನುಮಾನ ಪರಿಹಾರ ಮಾಡುತ್ತಾರೆ.

ಸೋಹಂ ತಥಾಪಿ ತವಭಕ್ತಿವಶಾನ್ಮುನೀಶ
ಕರ್ತುಂ ಸ್ತವಂ ವಿಗತಶಕ್ತಿರಪಿಪ್ರವೃತ್ತಃ ।
ಪ್ರೀತ್ಯಾತ್ಮವೀರ್ಯಮವಿಚಾರ್ಯಮೃಗೀಮೃಗೇಂದ್ರಂ
ನಾಭ್ಯೇತಿಕಿಂ ನಿಜಶಿಶೋಃ ಪರಿಪಾಲನಾರ್ಥಂ ॥೫॥

೫. ತಾ॥ ಓ ಮುನಿಗಳಿಗೆಲ್ಲಾ ಸ್ವಾಮಿಯಾದ ಶ್ರೀ ವೃಷಭತೀರ್ಥಂಕರರೇ ! ತಮ್ಮನ್ನು ಸ್ತುತಿಸುವುದು ಅಶಕ್ಯವಾದರೂ ಕೂಡ ಅಂತಹ ಮಹಾ ಬುದ್ಧಿಯೇ ಮೊದಲಾದ ಸಾಮರ್ಥ್ಯವಿಲ್ಲದ ನಾನು ಭಕ್ತಿವಶದಿಂದ ತಮ್ಮನ್ನು ಸ್ತುತಿಸಲು ಪ್ರವರ್ತಿಸಿದೆನು. ಇದು ಯುಕ್ತವೇಸರಿ ಅದು ಹೇಗೆಂದರೆ ಲೋಕದಲ್ಲಿ ಹೆಣ್ಣು ಜಿಂಕೆಯು ತನ್ನ ಶಕ್ತಿಯನ್ನು ಆಲೋಚಿಸದೆ ತನ್ನ ಮರಿಯನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಸಿಂಹದ ಎದುರಿಗೆ ಪ್ರತಿಭಟಿಸಿ ಹೋಗುವದಿಲ್ಲವೇನು ? (ಹೋಗಿಯೇ ಹೋಗುತ್ತದೆಂದಭಿಪ್ರಾಯವು) ಹಾಗೆ ಅಶಕ್ತನಾದ ನಾನೂ ಕೂಡ ತಮ್ಮನ್ನು ಸ್ತುತಿಸುತ್ತೇನೆಂಬ ಸಾಹಸದಲ್ಲಿ ಪ್ರವರ್ತಿಸುತ್ತೇನೆಂದು ಭಾವವು.

॥ ಪೀ ೞ ಠಿ ಕಾ ॥

ತಮ್ಮ ವಿಷಯದಲ್ಲಿ ಉಂಟಾಗಿರುವ ನನ್ನ ಭಕ್ತಿಯೇ ಪ್ರೇರಕವಾಗಿ ನನ್ನನ್ನು ಸ್ತುತಿ ಮಾಡುವಂತೆ ಪ್ರೇರೇಪಿಸುತ್ತದೆ ಎಂಬರ್ಥವನ್ನು ದೃಷ್ಟಾಂತಗಳೊಡನೆ ಒಪ್ಪಿಸುತ್ತಾರೆ.

ಅಲ್ಪಶ್ರುತಂ ಶ್ರುತವತಾಂ ಪರಿಹಾಸಧಾಮ
ತ್ವದ್ಭಕ್ತಿರೇವ ಮುಖರೀ ಕುರುತೇ ಬಲಾನ್ಮಾಂ ।
ಯತ್ಕೋಕಿಲಃ ಕಿಲಮಧೌಮಧುರಂ ವಿರೌತಿ
ತಚ್ಚಾರುಚೂತ ಕಲಿಕಾನಿಕರೈಕಹೇತು ॥ ೬ ॥

೬. ತಾ॥ ಓ ಜಿನನಾಥರೇ ! ಅಪಾರ ಮಹಿಮೆಯುಳ್ಳ ತಮ್ಮನ್ನು ಸ್ತುತಿಸಲು ಪ್ರವರ್ತಿಸಿದ ನಾನು ಸ್ವಲ್ಪವಾದ ಶಾಸ್ತ್ರಶ್ರವಣವುಳ್ಳವನಾಗಿದ್ದರೂ, ಪರಿಪೂರ್ಣ ಶಾಸ್ತ್ರಜ್ಞರ ಪರಿಹಾಸಕ್ಕೆ ಪಾತ್ರನಾಗಿದ್ದರೂ, ತಮ್ಮಲ್ಲಿರುವ ಭಕ್ತಿಯೇ ನನ್ನನ್ನು ಬಲಾತ್ಕರಿಸಿ ಸ್ತುತಿಮಾಡಿಸುತ್ತದೆ. ಅದು ಹೇಗೆಂದರೆ ಲೋಕದಲ್ಲಿ ಕೋಕಿಲಪಕ್ಷಿಯು ವಸಂತಋತುವಿನಲ್ಲಿ ಬಹಳ ಮನೋಹರವಾಗಿ ಕೂಗುತ್ತದೆ. ಈ ಮನೋಹರ ಪಂಚಮಸ್ವರವು ಆ ವಸಂತಋತುವಿನಲ್ಲಿ ಚಿಗುರಿದ ಮಾವಿನಮರದ ಚಿಗುರುಗಳನ್ನು ಮೆಲ್ಲುವುದರಿಂದಲ್ಲವೆ ? ಹಾಗೆ ಕೋಗಿಲೆಯಂತೆ ಅಜ್ಞನಾದ ನನ್ನ ಸ್ತೋತ್ರವೂ ಕೂಡ ಭಗವಂತನಾದ

ತಮ್ಮಲ್ಲಿರುವ ಭಕ್ತಿಯಿಂದುಂಟಾದುದರಿಂದ ಭವ್ಯಾತ್ಮರಿಗೆ ಮನೋಹರವಾದೀತೆಂದಭಿಪ್ರಾಯವು.

ತ್ವತ್ಸಂಸ್ತವೇನಭವಸಂತತಿ ಸನ್ನಿಬದ್ಧಂ
ಪಾಪಂ ಕ್ಷಣಾತ್ಕ್ಷಯಮುಪೈತಿ ಶರೀರಭಾಜಾಂ ।
ಆಕ್ರಾಂತ ಲೋಕ ಮಲಿನೀಲಮಶೇಷಮಾಶು
ಸೂರ್ಯಾಂಶುಭಿನ್ನಮಿವಶಾರ್ವರ ಮಂಧಕಾರಂ ॥ ೭ ॥

೭. ತಾ॥ ಓ ಆದಿ ಜಿನೇಶ್ವರರೇ ! ಈ ಲೋಕದಲ್ಲಿ ಅನಾದಿಭವ ಪರಂಪರೆಯಿಂದ ಅತ್ಯಂತ ದೃಢವಾಗಿ ಸಂಬಂಧಿಸಿರುವ ಪಾಪವು ಸಕಲ ಕರ್ಮ ಮಲಗಳನ್ನು ಕ್ಷಯಪಡಿಸಿ ಸ್ವಾಭಾವಿಕವಾದ ಅಪರಿಮಿತ ಜ್ಞಾನಾನಂದ ಸ್ವರೂಪರಾಗಿ ಪ್ರಕಾಶಿಸುವ ಪರಿಶುದ್ಧ ಪರಮಾತ್ಮಭಾವವನ್ನೈದಿದ ತಮ್ಮನ್ನು ಭಕ್ತಿ ಪರವಶರಾಗಿ ಏಕರೂಪವಾದ ಮನವಚನಕಾಯುಗಳಿಂದ ಭಜಿಸಿ (ಸ್ಮರಿಸಿ) ನಮಸ್ಕರಿಸಿ ಸ್ತುತಿಸುವ ಪ್ರಾಣಿಗಳಿಗೆ ಕ್ಷಣಮಾತ್ರದಿಂದ ಕ್ಷಯವನ್ನೈದುವುದು. ಅದು ಹೇಗೆಂದರೆ ರಾತ್ರಿಯಲ್ಲಿ ಲೋಕವನ್ನೆಲ್ಲಾ ಮುಚ್ಚಿಕೊಂಡು ದುಂಬಿಯಂತೆ ಕಪ್ಪಾಗಿರುವ ಸಮಸ್ತವಾದ ಕತ್ತಲೆಯನ್ನು ಸೂರ್ಯಕಿರಣವು ಉದಯಿಸಿದ ಮಾತ್ರದಿಂದಲೇ ಹೇಗೆ ತೊಲಗಿಸುವುದೋ, ಹಾಗೆ ತಮ್ಮನ್ನು ಜ್ಞಾನ ಭಕ್ತಿ ಪೂರ್ವಕವಾಗಿ ಸ್ತುತಿಸಲು ಸರ್ವ ಮಹಾ ಪಾಪಗಳೂ ತೊಲಗಿ ಹೋಗುವುವೆಂದಭಿಪ್ರಾಯವು.

ಮತ್ವೇತಿನಾಥತವಸಂಸ್ತವನಂ ಮಯೇವ
ಮಾರಭ್ಯತೇತನುಧಿಯಾಪಿ ತವಪ್ರಭಾವಾತ್ ।
ಚೇತೋಹರಷ್ಯತಿಸತಾಂನಳಿನೀದಳೇಷು
ಮುಕ್ತಾಫಲದ್ಯುತಿ ಮುಪೈತಿನನೂದಬಿಂದುಃ ॥ ೮ ॥

೮. ತಾ॥ ಓ ರಕ್ಷಕರಾದ ಆದಿ ತೀರ್ಥಂಕರರೇ ! ಪೂರ್ವೋಕ್ತ ಪ್ರಕಾರವಾಗಿ ತಮ್ಮ ಸ್ತುತಿಯು ಸಮಸ್ತ ಪಾಪ ಪರಿಹಾರಕವೆಂದು ತಿಳಿದು ನಾನು ಅಲ್ಪ ಬುದ್ಧಿಯುಳ್ಳವನಾಗಿದ್ದರೂ ತಮ್ಮ ಸ್ತೋತ್ರವನ್ನು ಮಾಡಲಾರಂಭಿಸುತ್ತೇನೆ. ತಮ್ಮ ಮಹಾತ್ಮ್ಯದಿಂದ ಈ ಸ್ತೋತ್ರವು ಮನೋಹರವಾದೀತು.

ಲೋಕದಲ್ಲಿ ನಿರ್ಲೇಪವಾದ ತಾವರೇ ಎಲೆಯಲ್ಲಿ ಬಿದ್ದಿರುವ ನೀರಿನ ಹನಿಗಳು ಮುತ್ತಿನಂತೆ ಹೊಳೆಯುವುದಿಲ್ಲವೆ ? ಶುದ್ಧವಸ್ತು ಸಂಬಂಧದಿಂದ ಸಂಬಂಧಿಸಿದ ವಸ್ತುವೂ ಕೂಡ ಶುದ್ಧವಾಗುತ್ತದೆಂದಭಿಪ್ರಾಯವು. ಹೀಗೆ ನಾನು ಮಾಡುವ ಸ್ತೋತ್ರವು ರಮ್ಯವಲ್ಲದಿದ್ದರೂ ಈ ಸ್ತೋತ್ರಕ್ಕೆ ವಿಷಯರಾದ ಪರಮ ನಿರ್ಮಲ ಮೂರ್ತಿಯಾದ ತಮ್ಮ ಮಹಿಮೆಯಿಂದ ಸತ್ಪುರುಷರ ಹೃದಯ ವನ್ನು ಆನಂದ ಪಡಿಸುವುದೆಂದಭಿಪ್ರಾಯವು.

ಆಸ್ತಾಂತವಸ್ತವನಮಸ್ತ ಸಮಸ್ತದೋಷಂ
ತ್ವತ್ಸಂಕಥಾಪಿ ಜಗತಾಂದುರಿತಾನಿ ಹಂತಿ ।
ದೂರೇಸಹಸ್ರಕಿರಣಃ ಕುರುತೇಪ್ರಭೈವ
ಪದ್ಮಾಕರೇ ಷುಜಲಜಾನಿವಿಕಾಸಭಾಂಜಿ ॥ ೯ ॥

೯. ತಾ॥ ಓ ಜಿನಪತಿಯೇ ! ನಿರ್ದೋಷವಾದ ತಮ್ಮ ಸ್ತೋತ್ರವು ಸರ್ವ ಜನಗಳ ಪಾಪಗಳನ್ನು ಪರಿಹರಿಸುವುದೆಂಬ ಮಹಿಮೆಯು ಹಾಗಿರಲಿ ತಮ್ಮ ಭವಸಂಬಂಧಿಯಾದ ಕಥೆಯೂ ಕೂಡ ಹೇಳುವವರಿಗೂ, ಕೇಳುವ ವರಿಗೂ ಸಮಸ್ತ ಪಾಪಗಳನ್ನು ಪರಿಹರಿಸುವುದು. ಇದು ಆಶ್ಚರ್ಯವಲ್ಲವು ಹೇಗೆಂದರೆ ಆಕಾಶದಲ್ಲಿ ಸೂರ್ಯನು ಎಷ್ಟೋ ದೂರದಲ್ಲಿ ಉದಯಿಸುತ್ತಾನೆ ಆ ಸೂರ್ಯಪ್ರಭೆಯು ಭೂಮಿಯಲ್ಲಿ ಸರೋವರಾದಿಗಳಲ್ಲಿರುವ ಕಮಲಗಳನ್ನು ಅರಳಿಸುತ್ತದೆ. ಹಾಗೆ ತಾವೇ ಸೂರ್ಯನು, ತಮ್ಮ ಭವಕಥೆಯೇ ಪ್ರಭೆಯು, ಭವ್ಯಾತ್ಮರ ಮನಸ್ಸುಗಳೇ ಕಮಲಗಳು, ತಾವು ಲೋಕಾಗ್ರದಲ್ಲಿದ್ದರೂ ತಮ್ಮ ಪುರಾಣ ಚರಿತ್ರವನ್ನು ಕೇಳುವುದರಿಂದಲೇ ಪಾಪಪರಿಹಾರವಾಗುತ್ತದೆಂದಭಿ ಪ್ರಾಯವು.

ನಾತ್ಯದ್ಭುತಂ ಭುವನ ಭೂಷಣ ಭೂತನಾಥ
ಭೂತೈರ್ಗುಣೈರ್ಭುವಿ ಭವಂತ ಮಭಿಷ್ಟುವಂತಃ ।
ತುಲ್ಯಾಭವಂತಿ ಭವತೋನನುತೇನಕಿಂ ವಾ
ಭೂತ್ಯಾಶ್ರಿತಂಯ ಇಹನಾತ್ಮಸಮಂ ಕರೋತಿ ॥ ೧೦ ॥

೧೦. ತಾ॥ ಲೋಕಕ್ಕೆ ಅಲಂಕಾರವಾಗಿರುವಂತಹ, ಸರ್ವ ಸಂಸಾರಿ ಜೀವಿಗಳಿಗೂ ರಕ್ಷಕನಾದಂತಹ ಆದಿತೀರ್ಥಂಕರರೇ ! ತಮ್ಮಲ್ಲಿ ಆವಿರ್ಭವಿಸಿರು ವಂತಹ ಅನಂತ ಜ್ಞಾನಾದಿಗುಣಗಳಿಂದ ತಮ್ಮನ್ನು ಸ್ತುತಿಸುವಂತಹವರು

ಸಕಲ ಕರ್ಮಕ್ಷಯವನ್ನು ಹೊಂದಿ ತಮ್ಮಂತೆಯೇ ಆವಿರ್ಭವಿಸಿದ ಎಂಟು ಗುಣ ಉಳ್ಳವರಾಗುತ್ತಾರೆಂಬುದು ಆತ್ಯಾಶ್ಚರ್ಯವಲ್ಲ. ಹೇಗೆಂದರೆ ಲೋಕದಲ್ಲಿ ಐಶ್ವರ್ಯಶಾಲಿಯಾದವನು ತನ್ನ ಆಶ್ರಿತನನ್ನು ಕಾಲಾಂತರದಲ್ಲಿ ತನಗೆ ಸಮಾನನನ್ನಾಗಿಯೇ (ಧನಿಕನನ್ನಾಗಿಯೇ) ಮಾಡುತ್ತಾನಲ್ಲವೇ ? ಯತ್ಕಿಂಚಿ ದ್ಗುಣವುಳ್ಳ ಈ ಪಾಮರ ಲೋಕದಲ್ಲಿಯೇ ಈ ನ್ಯಾಯವಿರುತ್ತಿರಲು ಸರ್ವ ಗುಣಾಕರರಾದ ತಮ್ಮನ್ನು ಆಶ್ರಯಿಸಿದವನು ತಮ್ಮ ಗುಣಗಳನ್ನು ಹೊಂದು ವುದು ಏನು ಮಹಾಶ್ಚರ್ಯವೆಂದಭಿಪ್ರಾಯವು.

ದೃಷ್ಟ್ವಾಭವಂತ ಮನಿಮೇಷವಿಲೋಕನೀಯಂ
ನಾನ್ಯತ್ರತೋಷಮುಪಯಾತಿಜನಸ್ಯ ಚಕ್ಷುಃ ।
ಪೀತ್ವಾಪಯಶ್ಶಶಿ ಕರದ್ಯುತಿದುಗ್ಧಸಿಂಧೋಃ
ಕ್ಷಾರಂಜಲಂ ಜಲನಿಧೇರಸಿತುಂಕ ಇಚ್ಛೇತ್ ॥ ೧೧ ॥

೧೧. ತಾ॥ ಓ ಜಿನರಾಜನೇ ! ರಪ್ಪೆಗಳನ್ನು ಮುಚ್ಚದೆ ನೋಡು ವುದಕ್ಕೆ ಯೋಗ್ಯರಾದ ತಮ್ಮ ದರ್ಶನವನ್ನು ಮಾಡಿದ ಈ ಕಣ್ಣು ಮತ್ಯಾವು ದರಲ್ಲಿಯೂ ಪ್ರೀತಿ ಪಡುವುದಿಲ್ಲ ಅಂದರೆ ಸರ್ವಲಕ್ಷಣ ಸಂಪನ್ನರಾಗಿಯೂ, ವಜ್ರವೃಷಭ ನಾರಾಚಸಂಹನನವೆಂಬ ಪರಮೌದಾರಿಕ ದಿವ್ಯಶರೀರವುಳ್ಳವ ರಾಗಿಯೂ, ಇರುವ ತಮ್ಮ ಸೌಂದರ್ಯ ದರ್ಶನದಿಂದ ಆನಂದ ಸಮುದ್ರದಲ್ಲಿ ಮುಳುಗಿ ತೇಲುವ ಮೀನುಗಳಂತಿರುವ ಜನಗಳ ಕಣ್ಣಿಗೆ ಜಗತ್ತಿನಲ್ಲಿ ಇದ ಕ್ಕಿಂತಲೂ ಅತಿಶಯ ಸೌಂದರ್ಯವಸ್ತುವೇ ಇಲ್ಲವಾದ್ದರಿಂದ ತಮ್ಮ ದರ್ಶನ ವನ್ನು ಮಾಡದವರ ನೇತ್ರಗಳೂ ಜನ್ಮವೂ ಕೂಡ ನಿಷ್ಫಲವೆಂದಭಿಪ್ರಾಯವು. ಮತ್ತು ತಮ್ಮ ದರ್ಶನವನ್ನು ಮಾಡಿದ ಪ್ರಾಣಿಗೆ ಮತ್ತೊಂದು ವಸ್ತುವನ್ನು (ಇತರ ದೇವರುಗಳನ್ನು) ದರ್ಶನ ಮಾಡಬೇಕೆಂಬ ಇಚ್ಛೆಯೇ ಉಂಟಾಗುವುದಿಲ್ಲ ವೆಂಬುದು ಯುಕ್ತವೇ ಸರಿ. ಹೇಗೆಂದರೆ ಲೋಕದಲ್ಲಿ ಚಂದ್ರಕಿರಣದಂತೆ ನಿರ್ಮಲವಾದ ಕ್ಷೀರಸಮುದ್ರದ (ಪಂಚಮ ಸಮುದ್ರದ) ನೀರನ್ನು ಕುಡಿದ ವನಿಗೆ ಉಪ್ಪು ಸಮುದ್ರದ ನೀರನ್ನು ಕುಡಿಯಬೇಕೆಂಬ ಇಚ್ಛೆಯು ಹೇಗೆ ಉಂಟಾಗಲಾರದೋ ಹಾಗೆ ಸಕಲ ಜನಗಳ ನೇತ್ರಗಳನ್ನೂ, ಮನಸ್ಸನ್ನೂ

ಸೆಳೆಯುವ ತಮ್ಮ ದಿವ್ಯ ಸೌಂದರ್ಯವನ್ನು ದರ್ಶನ ಮಾಡಿದವನಿಗೆ ಮತ್ತೊಂದನ್ನು ನೋಡಬೇಕೆಂಬ ಇಚ್ಛೆಯೇ ಹುಟ್ಟಲಾರದೆಂದಭಿಪ್ರಾಯವು.

ಯೈಶ್ಶಾಂತರಾಗರುಚಿಭಿಃಪರಮಾಣುಭಿಸ್ತ್ವಂ
ನಿರ್ಮಾಪಿತ ಸ್ತ್ರಿಭುವನೈಕಲಲಾಮಭೂತ ।
ತಾವಂತಏವಖಲುತೇಽಪ್ಯಣವಃ ಪೃಥಿವ್ಯಾಂ
ಯತ್ತೇಽಸಮಾನ ಮಪರಂ ನಹಿರೂಪಮಸ್ತಿ ॥ ೧೨ ॥

೧೨. ತಾ॥ ಓ ಮೂರು ಲೋಕಗಳಿಗೂ ತಿಲಕದಂತೆ ಅಲಂಕಾರ ಸ್ವರೂಪವುಳ್ಳ ಸ್ವಾಮಿಯೇ ! ಪರಮ ಶಾಂತ ರಸಸಮುದ್ರದಂತಿರುವ ತಮ್ಮ ದಿವ್ಯದೇಹದ ಉತ್ಪತ್ತಿಗೆ ಕಾರಣಗಳಾದ ಪುದ್ಗಲ ಪುಂಜಗಳು ಭೂಲೋಕದಲ್ಲಿ ತಮ್ಮ ದೇಹೋತ್ಪತ್ತಿಗೆ ಸಾಕಾದಷ್ಟು ಇದ್ದುವೇ ಹೊರತು, ಒಂದು ಪುದ್ಗಲವು ಕೂಡ ಶೇಷವಾಗಿ ಉಳಿಯಲಿಲ್ಲವೆಂದು ನಾನು ತಿಳಿಯುತ್ತೇನೆ. ಹಾಗೆ ತಮ್ಮ ದೇಹನಿರ್ಮಾಣಕ್ಕೆ ಉಪಾದಾನ ಕಾರಣವಾದ (ಮುಖ್ಯಕಾರಣವಾದ) ಅಂತಹ ಪರಮ ಶಾಂತಕಾಂತಿಯುಳ್ಳ ಪುದ್ಗಲ ಪುಂಜವು (ಪರಮಾಣುಗಳ ರಾಶಿಯು) ಭೂಲೋಕದಲ್ಲಿ ಮಿಕ್ಕಿದ್ದ ಪಕ್ಷದಲ್ಲಿ ತಮ್ಮಂತಹ ಪರಮಶಾಂತ ತೇಜಸ್ಸುಳ್ಳ ಮತ್ತೊಬ್ಬ ಪುರುಷನು ಹೇಗೆತಾನೆ ಹುಟ್ಟದಿರುವನು ? ಆದುದರಿಂದಲೇ ಸಮಸ್ತ ಶಾಂತ ಪುದ್ಗಲ ರಾಶಿಯು ತಮ್ಮ ಶರೀರರೂಪವಾಗಿಯೇ ನಿರ್ಮಾಣವಾಯಿತೆಂದು ಸಂಭಾವಿಸುವುದಕ್ಕೆ ಯೋಗ್ಯವಾಗಿದೆ. ಆದುದರಿಂದಲೇ ಇಂತಹ ಪರಮಶಾಂತಿಗೂ, ಲೋಕೋತ್ತರಸೌಂದರ್ಯಾದಿಗಳಿಗೂ ನಿಧಿಯಾದ ತಮ್ಮನ್ನು ದರ್ಶನಮಾಡಿದ ಕಣ್ಣಿಗೆ ರಾಗದ್ವೇಷಾದಿ ದೋಷ ಸೂಚಕವಾದ ಇತರ ದೇವತೆಗಳ ಘೋರಾಕಾರದರ್ಶನವು ಹೇಗೆ ರುಚಿಸೀತು ? ಎಂದು ಪೂರ್ವಶ್ಲೋಕಾರ್ಥದೊಡಗೂಡಿದ ಮುಖ್ಯಾಭಿಪ್ರಾಯವು.

ವಕ್ತ್ರಂಕ್ವತೇಸುರನರೋರಗ ನೇತ್ರಹಾರಿ
ನಿಶ್ಶೇಷನಿರ್ಜಿತ ಜಗತ್ತ್ರಿತಯೋಪಮಾನಂ ।
ಬಿಂಬಂಕಲಂಕ ಮಲಿನಂಕ್ವ ನಿಶಾಕರಸ್ಯ
ಯದ್ವಾಸರೇ ಭವತಿ ಪಾಂಡುಪಲಾಶಕಲ್ಪಂ ॥ ೧೩ ॥

೧೩. ತಾ॥ ಓ ಜಿನರಾಜನೇ ! ದೇವತೆಗಳ, ಮನುಷ್ಯರ ಮತ್ತು ನಾಗದೇವರುಗಳ ಕಣ್ಣುಗಳನ್ನು ಆನಂದಪಡಿಸುವಂತಹುದಾಗಿಯೂ, ಮತ್ತು ಮೂರುಲೋಕಗಳಲ್ಲಿರುವ ಸಮಸ್ತ ಸುಂದರ ವಸ್ತುಗಳನ್ನೂ ಮೀರಿದ ಸೌಂದರ್ಯವುಳ್ಳದ್ದಾಗಿಯೂ, ಇರುವ ತಮ್ಮ ಮುಖಕ್ಕೆ ಕಲಂಕದಿಂದ ಮಧ್ಯದಲ್ಲಿ ಕಪ್ಪಾಗಿಯೂ ಹಗಲಿನಲ್ಲಿ ಒಣಗಿದ ಎಲೆಯಂತೆ ನಿಸ್ತೇಜವಾದ (ಮಂಕಾಗಿ ಕಾಂತಿಯಿಲ್ಲದ) ಚಂದ್ರಬಿಂಬವನ್ನು ಹೇಗೆ ಹೋಲಿಸಬಹುದು ? ಅಂದರೆ ಲೋಕದಲ್ಲಿ ಇತರ ದೇವರುಗಳ ಮುಖಕ್ಕೆ ಚಂದ್ರಬಿಂಬವನ್ನು ಹೋಲಿಸುವಂತೆ ಸರ್ವಾತಿಶಯ ಸೌಂದರ್ಯದಿಂದ ಜಗದಾನಂದಕರವಾದ ಮತ್ತು ಪರಮಶಾಂತಿ ರಸದಿಂದ ತುಂಬಿ ತುಳುಕುವ ಸಮುದ್ರದಂತಿರುವ ತಮ್ಮ ಮುಖಕ್ಕೆ ಹೇಗೆ ಹೋಲಿಸಬಹುದೆಂದು ಭಾವವು.

ಸಂಪೂರ್ಣಮಂಡಲ ಶಶಾಙ್ಕ ಕಲಾಕಲಾಪ
ಶುಭ್ರಾಗುಣಾಸ್ತ್ರಿಭುವನಂತವಲಙ್ಘಯಂತಿ ।
ಯೇಸಂಶ್ರಿತಾಸ್ತ್ರಿಜಗದೀಶ್ವರನಾಥಮೇಕಂ
ಕಸ್ತಾನ್ನಿವಾರಯತಿ ಸಂಚರತೋಯಥೇಷ್ಟಂ ॥ ೧೪ ॥

೧೪. ತಾ॥ ಓ ಭಗವಂತನೇ ! ಸಂಪೂರ್ಣಚಂದ್ರನ ಕಳೆಗಳರಾಶಿಯಂತೆ ನಿರ್ಮಲಗಳಾದ ತಮ್ಮ ಗುಣಗಳು ಮೂರು ಲೋಕಗಳನ್ನು ಮೀರಿ ಹೋಗುತ್ತವೆ. ಅಂದರೆ ಕೇವಲಜ್ಞಾನಪ್ರಭಾವದಿಂದ ಆವಿರ್ಭವಿಸಿರುವ ಅನಂತ ಜ್ಞಾನಾದಿ ಗುಣಗಳು ಯಾವ ನರೇಂದ್ರ ಸುರೇಂದ್ರ ಧರಣೇಂದ್ರ ಮುನೀಂದ್ರಾದಿಗಳಿಗೂ ಇಲ್ಲವಾದುದರಿಂದ ಮೂರುಲೋಕಗಳಿಂದಲೂ ನಮಸ್ಕರಿಸಲ್ಪಡುವ ತಮ್ಮ ಗುಣಾತಿಶಯವು ಎಲ್ಲರನ್ನೂ ಮೀರಿರುವುದೆಂದಭಿಪ್ರಾಯವು. ಈ ಪ್ರಕಾರ ಎಲ್ಲಾ ಕಡೆಯೂ ತಮ್ಮ ಗುಣಗಳು ತಡೆಯಿಲ್ಲದೆ ಸ್ವೇಚ್ಛೆಯಾಗಿ ಸಂಚರಿಸುವುದು. ಮೂರು ಲೋಕಕ್ಕೂ ಸ್ವಾಮಿಯಾದ ತಮ್ಮನ್ನು ಆಶ್ರಯಿಸಿರುವ ಬಲದಿಂದಲೇ ಸರಿ. ಹೇಗೆಂದರೆ ರಾಜಾಶ್ರಿತರು ಎಲ್ಲಾ ಕಡೆಯೂ ತಡೆಯಿಲ್ಲದೆ ಸಂಚರಿಸುವುದು ರಾಜಾಶ್ರಯಬಲದಿಂದಲ್ಲವೇ ? ಹಾಗೆಯೇ ತಮ್ಮ ಗುಣಗಳಿಗೂ ಸರ್ವಲೋಕಗಳಲ್ಲಿಯೂ ನಿರರ್ಗಳ ಸಂಚಾರವು ಯುಕ್ತವೆಂದಭಿಪ್ರಾಯವು.

ಚಿತ್ರಂಕಿಮತ್ರಯದಿತೇ ತ್ರಿದಶಾಙ್ಗನಾಭಿ
ರ್ನೀತಂ ಮನಾಗಪಿ ಮನೋನವಿಕಾರಮಾರ್ಗಂ ।
ಕಲ್ಪಾಂತ ಕಾಲಮರುತಾ ಚಲಿತಾಚಲೇನಕಿಂ
ಮಂದರಾದ್ರಿ ಶಿಖರಂಚಲಿತಂಕದಾಚಿತ್ ॥ ೧೫ ॥

೧೫. ತಾ॥ ಮೋಕ್ಷಾರ್ಥಿಗಳಾಗಿ ಕರ್ಮಕ್ಷಯಾರ್ಥವಾಗಿ ತಪಸ್ಸನ್ನು ಮಾಡುವ ಮಹಾ ಮುನಿಗಳಿಂದಲೂ ಧ್ಯಾನಿಸುವುದಕ್ಕೆ ಯೋಗ್ಯವಾದ ಪರಿಶುದ್ಧ ಪರಮಾತ್ಮ ಸ್ವರೂಪರಾದ ಜಿನೇಂದ್ರರೇ ! ಸೌಂದರ್ಯ ಸೌಕುಮಾರ್ಯ ಲಾವಣ್ಯಾದಿಗುಣಗಳಿಂದ ಎಂತಹ ಸ್ಥಿರಮನಸ್ಸನ್ನಾದರೂ ಮೋಹಪಡಿಸುವ ದೇವಸ್ತ್ರೀಯರು ಕೂಡ ನಿಮ್ಮ ಮನಸ್ಸಿಗೆ ಸ್ವಲ್ಪವೂ ಮೋಹವನ್ನುಂಟುಮಾಡಲು ಸಮರ್ಥರಾಗಲಿಲ್ಲ. ಇದೇನಾಶ್ಚರ್ಯ ? ಪ್ರಳಯ ಕಾಲದ ಗಾಳಿಯು ಸಾಧಾರಣ ಬೆಟ್ಟಗಳ ಶಿಖರವನ್ನು ಅಲ್ಲಾಡಿಸಿದರೂ ಮೇರುಪರ್ವತ ಶಿಖರವನ್ನಲ್ಲಾಡಿಸಲು ಸಮರ್ಥವಲ್ಲವಷ್ಟೆ ? ಇದರಿಂದ ವಿಕಾರ ಕಾರಿಯಾದ ಸಾಮಗ್ರೀ ಸನ್ನಿಧಾನದಲ್ಲಿಯೂ ನಿರ್ವಿಕಾರನಾಗಿರುವುದು ತಮಗೇ ಸಲ್ಲತಕ್ಕ ಅಸಾಧಾರಣ ಗುಣವೇ ಹೊರತು ಸರ್ವಸಾಧಾರಣವಾಗಲಾರದೆಂದು ಮುಖ್ಯ ಭಾವವು.

ನಿರ್ಧೂಮವರ್ತಿರ ಪವರ್ಜಿತತೈಲಪೂರಃ
ಕೃತ್ಸ್ನಂಜಗತ್ತ್ರಯಮಿದಂ ಪ್ರಕಟೀಕರೋಷಿ ।
ಗಮ್ಯೋನಜಾತುಮರುತಾಂಚಲಿತಾ ಚಲಾನಾಂ
ದೀಪೋಽಪರಸ್ತ್ವಮಸಿನಾಥಜಗತ್ಪ್ರಕಾಶಃ ॥ ೧೬ ॥

೧೬. ತಾ॥ ಓ ಕೇವಲ ಜ್ಞಾನದಿಂದ ಲೋಕಾಲೋಕ ಸಾಕ್ಷಾತ್ಕಾರವನ್ನು ಮಾಡುವ ಪರಮಾತ್ಮನೆ ! ತಾವೇ ಜಗತ್ತನ್ನು ಪ್ರಕಾಶಪಡಿಸುವ ವಿಚಿತ್ರಕ್ರಮವುಳ್ಳ ಒಂದು ಮಹಾ ದೀಪವು. ಕತ್ತಲೆಯಿಂದ ಮುಚ್ಚಲ್ಪಟ್ಟ ವಸ್ತುವನ್ನು ಇದು ಇಂಥಹುದೇ ವಸ್ತುವೆಂದು ದೀಪವು ಹೇಗೆ ಪ್ರಕಾಶಪಡಿಸುತ್ತದೆಯೋ ಹಾಗೆ ಈ ಜಗತ್ತಿನಲ್ಲಿ ಪರಮಾಣು ಮೊದಲುಗೊಂಡು ಸಕಲವನ್ನೂ ಯಥಾಸ್ಥಿತಿಯಾಗಿ ತಿಳಿಯಪಡಿಸುವುದರಿಂದ (ಪ್ರಕಾಶಪಡಿಸುವುದರಿಂದ) ದೀಪಕ್ಕೆ ಸಮಾನರೆಂದಭಿಪ್ರಾಯವು. ಲೋಕಪ್ರಸಿದ್ಧ ದೀಪವು

ಎಣ್ಣೆ ಬತ್ತಿಯೊಡನೆ ಕೂಡಿದ್ದರೆ, ಗಾಳಿಯಿಂದ ಆರಿಹೋಗದಿದ್ದರೆ ಮಾತ್ರ ಕತ್ತಲೆಯಲ್ಲಿರುವ ವಸ್ತುಗಳನ್ನು ಪ್ರಕಟಪಡಿಸುವುದು. ಆದರೆ ಲೋಕಪ್ರಕಾಶಕ ದೀಪಪ್ರಾಯರಾದ ತಾವಾದರೋ ಹೊಗೆ ಇಲ್ಲದ್ದಾಗಿಯೂ, ಎಣ್ಣೆ ಬತ್ತಿಗಳಿಲ್ಲದೆ ಸರ್ವದಾ ಪ್ರಕಾಶಿಸುವುದಾಗಿಯೂ, ಬೆಟ್ಟದ ಶಿಖರವನ್ನು ಅಳ್ಳಾಡಿಸುವ ಗಾಳಿಯಿಂದಲೂ ಕೂಡ ಅಲ್ಲಾಡಿಸಲಶಕ್ಯವಾದದ್ದಾಗಿಯೂ, ಇರುವ ಲೋಕವಿಲಕ್ಷಣವಾದ ಬೇರೆ ವಿಚಿತ್ರ ದೀಪವಾಗಿದ್ದೀರಿ.

ನಾಸ್ತಂಕದಾಚಿದುಪಯಾಸಿನರಾಹುಗಮ್ಯಃ
ಸ್ಪಷ್ಟೀಕರೋಷಿ ಸಹಸಾಯುಗಪಜ್ಜಗಂತಿ ।
ನಾಂಭೋಧರೋದರನಿರುದ್ಧಮಹಾಪ್ರಭಾವಃ
ಸೂರ್ಯಾತಿಶಾಯಿಮಹಿಮಾಸಿಮುನೀಂದ್ರ ಲೋಕೇ ॥೧೭॥

೧೭. ತಾ॥ ಓ ಮುನಿಶ್ರೇಷ್ಠನೇ ! ತೇಜೋನಿಧಿಯಾದ ತಮ್ಮನ್ನು ಸೂರ್ಯನಿಗೆ ಸಮಾನರೆಂದು ಹೋಲಿಸುವುದೂ ಕೂಡ ಸರಿಯಲ್ಲ. ಅದು ಏತಕ್ಕೆಂದರೆ ಸೂರ್ಯನಿಗೆ ನಿತ್ಯವೂ ಅಸ್ತಂಗತನಾಗುತ್ತಾನೆಂಬ ದೋಷವಿದೆ, ರಾಹುವಿನಿಂದ ಗ್ರಸಿಸಲ್ಪಡುತ್ತಾನೆಂಬ ದೋಷವಿದೆ, ಮತ್ತು ಮೋಡಗಳಿಂದ ಮುಚ್ಚಲ್ಪಟ್ಟು ಮಂಕಾದನೆಂಬ ದೋಷವಿದೆ. ಕೇವಲಜ್ಞಾನವೆಂಬ ಜ್ಯೋತಿಸ್ಸಿನಿಂದ ಒಂದೇ ಕಾಲದಲ್ಲಿ ಶೀಘ್ರವಾಗಿ ಸರ್ವ ಲೋಕಾಲೋಕವನ್ನು ಪ್ರಕಾಶಗೊಳಿಸುವ ತಾವು ಅಸ್ತಮನ ರಾಹುಗ್ರಹಣ ಮೋಡಗಳಿಂದ ಮುಚ್ಚಲ್ಪಡುವಿಕೆ ಮುಂತಾದ ಯಾವ ದೋಷಗಳೂ ಇಲ್ಲದವರಾದ್ದರಿಂದ ಲೋಕದಲ್ಲಿ ಸೂರ್ಯನನ್ನು ಮೀರಿಸಿದ ಮಹಾಮಹಿಮೆಯುಳ್ಳವರಾಗಿ ಸರ್ವೋತ್ಕೃಷ್ಟರಾಗಿ ಪ್ರಕಾಶಿಸುತ್ತೀರಿ.

ನಿತ್ಯೋದಯಂದಳಿತಮೋಹಮಹಾಂಧಕಾರಂ
ಗಮ್ಯಂನರಾಹುವದನಸ್ಯನವಾರಿದಾನಾಂ ।
ವಿಭ್ರಾಜತೇತವಮುಖಾಬ್ಜಮನಲ್ಪಕಾಂತಿ
ವಿದ್ಯೋತಯಜ್ಜಗದಪೂರ್ವಶಶಾಙ್ಕಬಿಂಬಂ ॥ ೧೮ ॥

೧೮. ತಾ॥ ಓ ಜಿನರಾಜನೇ ! ಲೋಕಪ್ರಸಿದ್ಧವಾದ ಚಂದ್ರನನ್ನು ಮೀರಿಸಿದ ಗುಣಾತಿಶಯಗಳಿಂದ ಜಗತ್ತನ್ನು ಪ್ರಕಾಶಪಡಿಸುವ ತಮ್ಮ ಮುಖ

ಕಮಲಕ್ಕೆ ಹೀನಗುಣವುಳ್ಳ ಈ ಚಂದ್ರಬಿಂಬವನ್ನು ಹೇಗೆ ಹೋಲಿಸಲಾದೀತು? ಈ ಲೋಕಪ್ರಸಿದ್ಧನಾದ ಚಂದ್ರನು ಶುಕ್ಲಪಕ್ಷದಲ್ಲಿ ದಿನಕ್ರಮದಿಂದ ಅಭಿವೃದ್ಧಿ ಹೊಂದುವನು, ಕೃಷ್ಣಪಕ್ಷದಲ್ಲಿ ಕ್ಷಯಿಸುವನು. ತಮ್ಮ ಮುಖಕಮಲವಾದರೋ ಸರ್ವಕಾಲದಲ್ಲಿಯೂ ಉದಯವನ್ನೇ ಹೊಂದಿರುವುದು. ಪ್ರಸಿದ್ಧ ಚಂದ್ರನು ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲಾರನು ಮತ್ತು ಗುಹೆಯೇ ಮುಂತಾದ ಆವರಣದಿಂದ ಮುಚ್ಚಲ್ಪಟ್ಟ ಸ್ಥಾನದಲ್ಲಿರುವ ಕತ್ತಲೆಯನ್ನು ಹೋಗಲಾಡಿಸಲಾರನು, ತಮ್ಮ ಮುಖಕಮಲವನ್ನು ದರ್ಶನಮಾಡಿದ ಕೂಡಲೇ ಅಜ್ಞಾನವೆಂಬ ಮೋಹರೂಪವಾದ ಕತ್ತಲೆಯು ತೊಲಗಿ ಹೋಗುವುದರಿಂದಲೂ, ಬೆಳದಿಂಗಳಿಗಿಂತಲೂ ಅತಿಶಯವಾದ ಕಾಂತಿಯನ್ನು ಎರಚುವುದರಿಂದಲೂ, ಸರ್ವೋತ್ಕೃಷ್ಟವಾದ ತಮ್ಮ ಮುಖಕಮಲಕ್ಕೆ ಹೀನಗುಣವುಳ್ಳ ಚಂದ್ರನ ಹೋಲಿಕೆಯನ್ನು ಹೇಗೆ ಹೇಳಬಹುದು ? ಮತ್ತು ಈ ಲೋಕಸಿದ್ಧವಾದ ಚಂದ್ರಮಂಡಲವು ರಾಹುವಿನಿಂದ ನುಂಗಲ್ಪಡುತ್ತದೆ. ಮೋಡಗಳಿಂದ ಮುಚ್ಚಲ್ಪಡುತ್ತದೆ ಮತ್ತು ಅಲ್ಪ ಕಾಂತಿಯುಳ್ಳದ್ದಾಗಿದೆ. ತಮ್ಮ ಮುಖಾರವಿಂದವಾದರೊ ಈ ಯಾವ ದೋಷಕ್ಕೂ ಆಸ್ಪದವಲ್ಲವಾದ್ದರಿಂದ ಅಪರಿಮಿತಕಾಂತಿಯಿಂದ ಜಗತ್ತನ್ನು ಬೆಳಗುವ ತಮ್ಮ ಮುಖಾರವಿಂದಕ್ಕೆ ಈ ಚಂದ್ರಮಂಡಲ ಸಾಮ್ಯವು ಸರ್ವ ಪ್ರಕಾರದಿಂದಲೂ ಒಪ್ಪದೆಂದಭಿಪ್ರಾಯವು.

ಕಿಂಶರ್ವರೀಷುಶಶಿನಾಹ್ನಿವಿವಸ್ವತಾವಾ
ಯುಷ್ಮನ್ಮುಖೇಂದುದಳಿತೇಷುತಮಸ್ಸುನಾಥ ।
ನಿಷ್ಪನ್ನಶಾಲಿವನಶಾಲಿನಿಜೀವಲೋಕೇ
ಕಾರ್ಯಂಕಿಯಜ್ಜಲಧರೈರ್ಜಲಭಾರನಮ್ರೈಃ ॥ ೧೯ ॥

೧೯. ತಾ॥ ಓ ಆದಿ ಜಿನೇಂದ್ರನೇ ! ತಮ್ಮ ಮುಖವೆಂಬ ಚಂದ್ರನ ಕಾಂತಿಗಳಿಂದ ರಾತ್ರಿಕಾಲಗಳಲ್ಲಿಯೂ, ಹಗಲಿನಲ್ಲಿಯೂ, ಸಮಸ್ತ ಕತ್ತಲೆಯೂ ತೊಲಗಿ ಹೋಗಿ ಸರ್ವದಾ ಲೋಕವು ಪ್ರಕಾಶಿಸುತ್ತಿರುವಾಗ ರಾತ್ರಿ ಕಾಲದಲ್ಲಿ ಚಂದ್ರನಿಂದೇನು ಪ್ರಯೋಜನ ? ಹಗಲಿನಲ್ಲಿ ಸೂರ್ಯನಿಂದೇನು ಪ್ರಯೋಜನ? ಅಂದರೆ ರಾತ್ರಿ ಹಗಲುಗಳೆಂಬ ಎರಡು ಕಾಲಗಳಲ್ಲಿಯೂ ಕತ್ತಲೆಯನ್ನು ಹೋಗಲಾಡಿಸುವುದಕ್ಕಲ್ಲವೇ ಚಂದ್ರಸೂರ್ಯರೆಂಬ ಜ್ಯೋತಿಸ್ಸುಗಳು

ಇರುವುದು ? ಆ ಕೆಲಸವು ತಮ್ಮ ಮುಖ ಚಂದ್ರಕಾಂತಿಯಿಂದ ಉಂಟಾಗುತ್ತಿರಲು ಈ ಚಂದ್ರ ಸೂರ್ಯರು ವ್ಯರ್ಥವೆಂದಭಿಪ್ರಾಯವು. ಹೇಗೆಂದರೆ ಈ ಜೀವಲೋಕದಲ್ಲಿ ಸಂಪೂರ್ಣವಾಗಿ ಸಕಲ ಬೆಳೆಯೂ ಆಗಿರಲು ನೀರಿನಿಂದ ಭರಿತಗಳಾಗಿ ಭೂಮಿಯ ಹತ್ತಿರಕ್ಕೆ ಬಂದು ಮಳೆಯನ್ನು ಕರೆಯುವುದಕ್ಕೋಸ್ಕರ ಸಿದ್ಧವಾಗಿರುವ ಮೋಡಗಳಿಂದೇನು ಪ್ರಯೋಜನವು ? ಭೂಮಿಯು ಸಂಪೂರ್ಣ ಸಸ್ಯವುಳ್ಳದ್ದಾಗಿರಲು, ಮಳೆ ಬರಬೇಕೆಂದು ಯಾರೂ ಬಯಸುವುದಿಲ್ಲವಷ್ಟೆ ? ಹಾಗೆ ಸಮಸ್ತ ಕತ್ತಲೆಯನ್ನೂ ತಮ್ಮ ಮುಖದ ತೇಜಸ್ಸು ತೊಲಗಿಸಲು ಚಂದ್ರಸೂರ್ಯರು ವ್ಯರ್ಥವೆಂದು ಭಾವವು.

ಜ್ಞಾನಂ ಯಥಾತ್ವಯಿವಿಭಾತಿಕೃತಾವಕಾಶಂ
ನೈವಂತಥಾಹರಿಹರಾದಿಷುನಾಯಕೇಷು ।
ತೇಜೋಮಹಾಮಣಿಷುಯಾತಿಯಥಾಮಹತ್ವಂ
ನೈವಂತುಕಾಚಶಕಲೇ ಕಿರಣಾಕುಲೇಪಿ ॥ ೨೦ ॥

೨೦. ತಾ॥ ಓ ಭಗವಂತನೇ ! ಅನಂತಜ್ಞಾನವು ತಮ್ಮಲ್ಲಿ ಆವಿರ್ಭವಿಸಿ ಯಾವಪ್ರಕಾರವಾಗಿ ಪ್ರಕಾಶಿಸುತ್ತಲಿದೆಯೋ ಹಾಗೆ ಹರಿಹರ ಬ್ರಹ್ಮಾದಿದೇವರುಗಳಲ್ಲಿ ಪ್ರಕಾಶಿಸುವುದಿಲ್ಲ, ಅಂದರೆ ರಾಗದ್ವೇಷಾದಿ ದೋಷಾಕ್ರಾಂತರಾದ್ದರಿಂದ ಹರಿಹರಾದಿಗಳು ಕೂಡ ತಮ್ಮಂತೆ ಸರ್ವಜ್ಞರಲ್ಲವೆಂದರ್ಥವು. ಹೇಗೆಂದರೆ ಕಾಂತಿಯು ರತ್ನದಲ್ಲಿಯೂ ಇದೆ, ಗಾಜಿನಲ್ಲಿಯೂ ಇದೆ, ರತ್ನದಲ್ಲಿರುವ ಕಾಂತಿಗೆ ಆಶ್ರಯಮೂಲಕವಾಗಿ ಹೇಗೆ ಶ್ರೇಷ್ಠತೆಯುಂಟಾಗುತ್ತದೋ ಹಾಗೆ ಗಾಜಿನ ಚೂರಿನಲ್ಲಿರುವ ಕಾಂತಿಗೆ ಶ್ರೇಷ್ಠತೆಯುಂಟಾಗುವುದಿಲ್ಲ, ಗಾಜೆಂಬ ಆಶ್ರಯವು ಹೀನವಸ್ತುವಾದ್ದರಿಂದ ಅದರಲ್ಲಿರುವ ಕಾಂತಿಯೂ ಹೀನವೆನಿಸಿತು. ರತ್ನವು ಉತ್ಕೃಷ್ಟವಸ್ತುವಾದ್ದರಿಂದ ಅದರಲ್ಲಿರುವ ಕಾಂತಿಯೂ ಉತ್ಕೃಷ್ಟವೆನಿಸಿತು. ಹೀಗೆ ಆಶ್ರಯಮಹಿಮೆಯಿಂದಲ್ಲವೇ ಆಶ್ರಿತ ವಸ್ತುವಿಗೆ ಮಹಿಮೆ? ಹಾಗೆಯೇ ಸಕಲ ಕರ್ಮಕ್ಷಯದಿಂದ ಪರಮ ನಿರ್ಮಲವೀತರಾಗ ಪರಮಾತ್ಮರಾದ ತಮ್ಮನ್ನು ಆಶ್ರಯಿಸಿರುವುದರಿಂದಲೇ ತಮ್ಮ ಜ್ಞಾನವು ಅನಂತವಾಗಿಯೂ ನಿತ್ಯವಾಗಿಯೂ ಸರ್ವೋತ್ಕೃಷ್ಟವಾಯಿತೆಂದು ಮುಖ್ಯಾಭಿಪ್ರಾಯವು.

ಮನ್ಯೇವರಂಹರಿಹರಾದಯಏವದೃಷ್ಟಾ
ದೃಷ್ಟೇಷುಯೇಷುಹೃದಯಂತ್ವಯಿತೋಷಮೇತಿ ।
ಕಿಂವೀಕ್ಷಿತೇನಭವತಾಭುವಿಯೇನನಾನ್ಯಃ
ಕಶ್ಚಿನ್ಮನೋಹರತಿನಾಥಭವಾಂತರೇಪಿ ॥ ೨೧ ॥

೨೧. ತಾ॥ ಓ ಭಗವಂತನೇ ! ನಿನ್ನನ್ನು ದರ್ಶನಮಾಡುವುದಕ್ಕಿಂತಲೂ ಮುಂಚಿತವಾಗಿ ಹರಿಹರಾದಿ ದೇವರುಗಳನ್ನು ದರ್ಶನ ಮಾಡುವುದೇ ಶ್ರೇಷ್ಠವೆಂದು ನಾನು ತಿಳಿಯುತ್ತೇನೆ. ಜಿನಭಕ್ತರಾದ ಮಾನತುಂಗಾಚಾರ್ಯರು ಜಿನದರ್ಶನಕ್ಕಿಂತಲೂ ಹರಿಹರಾದಿ ದೇವರುಗಳ ದರ್ಶನವೇ ಶ್ರೇಷ್ಠವೆಂದು ತಿಳಿಯುವುದು, ಸಮ್ಯಗ್ದರ್ಶನ ವಿರೋಧವಾಯಿತಲ್ಲ ಅಂದರೆ ವಿರೋಧವಲ್ಲ. ಹೇಗೆಂದರೆ ರಾಗದ್ವೇಷ ಕ್ರೋಧಗಳೆಂಬ ಕಷಾಯಗಳನ್ನು ಸೂಚಿಸುವ ಭಯಂಕರವಾದ ಆಕಾರವುಳ್ಳವರಾಗಿಯೂ ಶಸ್ತ್ರಧಾರಣವುಳ್ಳವರಾಗಿಯೂ ಇರುವ ದೇವರುಗಳನ್ನು ಮೊದಲು ದರ್ಶನ ಮಾಡಿ ನಂತರ ದಯಾಶಾಂತ್ಯಾದಿ ಗುಣಗಳಿಗೆ ಸಮುದ್ರದಂತಿರುವ ತಮ್ಮ ಪರಮಶಾಂತದಿವ್ಯಾಕಾರವನ್ನು ದರ್ಶನಮಾಡಿದರೆ ಸಂತಾಪವನ್ನು ಹೊಂದಿದ್ದವನು ಅಮೃತಕಡಲಿನಲ್ಲಿ ಮುಳುಗಿ ಆನಂದಪಡುವಂತೆ ಆನಂದವು ಉಂಟಾಗುತ್ತಾದ್ದರಿಂದ ಬೇರೆ ದೇವರುಗಳ ದರ್ಶನಕ್ಕೂ ವೀತರಾಗ ಪರಮಾತ್ಮನಾದ ತಮ್ಮ ದರ್ಶನಕ್ಕೂ ಇರುವ ತಾರತಮ್ಯವು ಹರಿಹರಾದಿ ದೇವರುಗಳ ದರ್ಶನಾನಂತರವೇ ಸ್ಫುಟವಾಗಿ ತೋರುತ್ತದೆ. ಲೋಕದಲ್ಲಿ ಕಷ್ಟವನ್ನು ಅನುಭವಿಸಿದವನಿಗಲ್ಲವೇ ಸುಖದ ಅತಿಶಯವು ತಿಳಿಯುತ್ತದೆ ? ಸುಖದ ಶ್ರೇಷ್ಠತೆಯನ್ನು ತಿಳಿಯುವದಕ್ಕೆ ಕಷ್ಟವನ್ನು ಅನುಭವಿಸಿದ್ದು ಕಾರಣವಾಗುತ್ತಾದ್ದರಿಂದ ಗುಣವೆನಿಸುತ್ತದೆ. ಹಾಗೆ ಹರಿಹರಾದಿ ದೇವರುಗಳ ದರ್ಶನವೂ ಕೂಡ ತಮ್ಮ ದರ್ಶನಾನಂದ ರೂಪವಾದ ಅತಿಶಯಫಲವನ್ನು ತಿಳಿಯುವುದಕ್ಕೆ ಕಾರಣವಾದ್ದರಿಂದ ತನಗೆ ಶ್ರೇಷ್ಠವಾಯಿತೆಂದು ಸ್ತೋತ್ರಕರ್ತೃವಾದ ಮಾನತುಂಗಾಚಾರ್ಯರ ಅಭಿಪ್ರಾಯವು. ಮತ್ತು ನಿಮ್ಮನ್ನು ದರ್ಶನಮಾಡುವುದರಿಂದ ಕ್ರೂರಾಕಾರದೇವತೆಗಳಲ್ಲಿ ಮತ್ತೊಂದು ಜನ್ಮದಲ್ಲಿ ಕೂಡ ಮನಸ್ಸು ಪ್ರೀತಿಯನ್ನು ಹೊಂದದು.

ಸ್ತ್ರೀಣಾಂಶತಾನಿಶತಶೋಜನಯಂತಿಪುತ್ರಾ
ನ್ನಾನ್ಯಾಸುತಂತ್ವದುಪಮಂಜನನೀಪ್ರಸೂತಾ ।
ಸರ್ವಾದಿಶೋದಧತಿಭಾನಿಸಹಸ್ರರಶ್ಮಿಂ
ಪ್ರಾಚ್ಯೇವದಿಗ್ಜನಯತಿಸ್ಫುರದಂಶುಜಾಲಂ ॥ ೨೨ ॥

೨೨. ತಾ॥ ಓ ಭಗವಂತನೇ ! ಲೋಕದಲ್ಲಿ ಪುತ್ರರನ್ನು ಹೆತ್ತಂತಹ ಸ್ತ್ರೀಯರು ಅನೇಕರಿದ್ದಾರೆ. ತಮ್ಮ ತಾಯಿಯಂತೆ ತಮಗೆ ಸಮಾನನಾದ ಪುತ್ರನನ್ನು ಯಾವ ಸ್ತ್ರೀಯೂ ಪಡೆಯಲಿಲ್ಲ. ಆದುದರಿಂದ ತಮ್ಮ ತಾಯಿಯೇ ಸ್ತ್ರೀಜಾತಿಯಲ್ಲಿ ಜಗತ್ಪೂಜ್ಯಳು ಪರಮಧನ್ಯಳೆಂದಭಿಪ್ರಾಯವು, ಮತ್ತು ತಮ್ಮ ತಾಯಿಯ ಪುಣ್ಯವಿಶೇಷವು ಮತ್ತಾವ ಸ್ತ್ರೀಗೂ ಬರಲಾರದೆಂಬ ವಿಷಯದಲ್ಲಿ ದೃಷ್ಟಾಂತವೇನೆಂದರೆ ಸರ್ವದಿಕ್ಕುಗಳಲ್ಲಿಯೂ ನಕ್ಷತ್ರಗಳು ಪ್ರಕಾಶಿಸುತ್ತಿವೆ. ಆದರೆ ಸೂರ್ಯನು ಉದಿಸುವುದು ಪೂರ್ವದಿಕ್ಕಿನಲ್ಲೇ. ಹಾಗೆಯೇ ಕೇವಲ ಜ್ಞಾನವೆಂಬ ತೇಜಸ್ಸಿನಿಂದ ಸರ್ವಲೋಕಾಲೋಕಪ್ರಕಾಶಕರಾಗಿ ಜಿನ ಸೂರ್ಯನೆನಿಸಿದ ತಮ್ಮನ್ನು ಪೂರ್ವದಿಕ್ಕಿನಂತೆ ಮಹಾ ದೇವಿಯಾದ ಮರುದೇವಿ ಹೊರತು ಮತ್ತ್ಯಾವ ಸ್ತ್ರೀಯೂ ತಮ್ಮಂತಹ ಮಗನನ್ನು ಪಡೆಯಲು ಯೋಗ್ಯಳಾಗಲಿಲ್ಲವೆಂದಭಿಪ್ರಾಯವು.

ತ್ವಾಮಾಮನಂತಿಮುನಯಃಪರಮಂಪುಮಾಂಸ
ಮಾದಿತ್ಯವರ್ಣಮಮಲಂತಮಸಃಪುರಸ್ತಾತ್ ।
ತ್ವಾಮೇವಸಮ್ಯಗುಪಲಭ್ಯಜಯಂತಿಮೃತ್ಯುಂ
ನಾನ್ಯಶ್ಶಿವಃಶಿವಪದಸ್ಯಮುನೀಂದ್ರಪಂಥಾಃ ॥ ೨೩ ॥

೨೩. ತಾ॥ ಓ ಮುನಿರಾಜನೇ ! ತಮ್ಮನ್ನು ಧ್ಯಾನಶೀಲರಾದ ಮುನಿಗಳು ಕತ್ತಲೆಯ ಎದುರಿಗೆ ಸೂರ್ಯನು ಪ್ರಕಾಶಿಸಿದರೆ ಹೇಗೋ ಹಾಗೆ ಸಮಸ್ತ ಕತ್ತಲೆಯನ್ನೂ ತೊಲಗಿಸುವ ತೇಜೋರಾಶಿಸ್ವರೂಪನನ್ನಾಗಿಯೂ (ಅಜ್ಞಾನವೆಂಬ ಕತ್ತಲೆಯನ್ನು ತೊಲಗಿಸುವ ಸೂರ್ಯನನ್ನಾಗಿಯೂ), ನಿರ್ಮಲ ಪರಮಾತ್ಮನನ್ನಾಗಿಯೂ, ಸೂರ್ಯನಿಗೆ ಸಮಾನವಾದ ವರ್ಣವುಳ್ಳವನನ್ನಾಗಿಯೂ ತಿಳಿಯುತ್ತಾರೆ. ಹೀಗೆ ಹೇಳುವುದರಿಂದ ಕರ್ಮಕ್ಷಯಾರ್ಥವಾಗಿ ಶ್ರೀ ವೃಷಭ ತೀರ್ಥಂಕರರನ್ನು ಧ್ಯಾನಮಾಡುವವರು ಈ

ಪ್ರಕಾರವಾಗಿ ಧ್ಯಾನಿಸಬೇಕೆಂದು ಭವ್ಯಾತ್ಮರಿಗೆ ತಿಳಿಸಿದ ಹಾಗಾಯಿತು. ತಮ್ಮನ್ನೇ ಚೆನ್ನಾಗಿ ಆಶ್ರಯಿಸಿ ಚತುರ್ಗತಿ ಭ್ರಮಣರೂಪ ಸಂಸಾರಕ್ಕೆ ಮೂಲಕಾರಣವಾದ ಮೃತ್ಯುರೂಪವಾದ ಕರ್ಮವನ್ನು ಜಯಿಸುತ್ತಾರೆ. ಸಕಲ ಕರ್ಮರಹಿತ ಪರಿಶುದ್ಧ ಪರಮಾತ್ಮನಾದ ತಮ್ಮನ್ನು ಹೊರತು ಮತ್ಯಾವುದೂ ಮೋಕ್ಷಕ್ಕೆ ದಾರಿಯಾಗಲಾರದು.

ತ್ವಾಮವ್ಯಯಂವಿಭುಮಚಿಂತ್ಯಮಸಂಖ್ಯಮಾದ್ಯಂ
ಬ್ರಹ್ಮಾಣಮೀಶ್ವರಮನಂತಮನಂಗಕೇತುಂ ।
ಯೋಗೀಶ್ವರಂವಿದಿತಯೋಗಮನೇಕಮೇಕಂ
ಜ್ಞಾನಸ್ವರೂಪಮಮಲಂಪ್ರವದಂತಿಸಂತಃ ॥ ೨೪ ॥

೨೪. ತಾ॥ ಓ ಪ್ರಭುವೇ! ತಮ್ಮನ್ನು ಸತ್ಪುರುಷರು ನಿತ್ಯನಿರ್ವಿಕಾರಸ್ವರೂಪನನ್ನಾಗಿಯೂ, ಪರಮೈಶ್ವರ್ಯಶೋಭಿತನನ್ನಾಗಿಯೂ, (ಅಂತರಂಗ ಬಹಿರಂಗ ಲಕ್ಷ್ಮೀಪತಿಯಾದ್ದರಿಂದ ನರೇಂದ್ರ, ಸುರೇಂದ್ರ, ನಾಗೇಂದ್ರ ಮುನೀಂದ್ರಾದಿಗಳಿಂದ ನಮಸ್ಕರಿಸಲ್ಪಟ್ಟ ಸರ್ವ ಸ್ವಾಮಿಯನ್ನಾಗಿಯೂ) ಚಿಂತಿಸುವುದಕ್ಕೆ ಶಕ್ಯವಾದ ಮಹಿಮೆಯುಳ್ಳವನನ್ನಾಗಿಯೂ, ಎಣಿಸಲಶಕ್ಯವಾದ ಗುಣವುಳ್ಳವನನ್ನಾಗಿಯೂ, ಆದಿ ತೀರ್ಥಂಕರನನ್ನಾಗಿಯೂ, ಸಕಲಾವರಣ ಕರ್ಮಗಳಿಂದ ಬಿಡಲ್ಪಟ್ಟ ಶುದ್ಧಪರಮಾತ್ಮಸ್ವರೂಪ ಪರಬ್ರಹ್ಮ ತತ್ವವನ್ನಾಗಿಯೂ ಅಥವಾ (ಅಪರಿಮಿತ ಸುಖಸ್ವರೂಪವಾದ ಪರಮಾತ್ಮನನ್ನಾಗಿಯೂ) ಸರ್ವ ದೇವತೆಗಳಿಗೂ ಸ್ವಾಮಿಯನ್ನಾಗಿಯೂ, ಅನಂತಜ್ಞಾನಾದಿಗುಣಗಳಿಂದ ಅನಂತ ಎಂಬ ಶಬ್ದದಿಂದ ಕರೆಯಲ್ಪಡುವವನನ್ನಾಗಿಯೂ, (ಕೊನೆಯಿಲ್ಲದವನನ್ನಾಗಿಯೂ) ಮನ್ಮಥನಿಗೆ ವಿನಾಶಸೂಚಕವಾದ ಕೇತುಗ್ರಹಕ್ಕೆ ಸಮಾನನನ್ನಾಗಿಯೂ, ಯೋಗಿಗಳಿಂದ ಧ್ಯಾನಿಸಲ್ಪಡುವ ಸ್ವರೂಪವುಳ್ಳವನಾದ್ದರಿಂದ ಯೋಗೀಶ್ವರನನ್ನಾಗಿಯೂ, ಯಮನಿಯಮಾದಿ ಎಂಟು ಪ್ರಕಾರಯೋಗಗಳನ್ನು ತಿಳಿದವನನ್ನಾಗಿಯೂ, ಗುಣಪರ್ಯಾಯಗಳ ಅಪೇಕ್ಷೆಯಿಂದ ಅನೇಕರೂಪನನ್ನಾಗಿಯೂ, ಜೀವದ್ರವ್ಯಸ್ವರೂಪದ ಅಪೇಕ್ಷೆಯಿಂದ ಏಕರೂಪನನ್ನಾಗಿಯೂ, ಅಥವಾ ತಮಗೆ ಸಮಾನ ವಸ್ತುವೇ ಲೋಕದಲ್ಲಿ ಇಲ್ಲವಾದ್ದರಿಂದ ಅದ್ವಿತೀಯ ತತ್ವವನ್ನಾಗಿಯೂ, ಕೇವಲ ಜ್ಞಾನಸ್ವರೂಪನನ್ನಾಗಿಯೂ, ಕರ್ಮಗಳೆಂಬ ಕೊಳೆಯಿಲ್ಲದವನನ್ನಾಗಿಯೂ, ಹೇಳುತ್ತಾರೆ. ಮಹಾತ್ಮರಾದ ಯೋಗಿಗಳು

ತಮ್ಮ ದಿವ್ಯಸ್ವರೂಪವನ್ನು ಈ ಪೂರ್ವೋಕ್ತ ಪ್ರಕಾರವಾಗಿ ತಿಳಿಯುತ್ತಾರೆಂದು ಮುಖ್ಯಾರ್ಥವು.

ಬುದ್ಧಸ್ತ್ವಮೇವವಿಬುಧಾರ್ಚಿತಬುದ್ಧಿಬೋಧಾ
ತ್ತ್ವಂಶಂಕರೋಸಿಭುವನತ್ರಯಶಂಕರತ್ವಾತ್ ।
ಧಾತಾಸಿಧೀರಶಿವಮಾರ್ಗವಿಧೇರ್ವಿಧಾನಾ
ದ್ವ್ಯಕ್ತಂತ್ವಮೇವಭಗವನ್ ಪುರುಷೋತ್ತಮೋಸಿ ॥ ೨೫ ॥

೨೫. ತಾ॥ ಆದಿ ತೀರ್ಥಂಕರರೇ! ತಾವೇ ಬುದ್ಧದೇವನು ಅಂದರೆ ಕೇವಲಜ್ಞಾನವೆಂಬ ಸರ್ವಜ್ಞತೆಯುಳ್ಳವನೆಂದರ್ಥವು. ಮೂರು ಲೋಕದಲ್ಲಿರುವ ಜೀವರಾಶಿಗಳಿಗೂ ಸುಖವನ್ನುಂಟುಮಾಡುವುದರಿಂದ ಶಂಕರನೆನಿಸುತ್ತೀರಿ. ಮೋಕ್ಷಕ್ಕೆ ದಾರಿಯಾದ ಸಮ್ಯಗ್ದರ್ಶನಜ್ಞಾನ ಚಾರಿತ್ರಗಳನ್ನು ಲೋಕಕ್ಕೆ ತೋರಿಸಿದಿರಾದ್ದರಿಂದ ಧಾತಾ (ಬ್ರಹ್ಮ) ಎನಿಸುತ್ತೀರಿ. ತಾವೇ ನಿಶ್ಚಯವಾಗಿಯೂ ಸರ್ವ ಶ್ರೇಷ್ಠನಾದ ಪುರುಷೋತ್ತಮನೆಂದು ಹೇಳಲ್ಪಡುತ್ತೀರಿ. ಬುದ್ಧ, ಶಂಕರ, ಧಾತಾ, ಪುರುಷೋತ್ತಮ ಎಂಬ ಶಬ್ದಗಳಿಂದ ಹೇಳಲ್ಪಡುವ ಸಮಸ್ತ ದೇವರೂ ನೀವೇ ಆಗಿದ್ದೀರೆಂದಭಿಪ್ರಾಯವು.

ತುಭ್ಯಂನಮಸ್ತ್ರಿಭುವನಾರ್ತಿಹರಾಯನಾಥ
ತುಭ್ಯಂನಮಃಕ್ಷಿತಿತಲಾಮಲಭೂಷಣಾಯ ।
ತುಭ್ಯಂನಮಸ್ತ್ರಿಜಗತಃಪರಮೇಶ್ವರಾಯ
ತುಭ್ಯಂನಮೋಜಿನಭವೋದಧಿಶೋಷಣಾಯ ॥ ೨೬ ॥

೨೬. ತಾ॥ ಮೂರು ಲೋಕಗಳಲ್ಲಿರುವ ಸಮಸ್ತ ಸಂಸಾರ ದುಃಖಗಳನ್ನು ಪರಿಹರಿಸಿ ರಕ್ಷಿಸುವ ಸ್ವಾಮಿಯೇ! ತಮಗೆ ನಮಸ್ಕಾರವು, ಭೂಲೋಕದಲ್ಲಿ ನಿರ್ಮಲ ರತ್ನಾಭರಣದಂತೆ ಇರುವ ಸ್ವಾಮಿಯೇ! ತಮಗೆ ನಮಸ್ಕಾರವು, ಮೂರು ಲೋಕಗಳಿಗೂ ಸರ್ವೋತ್ಕೃಷ್ಟಸ್ವಾಮಿಯೇ! ತಮಗೆ ನಮಸ್ಕಾರವು. ಕರ್ಮ ಶತ್ರುಗಳನ್ನು ಜಯಿಸಿರುವ ಜಿನರಾಜನೇ! ಅಪಾರವಾದ ಭವ ಪರಂಪರೆ ಎಂಬ ಸಮುದ್ರವನ್ನು ಒಣಗಿಸುವಂತಹ ತಮಗೆ ನಮಸ್ಕಾರವು.

ಕೋವಿಸ್ಮಯೋತ್ರಯದಿನಾಮಗುಣೈರಶೇಷೈ
ಸ್ತ್ವಂಸಂಶ್ರಿತೋನಿರವಕಾಶತಯಾಮುನೀಶ ।
ದೋಷೈರುಪಾತ್ತವಿವಿಧಾಶ್ರಯಜಾತಗರ್ವೈಃ
ಸ್ವಪ್ನಾಂತರೇಪಿನಕದಾಚಿದಪೀಕ್ಷಿತೋಸಿ ॥ ೨೭ ॥

೨೭. ತಾ॥ ಓ ಮುನಿನಾಥನೇ ! ಪರಮಾತ್ಮಸ್ವರೂಪವಾದ ತಮ್ಮನ್ನು ಇಂತಹ ವಾಸಸ್ಥಾನವು ದುರ್ಲಭವೆಂಬುದಾಗಿ ಸಮಸ್ತ ಗುಣಗಳೂ ಆಶ್ರಯಿಸಿ ಕೊಂಡಿವೆ ಅಂದರೆ ಆಶ್ಚರ್ಯವೇನು ? ಇತರ ದೇವತೆಗಳ ಆಶ್ರಯದಿಂದ ರಾಗಾದಿದೋಷಗಳು ಬಹಳ ಗರ್ವವನ್ನು ಹೊಂದಿದವುಗಳಾಗಿ ಸ್ವಪ್ನದಲ್ಲಿಯೂ ನಿಮ್ಮನ್ನು ನೋಡುವುದಿಲ್ಲವು ಆದುದರಿಂದಲೇ ನೀವು ದೋಷರಹಿತರೆಂಬ ವಿಷಯವು ಏನಾಶ್ಚರ್ಯ ? ಗುಣಗಳೆಲ್ಲಾ ಅರಹಂತರಲ್ಲಿ ಸೇರಿತೆಂಬು ದಾಗಿಯೂ, ರಾಗದ್ವೇಷಗಳೂ ಕ್ರೋಧ ಲೋಭ ಮಾನಮಾಯಾ ಶಂಕಾ ಭಯ ನಿದ್ರಾಪ್ರಮಾದ ಮೊದಲಾದ ದೋಷಗಳೂ ನಾನಾ ದೇವತೆಗಳನ್ನು ಹೊಂದಿದುವೆಂಬುದಾಗಿಯೂ ಸ್ತುತಿಸಿದ ಆಚಾರ್ಯರಿಗೆ ತಾತ್ಪರ್ಯ ವೇನೆಂದರೆ ರಾಗಾದಿದೋಷದೊಡಗೂಡಿದ ದೇವರುಗಳನ್ನು ಮೋಕ್ಷಕ್ಕೋಸ್ಕರ ಧ್ಯಾನಮಾಡಕೂಡದೆಂತಲೂ ವೀತರಾಗನಾದ ಪರಿಶುದ್ಧ ಪರಮಾತ್ಮಧ್ಯಾನ ದಿಂದಲೇ ಆತ್ಮಕಲ್ಯಾಣರೂಪವಾದ ಮೋಕ್ಷವು ಉಂಟಾಗುವುದೆಂತಲೂ ವ್ಯಕ್ತ ವಾಗುತ್ತದೆ. ಇದೇ ಅರ್ಥವನ್ನು ವಾದೀಭಸಿಂಹಸೂರಿಗಳು ಹೀಗೆ ಅಪ್ಪಣೆ ಕೊಟ್ಟಿದ್ದಾರೆ :

ರಾಗಾದಿದೋಷಸಂಯುಕ್ತೈಃಪ್ರಾಣಿನಾಂನೈವತಾರಕಃ
ಧ್ಯಾತೋಗರುಡಬೋಧೇನ ನಹಿಹಂತಿವಿಷಂಬಕಃ ॥

ತಾ॥ ರಾಗವೇ ಮೊದಲಾದ ದೋಷವುಳ್ಳ ದೇವರು ಪ್ರಾಣಿಗಳಿಗೆ ಸಂಸಾರ ಸಮುದ್ರವನ್ನು ದಾಟಿಸಲು ಯೋಗ್ಯವಾಗುವುದೇ ಇಲ್ಲ. ಹೇಗೆಂದರೆ ಬಕಪಕ್ಷಿಯನ್ನು (ಕೊಕ್ಕರೆಯನ್ನು) ಗರುಡನೆಂದು ಧ್ಯಾನಮಾಡಿದರೆ ಆ ಭ್ರಾಂತಿ ರೂಪವಾದ ಧ್ಯಾನವು ಹಾವಿನ ವಿಷವನ್ನು ಇಳಿಸುವುದಿಲ್ಲ. ಹಾಗೆ ವೀತರಾಗ ಧ್ಯಾನವೇ ಮೋಕ್ಷಹೇತುವಾಗುವುದೇ ಹೊರತು ರಾಗಾದಿ ದೋಷದೊಡ ಗೂಡಿದ ದೇವರುಗಳ ಧ್ಯಾನವು ಮೋಕ್ಷಹೇತುವಲ್ಲವೆಂದಭಿಪ್ರಾಯವು.

ಉಚ್ಚೈರಶೋಕತರುಸಂಶ್ರಿತಮುನ್ಮಯೂಖ
ಮಾಭಾತಿರೂಪಮಮಲಂಭವತೋನಿತಾಂತಂ।
ಸ್ಪಷ್ಟೋಲ್ಲಸತ್ಕಿರಣಮಸ್ತತಮೋವಿತಾನಂ
ಬಿಂಬಂರವೇರಿವಪಯೋಧರಪಾರ್ಶ್ವವರ್ತಿ ॥ ೨೮ ॥

೨೮. ತಾ॥ ಓ ಭಗವಂತನೇ ! ತಮ್ಮ ದಿವ್ಯ ದೇಹಕಾಂತಿಯು ಮೇಲ್ಭಾಗದಲ್ಲಿರುವ ಅಶೋಕವೃಕ್ಷವನ್ನು ಆಶ್ರಯಿಸಿ ಮೇಲು ಭಾಗಕ್ಕೆ ಹೋಗು ತ್ತಿರುವ ಕಿರಣವುಳ್ಳದ್ದಾಗಿಯೂ, ಸಮಸ್ತ ಕತ್ತಲೆಯನ್ನು ಹೋಗಲಾಡಿಸುವು ದಾಗಿಯೂ, ಬಹಳ ನಿರ್ಮಲವಾಗಿ ಪ್ರಕಾಶಿಸುವುದಾಗಿಯೂ, ಮೋಡದ ಹತ್ತಿರದಲ್ಲಿರುವ ಸೂರ್ಯಬಿಂಬದಂತೆ ಪ್ರಕಾಶಿಸುತ್ತದೆ. ಆದರೆ ಅಶೋಕ ವೃಕ್ಷವೇ ಒಂದು ಮೋಡದಂತೆ ಕಾಣುತ್ತಿದೆ. ಅದರ ಮೇಲೆ ವ್ಯಾಪಿಸಿರುವ ಶ್ರೀ ಆದಿಜಿನೇಂದ್ರರ ಮಂಡಲಾಕಾರವಾದ ತೇಜಸ್ಸಿನ ರಾಶಿಯೇ ಒಂದು ಸೂರ್ಯಬಿಂಬದಂತೆ ಕಾಣಿಸುತ್ತಿದೆಯೆಂದಭಿಪ್ರಾಯವು. ಇದರಿಂದ ಅಶೋಕ ವೃಕ್ಷವನ್ನೂ, ಭಾಮಂಡಲವನ್ನೂ ವರ್ಣಿಸಿದಂತಾಯಿತು.

ಸಿಂಹಾಸನೇಮಣಿಮಯೂಖಶಿಖಾವಿಚಿತ್ರೇ
ವಿಭ್ರಾಜತೇತವವಪುಃಕನಕಾವದಾತಂ ।
ಬಿಂಬಂವಿಯದ್ವಿಲಸದಂಶುಲತಾವಿತಾನಂ
ತುಂಗೋದಯಾದ್ರಿಶಿರಸೀವಸಹಸ್ರರಶ್ಮೇಃ ॥ ೨೯ ॥

೨೯. ತಾ॥ ಓ ಭಗವಂತನೇ ! ನಾನಾ ವಿಧವಾದ ರತ್ನಗಳ ಕಾಂತಿ ಗಳಿಂದ ವಿಚಿತ್ರವರ್ಣವುಳ್ಳದ್ದಾದ ಸಿಂಹಾಸನದಲ್ಲಿ ಬಂಗಾರದಂತಿರುವ ತಮ್ಮ ಪರಮೌದಾರಿಕ ದಿವ್ಯಶರೀರವು ಆಕಾಶದಲ್ಲಿ ವ್ಯಾಪಿಸುತ್ತಿರುವ ಕಿರಣಸಮೂಹ ವುಳ್ಳದ್ದಾಗಿ ಉದಯಪರ್ವತದ ಶಿಖರದಲ್ಲಿ ಉದಯಿಸಿರುವ ಸೂರ್ಯಬಿಂಬ ದಂತೆ ಪ್ರಕಾಶಿಸುತ್ತಿದೆ. ಉದಯಗಿರಿ ಶಿಖರದಲ್ಲಿ ಉದಯಿಸಿದ ಸೂರ್ಯನು ಹೇಗೆ ಲೋಕೋಪಕಾರಾರ್ಥವಾಗಿಯೇ ಕತ್ತಲೆಯನ್ನು ತೊಲಗಿಸುವನೋ ಹಾಗೆ ಸಮಸ್ತ ಪ್ರಾಣಿಗಳ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಿ ಆದಿ ತೀರ್ಥಂಕರರೂ ಕೂಡ ಭವ್ಯಾತ್ಮರ ಹೃದಯಕಮಲವನ್ನರಳಿಸುವರೆಂದಭಿ ಪ್ರಾಯವು.

ಕುಂದಾವದಾತಚಲಚಾಮರಚಾರುಶೋಭಂ
ವಿಭ್ರಾಜತೇತವವಪುಃಕಲಧೌತಕಾಂತಂ।
ಉದ್ಯಚ್ಛಶಾಙ್ಕಶುಚಿನಿರ್ಝರವಾರಿಧಾರ
ಮುಚ್ಚೈಸ್ತಟಂಸುರಗಿರೇರಿವಶಾತಕೌಂಭಂ ॥ ೩೦ ॥

೩೦. ತಾ॥ ಓ ಜಿನೇಂದ್ರನೇ ! ಮೊಲ್ಲೆ ಹೂವಿನಂತೆ ಬೆಳ್ಳಗಾಗಿಯೂ, ಉಭಯಪಾರ್ಶ್ವಗಳಲ್ಲಿಯೂ, ಬೀಸಲ್ಪಡುವುದಾಗಿಯೂ ಇರುವ ಚಾಮರಪಙ್ಕ್ತಿಯಿಂದ ಶೋಭಿಸುವ, ಮತ್ತು ಬಂಗಾರದಂತೆ ಹೊಳೆಯುವ ತಮ್ಮ ದಿವ್ಯದೇಹವು ಆಗತಾನೆ ಉದಯಿಸುತ್ತಿರುವ ಚಂದ್ರನ ಕಿರಣಗಳಂತೆ ಬೆಳ್ಳಗೆ ಪ್ರಕಾಶಿಸುತ್ತಿರುವ ಶಿಖರದಿಂದ ಕೆಳಮುಖವಾಗಿ ಇಳಿಯುತ್ತಿರುವ ಗಿರಿನದೀ ಪ್ರವಾಹವುಳ್ಳದ್ದಾಗಿಯೂ, ಮತ್ತು ಬಂಗಾರಮಯವಾಗಿಯೂ ಇರುವ ಮಹಾ ಮೇರುಪರ್ವತದಂತೆ ಪ್ರಕಾಶಿಸುತ್ತಿದೆ. ಮೇರುಪರ್ವತವು ಹೇಗೆ ಮೂರು ಲೋಕಗಳನ್ನೂ ವ್ಯಾಪಿಸಿ ಸರ್ವಲೋಕಾಶ್ರಯವಾಗಿಯೂ, ಸರ್ವಶ್ರೇಷ್ಠವಾಗಿಯೂ, ಸ್ಥಿರವಾಗಿಯೂ, ಅತ್ಯುನ್ನತವಾಗಿ ಅಚಿಂತ್ಯಮಹಿಮೆಯುಳ್ಳದ್ದಾಗಿಯೂ ಇರುವುದೋ ಹಾಗೆ ಶ್ರೀ ವೃಷಭಸ್ವಾಮಿಯ ಮಹಿಮೆಯು ಮಾತಿಗೂ ಮನಸ್ಸಿಗೂ ಅಡಗದೆಂದಭಿಪ್ರಾಯವು.

ಛತ್ರತ್ರಯಂತವವಿಭಾತಿಶಶಾಙ್ಕಕಾಂತ
ಮುಚ್ಚೈಃಸ್ಥಿತಂಸ್ಥಗಿತಭಾನುಕರಪ್ರತಾಪಂ ।
ಮುಕ್ತಾಫಲಪ್ರಕರಜಾಲವಿವೃದ್ಧಶೋಭಂ
ಪ್ರಖ್ಯಾಪಯತ್ತ್ರಿಜಗತಃಪರಮೇಶ್ವರತ್ವಂ ॥ ೩೧ ॥

೩೧. ತಾ॥ ಓ ಭಗವಂತನೇ ! ಚಂದ್ರನಂತೆ ಹೊಳೆಯುವಂತಹುದಾಗಿಯೂ, ಸೂರ್ಯಕಿರಣ ಸಂತಾಪವನ್ನು ಮುಚ್ಚುವುದಾಗಿಯೂ (ತಡೆಯುವುದಾಗಿಯೂ) ಸುತ್ತಲೂ ಮುತ್ತಿನ ಕುಚ್ಚುಗಳಿಂದ ಪ್ರಕಾಶಿಸುತ್ತಿರುವುದಾಗಿಯೂ ಮೇಲುಭಾಗದಲ್ಲಿರುವ ತಮ್ಮ ಮುಕ್ಕೊಡೆಯು ತಾವೇ ಮೂರು ಲೋಕಗಳಿಗೂ ಸ್ವಾಮಿಯೆಂಬ ಭಾವವನ್ನು ಸೂಚಿಸುವಂತಹುದಾಗಿ ಪ್ರಕಾಶಿಸುತ್ತಿದೆ. ಇದು ಮುಕ್ಕೊಡೆಯೆಂಬ ಪ್ರಾತಿಹಾರ್ಯವೆನಿಸಿದ ಸಂಪತ್ತಿನ ವರ್ಣನವು.

ಗಂಭೀರತಾರರವಪೂರಿತದಿಗ್ವಿಭಾಗ
ಸ್ತ್ರೈಲೋಕ್ಯಲೋಕಶುಭಸಙ್ಗಮಭೂತಿದಕ್ಷಃ ।
ಸದ್ಧರ್ಮರಾಜಜಯಘೋಷಣಘೋಷಕಸ್ಸ
ನ್ಖೇದುಂದುಭಿರ್ಧ್ವನತಿ ತೇಯಶಸಃಪ್ರವಾದೀ ॥ ೩೨ ॥

೩೨. ತಾ॥ ಓ ಭಗವಂತನೇ ! ಸಮವಸರಣ ವಿರಾಜಮಾನರಾದ ತಮ್ಮ ಸೇವಕರಾದ ದೇವರುಗಳಿಂದ ಹೊಡೆಯಲ್ಪಟ್ಟ ದುಂದುಭಿಧ್ವನಿಯು ಗಂಭೀರವಾಗಿ ಆಕಾಶವನ್ನೆಲ್ಲಾ ತುಂಬಿಕೊಂಡು ದಿಕ್ಕುಗಳ ಕೊನೆಯವರೆಗೂ ವ್ಯಾಪಿಸುವಂತಹುದಾಗಿಯೂ, ಮೂರು ಲೋಕಗಳಲ್ಲಿರುವ ಸಮಸ್ತ ಜೀವರಾಶಿಗಳಿಗೂ ಶುಭವನ್ನು (ಸುಖವನ್ನು) ಕೊಡುವುದರಲ್ಲಿ ಸಮರ್ಥವಾಗಿಯೂ, ಶ್ರೇಷ್ಠವಾದ ಧರ್ಮಗಳಿಗೆ ರಾಜರಾದಂತಹ ಆದಿ ತೀರ್ಥಂಕರರಾದ ತಮ್ಮ ಕರ್ಮಗಳೆಂಬ ಶತ್ರುಗಳ ಜಯವನ್ನು ಪ್ರಕಟಪಡಿಸುವ ವಾದ್ಯ ಧ್ವನಿಯಂತೆ ಘೋಷಿಸುವುದಾಗಿಯೂ, ಮತ್ತು ಯಶಸ್ಸನ್ನು ಘಟ್ಟಿಯಾಗಿ ಹೇಳುವುದಾಗಿಯೂ, ಆಕಾಶದಲ್ಲಿ ಶಬ್ದಮಾಡುತ್ತದೆ. ಇದು ದೇವದುಂದುಭಿ ಎಂಬ ಪ್ರಾತಿಹಾರ್ಯವೆನಿಸಿದ ಸಂಪತ್ತಿನ ವರ್ಣನವಾಗಿದೆ.

ಮಂದಾರಸುಂದರನಮೇರುಸುಪಾರಿಜಾತ
ಸಂತಾನಕಾದಿಕುಸುಮೋತ್ಕರವೃಷ್ಟಿರುದ್ಧಾ ।
ಗಂಧೋದಬಿಂದುಶುಭಮಂದಮರುತ್ಪ್ರಪಾತಾ
ದಿವ್ಯಾದಿವಃಪತತಿತೇವಚ(ಯು)ಸಾಂತತಿರ್ವಾ ॥ ೩೩ ॥

೩೩. ತಾ॥ ಓ ಲೋಕನಾಥನೇ ! ತಾವು ದೇವನಿರ್ಮಿತವಾದ ಸಮವಸರಣ ಸಭೆಯಲ್ಲಿ ದಿವ್ಯ ಸಿಂಹಾಸನಾರೂಢರಾಗಿ ಪ್ರಕಾಶಿಸುತ್ತಿರಲು ದೇವತೆಗಳು ಮಂದಾರವೆಂದೂ, ಸುಂದರವೆಂದೂ, ನಮೇರುವೆಂದೂ, ಶ್ರೇಷ್ಠವಾದ ಪಾರಿಜಾತವೆಂದೂ, ಸಂತಾನಕವೆಂದೂ ಹೆಸರುಳ್ಳ ಕಲ್ಪವೃಕ್ಷಗಳ ಪುಷ್ಪವೃಷ್ಟಿಯು ಪರಿಮಳದೊಡಗೂಡಿದ ನೀರಿನ ಹನಿಗಳೊಡಗೂಡಿ ಲೋಕಕ್ಕೇ ಮಂಗಳ ಸೂಚಕವಾಗಿ ಬೀಸುತ್ತಿರುವ ತಂಗಾಳಿಸಹಿತವಾಗಿ ಕೆಳಗೆ ಬೀಳುತ್ತದೆ. ಅಥವಾ ತಮ್ಮ ದಿವ್ಯವಾಣಿಯೇ ಬೀಳುತ್ತಿವೆಯೋ ಎಂಬಂತಿದೆ.

(ಪಯಸಾಂತತಿರ್ವಾ) ಎಂಬುದಾಗಿಯೂ ಪಾಠಾಂತರವುಂಟು ಆ ಪಕ್ಷದಲ್ಲಿ ಆ ಪುಷ್ಪವೃಷ್ಟಿಯು ಆಕಾಶದಲ್ಲಿ ಹಾರಾಡುವ ಪಕ್ಷಿಗಳ ಸಾಲಿನಂತೆ ಇತ್ತೆಂದರ್ಥವು. ಈ ಶ್ಲೋಕದಲ್ಲಿ ಪುಷ್ಪವೃಷ್ಟಿಯೆಂಬ ಪ್ರಾತಿಹಾರ್ಯವು ವರ್ಣಿಸಲ್ಪಟ್ಟಿತು.

ಶುಂಭತ್ಪ್ರಭಾವಲಯಭೂರಿವಿಭಾವಿಭೋಸ್ತೇ
ಲೋಕತ್ರಯೇದ್ಯುತಿಮತಾಂದ್ಯುತಿಮಾಕ್ಷಿಪಂತೀ ।
ಪ್ರೋದ್ಯದ್ದಿವಾಕರನಿರಂತರಭೂರಿಸಂಖ್ಯಾ
ದೀಪ್ತ್ಯಾಜಯತ್ಯಪಿನಿಶಾಮಪಿಸೋಮಸೌಮ್ಯಾಂ ॥ ೩೪ ॥

೩೪. ತಾ॥ ಓ ಪ್ರಭುವೇ ! ಉದಯಿಸುತ್ತಿರುವ ಅನೇಕ ಸೂರ್ಯರ ಕಾಂತಿಗೆ ಸಮಾನಕಾಂತಿಯುಳ್ಳದ್ದಾಗಿ ಪ್ರಕಾಶಿಸುತ್ತಿರುವ ತಮ್ಮ ತೇಜಸ್ಸುಗಳ ಸಮೂಹವೆಂಬ ಭಾಮಂಡಲವು, ಮೂರು ಲೋಕದಲ್ಲಿರುವ ತೇಜಸ್ಸು ಪದಾರ್ಥಗಳನ್ನು ಜರಿಯುವಂತಹುದಾಗಿ ಚಂದ್ರನಿಂದ ಶೋಭಾಯಮಾನವಾದ ರಾತ್ರಿಯನ್ನು ಕೂಡ ಜಯಿಸುತ್ತದೆ. ಅಂದರೆ ಆ ಭಾಮಂಡಲವು ಚಂದ್ರಕಾಂತಿಯಂತೆ ತಣ್ಣಗೆ ಆನಂದಕರವಾಗಿದೆ. ಸೂರ್ಯಕಿರಣದಂತೆ ಸಂತಾಪಕರವಲ್ಲದೆ ಪ್ರಕಾಶದಲ್ಲಿ ಮಾತ್ರ ಸೂರ್ಯತೇಜಸ್ಸಿನಂತಿದೆ ಯೆಂದಭಿಪ್ರಾಯವು. ಅಂದರೆ ಚಂದ್ರಪ್ರಕಾಶದಿಂದಲೂ ಚೆನ್ನಾಗಿ ತೊಲಗದ ಕತ್ತಲೆಯನ್ನು ತಮ್ಮ ತೇಜಸ್ಸಿನ ಮಂಡಲವು ನಿಶ್ಶೇಷವಾಗಿ ಹೋಗಲಾಡಿಸುತ್ತಾದ್ದರಿಂದ ರಾತ್ರಿ ಹಗಲೆಂಬ ಭೇದವನ್ನೇ ತೋರದ ಹಾಗೆ ಮಾಡಿ ಸರ್ವದಾ ಏಕರೀತಿಯಾಗಿ ಪ್ರಕಾಶಿಸುತ್ತದೆಂದು ಮುಖ್ಯಾಭಿಪ್ರಾಯವು. ಇಲ್ಲಿ (ಸೋಮಸೌಮ್ಯಾ) ಎಂದು ಪಾಠವುಂಟು, ಆ ಪಕ್ಷದಲ್ಲಿ ಚಂದ್ರನಂತೆ ತಮ್ಮ ಭಾಮಂಡಲವು ಶಾಂತ ತೇಜಸ್ಸಾಗಿದೆ, ಎಂದರ್ಥವು.

ಸ್ವರ್ಗಾಪವರ್ಗಗಮಮಾರ್ಗವಿಮಾರ್ಗಣೇಷ್ಟಃ
ಸದ್ಧರ್ಮ ತತ್ವಕಥನೈಕಪಟುಸ್ತ್ರಿ ಲೋಕ್ಯಾಃ ।
ದಿವ್ಯಧ್ವನಿರ್ಭವತಿತೇವಿಶದಾರ್ಥಸರ್ವ
ಭಾಷಾಸ್ವಭಾವಪರಿಣಾಮಗುಣಪ್ರಯೋಜ್ಯಃ ॥ ೩೫ ॥

೩೫. ತಾ॥ ಓ ಜಿನದೇವನೇ ! ತಮ್ಮ ದಿವ್ಯಧ್ವನಿಯು ಸ್ವರ್ಗ ಸುಖವನ್ನಪೇಕ್ಷಿಸುವವರಿಗೆ ಸ್ವರ್ಗಕ್ಕೆ ಸಾಧಕವಾದ ಧರ್ಮವನ್ನೂ, ಮೋಕ್ಷವನ್ನಪೇಕ್ಷಿಸುವ ಮುನಿಗಳಿಗೆ ಮೋಕ್ಷಕಾರಣವಾದ ತಪಸ್ಸನ್ನೂ (ರತ್ನತ್ರಯವನ್ನೂ) ಉಪದೇಶಿಸುವುದಾಗಿಯೂ, ಮೂರು ಲೋಕದ ಪ್ರಾಣಿಗಳಿಗೂ ಶ್ರೇಷ್ಠವಾದ ಧರ್ಮವನ್ನು ಹೇಳುವುದರಲ್ಲಿ ಸಮರ್ಥವಾಗಿಯೂ ಮತ್ತು ಸರ್ವಜನಗಳಿಗೂ ಸ್ಪಷ್ಟಾರ್ಥವುಳ್ಳ ಅವರವರ ಭಾಷೆಯಾಗಿ ಪರಿಣಮಿಸುವ ಸ್ವಭಾವವುಳ್ಳದ್ದಾಗಿಯೂ ಆಗುತ್ತದೆ. ಇದು ದಿವ್ಯಧ್ವನಿವರ್ಣನವು.

ಉನ್ನಿದ್ರಹೇಮನವಪಂಕಜಪುಂಜಕಾಂತೀ
ಪರ್ಯುಲ್ಲಸನ್ನಖಮಯೂಖಶಿಖಾಭಿರಾಮೌ ।
ಪಾದೌಪದಾನಿತವಯತ್ರಜಿನೇಂದ್ರಧತ್ತಃ
ಪದ್ಮಾನಿತತ್ರವಿಬುಧಾಃ ಪರಿಕಲ್ಪಯಂತಿ ॥ ೩೬ ॥

೩೬. ತಾ॥ ಓ ಜಿನೇಂದ್ರನೇ ! ಅರಳಿರುವ ಬಂಗಾರದ ಕಮಲ ಸಮೂಹಕ್ಕೆ ಸಮಾನ ಕಾಂತಿಯುಳ್ಳದ್ದಾಗಿಯೂ, ನಾಲ್ಕುಕಡೆಗೂ ಎರಚುತ್ತಿರುವ ಉಗುರುಗಳ ಕಾಂತಿಗಳಿಂದ ಮನೋಹರವಾಗಿಯೂ (ಪರಮಸುಂದರವಾಗಿಯೂ) ಇರುವ ತಮ್ಮ ಪಾದಗಳು ಎಲ್ಲಿ ಹೆಜ್ಜೆಗಳನ್ನಿಡುತ್ತವೆಯೋ ಅಲ್ಲಿ ದೇವತೆಗಳು (ವೈಕ್ರಿಯಿಕಋದ್ಧಿಯಿಂದ) ಕಮಲಗಳನ್ನು ನಿರ್ಮಿಸುತ್ತಾರೆ. ಸಂಚಾರಕಾಲದಲ್ಲಿ ಜಿನೇಂದ್ರರ ಹೆಜ್ಜೆ ಇಡುವಸ್ಥಳದಲ್ಲಿ ಕೆಳಗೆ ಕಮಲಗಳನ್ನು ನಿರ್ಮಿಸುತ್ತಾರೆಂದಭಿಪ್ರಾಯವು.

ಇತ್ಥಂಯಥಾತವವಿಭೂತಿರಭೂಜ್ಜಿನೇಂದ್ರ
ಧರ್ಮೋಪದೇಶನವಿಧೌನತಥಾಪರಸ್ಯ ।
ಯಾದೃಕ್ಪ್ರಭಾದಿನಕೃತಃಪ್ರಹತಾಂಧಕಾರಾ
ತಾದೃಕ್ಕುತೋಗ್ರಹಗಣಸ್ಯವಿಕಾಶಿನೋಪಿ ॥ ೩೭ ॥

೩೭. ತಾ॥ ಓ ಜಿನೇಂದ್ರನೇ ! ತಾವು ಸಮವಸರಣ ವಿರಾಜಮಾನರಾಗಿ ಧರ್ಮವನ್ನು ಉಪದೇಶಿಸುವ ಕಾಲದಲ್ಲಿ ಪೂರ್ವದಲ್ಲಿ ಹೇಳಿದಂತಹ ಅಶೋಕವೃಕ್ಷ, ಸುರಪುಷ್ಪವೃಷ್ಟಿ, ದಿವ್ಯಧ್ವನಿ, ಚಾಮರ, ಸಿಂಹಾಸನ, ಭಾಮಂಡಲ, ದೇವದುಂದುಭಿ, ಮುಕ್ಕೊಡೆ ಈ ಎಂಟು ಪ್ರಾತಿಹಾರ್ಯ ಸಂಪತ್ತೆಂಬ ಬಹಿರಂಗ ಲಕ್ಷ್ಮಿಯು ತಮಗೆ ಹೇಗೆ ಉಂಟಾಯಿತೋ ಹಾಗೆ

ಇತರ ದೇವರುಗಳಿಗೆ (ಹರಿಹರಾದಿ ದೇವರುಗಳಿಗೆ) ಉಂಟಾಗಲಿಲ್ಲ. ಇದು ಯುಕ್ತವೇ ಸರಿ. ಹೇಗೆಂದರೆ ಸಮಸ್ತ ಕತ್ತಲೆಯನ್ನು ತೊಲಗಿಸುವ ಸೂರ್ಯ ಪ್ರಭೆಯು ಯಾವ ಪ್ರಕಾರವಾದದ್ದೋ ಅಂತಹ ಪ್ರಭೆಯು ತೇಜೋರೂಪ ಗಳಾಗಿದ್ದರೂ ಚಂದ್ರ ತಾರಾದಿಗಳೆಲ್ಲಾ ಒಟ್ಟಿಗೆ ಸೇರಿದ ಗುಂಪಿಗೂ ಕೂಡ ಸಂಭವಿಸುವುದಿಲ್ಲವಷ್ಟೆ ?

ಶ್ಚ್ಯೋತನ್ಮದಾಲಿವಿಲವಿಲೋಲಕಪೋಲಮೂಲ
ಮತ್ತಭ್ರಮದ್ಭ್ರಮರನಾದವಿವೃದ್ಧಕೋಪಂ ।
ಐರಾವತಾಭಮಿಭಮುದ್ಧತಮಾಪತಂತಂ
ದೃಷ್ಟ್ವಾಭಯಂಭವತಿನೋಭವದಾಶ್ರಿತಾನಾಂ ॥ ೩೮ ॥

೩೮. ತಾ॥ ಓ ಜಿನನಾಥನೇ ! ಮದವೇರಿ ಕೆನ್ನೆಗಳಿಂದ ಸುರಿಯುತ್ತಿರುವ ಮದಜಲ ಪ್ರವಾಹವುಳ್ಳದ್ದಾಗಿಯೂ, ಆ ಮದಜಲದ ವಾಸನೆ ಗೋಸ್ಕರ ಕೆನ್ನೆಗಳ ಹತ್ತಿರ ಸುತ್ತುತ್ತಿರುವ ದುಂಬಿಗಳ ಝೇಂಕಾರಧ್ವನಿಯಿಂದ ಹೆಚ್ಚಾದ ಕೋಪವುಳ್ಳದ್ದಾಗಿಯೂ, ಐರಾವತದಂತೆ ಅತ್ಯಂತ ಉನ್ನತವಾದ ಆಕಾರವುಳ್ಳದ್ದಾಗಿಯೂ, ಮಹಾ ಗರ್ವಿತವಾಗಿಯೂ, ಎದುರಿಗೆ ಬರುತ್ತಿರುವ ಆನೆಯನ್ನು ನೋಡಿ ನಿಮ್ಮನ್ನು ಆಶ್ರಯಿಸಿರುವ ಭಕ್ತರಿಗೆ ಭಯ ವುಂಟಾಗುವುದಿಲ್ಲ. ಅಂದರೆ ನಿಮ್ಮ ಪಾದವನ್ನು ಆಶ್ರಯಿಸಿದವನನ್ನು ಆ ಪಾದಭಕ್ತಿ ಮಹಾತ್ಮ್ಯವೇ ಅಂತಹ ವಿಪತ್ತನ್ನು ಕೂಡ ತಪ್ಪಿಸಿ ಕಾಪಾಡುವು ದೆಂದರ್ಥವು. ಅಂತಹ ಘೋರವಾದ ಆನೆಯು ಕೂಡ ಕ್ಷಮಾದಯಾ ಶಾಂತಾದಿ ಗುಣ ಸಮುದ್ರಪ್ರಾಯರಾದ ತಮ್ಮ ಆಶ್ರಿತನ ವಿಷಯದಲ್ಲಿ ಶಾಂತಿ ಯನ್ನು ಹೊಂದುವುದೆಂದಭಿಪ್ರಾಯವು.

ಭಿನ್ನೇಭಕುಂಭಗಲದುಜ್ಜ್ವಲಶೋಣಿತಾಕ್ತ
ಮುಕ್ತಾಫಲಪ್ರಕರಭೂಷಿತಭೂಮಿಭಾಗಃ ।
ಬದ್ಧಕ್ರಮಃಕ್ರಮಗತಂಹರಿಣಾಧಿಪೋಪಿ
ನಾಕ್ರಾಮತಿಕ್ರಮಯುಗಾಚಲಸಂಶ್ರಿತಂತೇ ॥ ೩೯ ॥

೩೯. ತಾ॥ ಓ ರಕ್ಷಕನೇ ! ಮದಿಸಿದ ಆನೆಯ ಮೇಲೆ ಹಾರಿ ಕುಂಭ ಸ್ಥಲವನ್ನು ಬಗೆದು ರಕ್ತದೊಡಗೂಡಿ ಚೆಲ್ಲಿದ ಮುತ್ತುಗಳಿಂದ ಭೂಮಿಯನ್ನು ಅಲಂಕರಿಸುತ್ತಿರುವ ಮೇಲೆ ಬೀಳುವುದಕ್ಕೆ ಹೆಜ್ಜೆ ಇಟ್ಟಿರುವ (ಇಲ್ಲಿ ಬದ್ಧ ಕ್ರಮಃ ಎಂಬ ಪದಕ್ಕೆ ಕಟ್ಟಲ್ಪಟ್ಟ ಕಾಲುಳ್ಳ ಸಿಂಹವು ಎಂದು ಅರ್ಥವಾಗು ತ್ತದೆ. ಆ ಪಕ್ಷದಲ್ಲಿ ತಾತ್ಪರ್ಯವೇನೆಂದರೆ-ಸಿಂಹವು ಸ್ವಭಾವದಿಂದಲೇ ಕ್ರೂರವು ಅದನ್ನು ಪಂಜರದಲ್ಲಿಯೂ ಕೂಡಿದ್ದರೆ ಎಷ್ಟು ರೋಷವುಳ್ಳದ್ದಾ ಗಿರಬಹುದು ? ಅಂತಹ ಸಿಂಹವೂ ಕೂಡ ತಮ್ಮ ಪಾದಾಶ್ರಿತನನ್ನು ಕೊಲ್ಲುವು ದಿಲ್ಲವೆಂದಭಿಪ್ರಾಯವು) ಸಿಂಹವೂ ಕೂಡ ನಿಮ್ಮ ಪಾದವೆಂಬ ಪರ್ವತವನ್ನು ಆಶ್ರಯಿಸಿದವನನ್ನು ಮತ್ತು ತನ್ನ ಕಾಲಿಗೆ ಸಿಕ್ಕಿದವನನ್ನು ಹಿಡಿದುಕೊಳ್ಳುವು ದಿಲ್ಲ, ನಿಮ್ಮ ಭಕ್ತರ ವಿಷಯದಲ್ಲಿ ಅಂತಹ ಕ್ರೂರಜಂತುವಾದ ಸಿಂಹವೂ ಕೂಡ ಶಾಂತವಾಗುತ್ತದೆಂದಭಿಪ್ರಾಯವು.

ಕಲ್ಪಾಂತಕಾಲ ಪವನೋದ್ಧತವಹ್ನಿಕಲ್ಪಂ
ದಾವಾನಲಂಜ್ವಲಿತಮುಜ್ಜ್ವಲಮುತ್ಸ್ಫುಲಿಂಗಂ ।
ವಿಶ್ವಂಜಿಘತ್ಸುಮಿವಸಮ್ಮುಖಮಾಪತಂತಂ
ತ್ವನ್ನಾಮಕೀರ್ತನಜಲಂಶಮಯತ್ಯಶೇಷಂ ॥ ೪೦ ॥

೪೦. ತಾ॥ ಓ ಜಿನೇಂದ್ರನೇ ! ಪ್ರಳಯಕಾಲದ ಗಾಳಿಯಿಂದ ಜ್ವಲಿತ ವಾದ ಬೆಂಕಿಯಂತೆ ನಾಲ್ಕು ಕಡೆಯೂ ಜ್ವಾಲಾಮಯವಾಗಿಯೂ, ಮೇಲಕ್ಕೆ ಹಾರುತ್ತಿರುವ ಕಿಡಿಗಳುಳ್ಳದ್ದಾಗಿಯೂ, ಲೋಕವನ್ನೆಲ್ಲಾ ಭಕ್ಷಿಸಲಿಚ್ಛೆ ಯಿಂದಲೋ ಎಂಬಂತೆ ಎದುರಿಗೆ ಬರುತ್ತಿರುವ ಕಾಡುಗಿಚ್ಚನ್ನೂ ಕೂಡ ತಮ್ಮ ನಾಮ ಸಂಕೀರ್ತನವೆಂಬ ನೀರು ನಿಶ್ಶೇಷವಾಗಿ ಅಡಗಿಸುತ್ತದೆ. ಅಂದರೆ ತಮ್ಮ ಶರಣಾಗತನು ದೃಢಭಕ್ತಿಯಿಂದ ತಮ್ಮ ನಾಮಸಂಕೀರ್ತನವನ್ನು ಮಾಡುತ್ತಾ ಇರಲು ಅಂತಹ ಕಾಡುಗಿಚ್ಚೂ ಕೂಡ ತಾನೇ ಶಾಂತವಾಗಿ ಹೋಗುತ್ತದೆ. ತಮ್ಮ ಧ್ಯಾನ, ಸ್ತೋತ್ರ, ನಾಮಸಂಕೀರ್ತನ ಮಹಾತ್ಮ್ಯವು ಅಚಿಂತ್ಯವಾದದ್ದೆಂದಭಿಪ್ರಾಯವು.

ರಕ್ತೇಕ್ಷಣಂಸಮದಕೋಕಿಲಕಂಠನೀಲಂ
ಕ್ರೋಧೋದ್ಧತಂಫಣಿನಮುತ್ಫಣಮಾಪತಂತಂ ।
ಆಕ್ರಾಮತಿಕ್ರಮಯುಗೇನನಿರಸ್ತಶಙ್ಕ
ಸ್ತ್ವನ್ನಾಮನಾಗದಮನೀಹೃದಿಯಸ್ಯಪುಂಸಃ ॥ ೪೧ ॥

೪೧. ತಾ॥ ಓ ಜಿನನಾಥನೇ ! ರೋಷದಿಂದ ಕೆಂಪಾದ ಕಣ್ಣುಗಳುಳ್ಳದ್ದಾಗಿಯೂ, ಮದಿಸಿದ ಕೋಗಿಲೆಯ ಕಂಠದಂತೆ ನೀಲವರ್ಣವುಳ್ಳದ್ದಾಗಿಯೂ, ಕೋಪಾವೇಶದಿಂದ ಹೆಡೆಯನ್ನು ಎತ್ತಿಕೊಂಡು ಎದುರಿಗೆ ಬರುತ್ತಿರುವ ಕೃಷ್ಣ ಸರ್ಪವನ್ನು, ನಿಮ್ಮ ಭಕ್ತನು ಮನಸ್ಸಿನಲ್ಲಿ ನಿಮ್ಮ ನಾಮಸ್ಮರಣೆಯನ್ನು ಮಾಡುತ್ತಾ ಭಯವಿಲ್ಲದವನಾಗಿ ಎರಡು ಕಾಲುಗಳಿಂದಲೂ ತುಳಿದು ಅಡಗಿಸುವನು. ಆದುದರಿಂದ ನಿಮ್ಮ ನಾಮಸ್ಮರಣೆಯೇ ಹಾವನ್ನು ಅಡಗಿಸುವ ಗರುಡಮಂತ್ರಸಮಾನವೆಂದರ್ಥವು.

ವಲ್ಗತ್ತುರಂಗಗಜಗರ್ಜಿತಭೀಮನಾದ
ಮಾಜೌಬಲಂಬಲವತಾಮಪಿಭೂಪತೀನಾಂ ।
ಉದ್ಯದ್ದಿವಾಕರಮಯೂಖಶಿಖಾಪವಿದ್ಧಂ
ತ್ವತ್ಕೀರ್ತನಾತ್ತಮಇವಾಶುಭಿದಾಮುಪೈತಿ ॥ ೪೨ ॥

೪೨. ತಾ॥ ಓ ಆದಿಜಿನೇಂದ್ರನೇ ! ಕುಣಿಯುತ್ತಿರುವ ಕುದುರೆಗಳೂ, ಗರ್ಜಿಸುತ್ತಿರುವ ಆನೆಗಳೂ, ಇವುಗಳೊಡಗೂಡಿದ ಮಹಾ ಭಯಂಕರವಾದ ಶಬ್ದವುಳ್ಳ ಬಲಿಷ್ಠರಾದ ಶತ್ರುರಾಜರ ಸೈನ್ಯವು, ಉದಿಸಿದ ಸೂರ್ಯನ ಕಿರಣಗಳಿಂದ ಕಗ್ಗತ್ತಲೆಯು ತೊಲಗುವಂತೆ ತಮ್ಮ ನಾಮಸಂಕೀರ್ತನದಿಂದ ತೊಲಗಿ ಹೋಗುವುದು. ತಮ್ಮಲ್ಲಿ ದೃಢಭಕ್ತಿ ಇರುವವನು ಅಸಾಧ್ಯವಾಗಿ ಭಯಂಕರವಾದ ಶತ್ರುಸೈನ್ಯವನ್ನು ಕೂಡ ಜಯಿಸುವನೆಂದಭಿಪ್ರಾಯವು.

ಕುಂತಾಗ್ರಭಿನ್ನಗಜಶೋಣಿತವಾರಿವಾಹ
ವೇಗಾವತಾರತರಣಾತುರಯೋಧಭೀಮೇ ।
ಯುದ್ಧೇಜಯಂವಿಜಿತದುರ್ಜಯಜೇಯಪಕ್ಷಾ
ಸ್ತ್ವತ್ಪಾದಪಂಕಜವನಾಶ್ರಯಿಣೋಲಭಂತೇ ॥ ೪೩ ॥

೪೩. ತಾ॥ ಓ ದೇವಾಧಿದೇವನೇ ! ನಿಮ್ಮ ಪಾದಕಮಲವೆಂಬ ವನವನ್ನಾಶ್ರಯಿಸಿದವರು ಭರ್ಜಿ (ಕುಂತಾಯುಧ) ಗಳಿಂದ ಇರಿಯಲ್ಪಟ್ಟ ಆನೆಗಳ ರಕ್ತ ಪ್ರವಾಹದಲ್ಲಿ ವೇಗದಿಂದ ಇಳಿಯುವುದಕ್ಕಾಗದೇ ವ್ಯಥೆ ಪಡುತ್ತಿರುವ ಭಟರುಗಳಿಂದ ಭಯಂಕರವಾದ ಯುದ್ಧದಲ್ಲಿ ಜಯಿಸಲಶಕ್ಯರಾದ ಶತ್ರುಗಳನ್ನು ಕೂಡ ಜಯಿಸುತ್ತಾರೆ. ತಮ್ಮ ಪಾದಭಕ್ತಿಯು ಸಕಲ ಅನಿಷ್ಟಗಳನ್ನೂ ಪರಿಹರಿಸಿ ಶ್ರೇಯಸ್ಸನ್ನುಂಟುಮಾಡುವುದೆಂದಭಿಪ್ರಾಯವು.

ಅಂಭೋನಿಧೌಕ್ಷುಭಿತಭೀಷಣನಕ್ರಚಕ್ರ
ಪಾಠೀನಪೀಠಭಯದೋಲ್ಬಣಬಾಡಬಾಗ್ನೌ ।
ರಂಗತ್ತರಂಗಶಿಖರಸ್ಥಿತಯಾನಪಾತ್ರಾ
ಸ್ತ್ರಾಸಂವಿಹಾಯಭವತಃಸ್ಮರಣಾದ್ವ್ರಜಂತಿ ॥ ೪೪ ॥

೪೪. ತಾ॥ ಓ ಜಗದಾಧಾರಸ್ವರೂಪನೇ ! ಗಾಳಿಯ ಹೊಡೆತದಿಂದ ತೆರೆವಾಲೆಗಳೆದ್ದು ಅಲ್ಲೋಲಕಲ್ಲೋಲವಾದಂತಹ ಭಯಂಕರವಾದ ಮೊಸಳೆಗಳ ಸಮೂಹದಿಂದಲೂ, ಪಾಠೀನವೆಂಬ ಮೀನುಗಳಿಂದಲೂ, ಪೀಠವೆಂಬ ಮತ್ತೊಂದು ಜಾತಿಯ ಮೀನುಗಳಿಂದಲೂ, ಭಯಂಕರವಾದ ಬಡಬಾಗ್ನಿಯುಳ್ಳ ಸಮುದ್ರದಲ್ಲಿ ಬಹಳವಾಗಿ ಅಲ್ಲಾಡುತ್ತಿರುವ ದೊಡ್ಡದೊಡ್ಡ ಅಲೆಗಳ ರಾಶಿಯ ಮೇಲೆ ಬಹಳ ಚಲಿಸುತ್ತಿರುವ ಹಡಗುಗಳಲ್ಲಿ ಕುಳಿತಿರುವವರು (ಆಕಸ್ಮಾತ್ತಾಗಿ ಹಡಗು ಮುಳುಗುವ ಸ್ಥಿತಿಯಲ್ಲಿರುವವರು) ಪ್ರಾಣಭೀತಿಯನ್ನು ಬಿಟ್ಟು ದೃಢಭಕ್ತಿಯಿಂದ ತಮ್ಮನ್ನು ಸ್ಮರಿಸುವಂಥವರಾಗಲು ಆ ಹಡಗು ಮುಳುಗದೆ ತಪ್ಪಿ ದಡವನ್ನು ಸೇರುವರು.

ಉದ್ಭೂತಭೀಷಣಜಲೋದರಭಾರಭುಗ್ನಾಃ
ಶೋಚ್ಯಾಂದಶಾಮುಪಗತಾಶ್ಚ್ಯುತಜೀವಿತಾಶಾಃ ।
ತ್ವತ್ಪಾದಪಂಕಜರಜೋಮೃತದಿಗ್ಧದೇಹಾ
ಮರ್ತ್ಯಾಭವಂತಿಮಕರಧ್ವಜತುಲ್ಯರೂಪಾಃ ॥ ೪೫ ॥

೪೫. ತಾ॥ ಓ ಸಕಲಕರ್ಮ ಶತ್ರುಗಳನ್ನು ಗೆದ್ದಂತಹ ಜಿನರಾಜನೇ ! ಪೂರ್ವಜನ್ಮದ ಘೋರಪಾಪದಿಂದುಂಟಾದ ಭಯಂಕರ ಜಲೋದರವೆಂಬ

ಮಹಾ ರೋಗದಿಂದ ಬಾಧೆಪಡುತ್ತಿರುವವರಾಗಿಯೂ, ಬಹು ದುಃಖಾವಸ್ಥೆಯನ್ನು ಹೊಂದಿದವರಾಗಿಯೂ, ಇನ್ನುಮೇಲೆ ಬದುಕುವುದಿಲ್ಲವೆಂದು ನಿಶ್ಚಯಿಸಿಕೊಂಡಿರುವವರಾಗಿಯೂ ಇರುವ ಮನುಷ್ಯರು ನಿಮ್ಮ ಪಾದಧೂಳಿಯೆಂಬ ಅಮೃತವನ್ನು ಮೈಗೆ ಹಚ್ಚಿಕೊಳ್ಳಲು ಮನ್ಮಥಸಮಾನ ರೂಪುಉಳ್ಳವರಾಗುತ್ತಾರೆ.

ಅಪಾದಕಂಠಮುರುಶೃಂಖಲವೇಷ್ಟಿತಾಂಗಾ
ಗಾಢಂಬೃಹನ್ನಿಗಡಕೋಟಿನಿಘೃಷ್ಟಜಂಘಾಃ ।
ತ್ವನ್ನಾಮಮಂತ್ರಮನಿಶಂಮನುಜಾಸ್ಸ್ಮರಂತ
ಸ್ಸದ್ಯಸ್ಸ್ವಯಂವಿಗತಬಂಧಭಯಾಭವಂತಿ ॥ ೪೬ ॥

೪೬. ತಾ॥ ಓ ಸರ್ವ ಆಪತ್ಪರಿಹಾರಕ ಪ್ರಭುವೇ ! ಯಾವ ಮನುಷ್ಯರು ಕಾಲಿನಿಂದ ಕುತ್ತಿಗೆಯವರೆಗೂ ದಪ್ಪ ಸರಪಣಿಗಳಿಂದ (ಬೇಡಿಗಳಿಂದ) ಸುತ್ತಲ್ಪಟ್ಟ ದೇಹವುಳ್ಳವರಾಗಿಯೂ, ಗಟ್ಟಿಯಾಗಿ ಆ ಸಂಕೋಲೆಯ ತುದಿಗಳಿಂದ ಘಾಯವಾಗಿರುವ ತೊಡೆಗಳುಳ್ಳವರಾಗಿಯೂ ಕ್ಲೇಶಪಡುತ್ತಿರುವ ಮನುಷ್ಯರು ತಮ್ಮ ನಾಮಸ್ಮರಣೆಯನ್ನು ಮಾಡಿದ ಕ್ಷಣದಲ್ಲಿಯೇ ತನಗೆ ತಾನೇ ಆ ಬಂದೀಖಾನೆ ಸಂಕೋಲೆಗಳು ಬಿಟ್ಟುಹೋಗಿ ಆ ಬಂಧನ ಭೀತಿಯನ್ನು ಬಿಟ್ಟು ಸುಖಿಗಳಾಗುತ್ತಾರೆ. ತಮ್ಮ ನಾಮಸ್ಮರಣವು ಸಮಸ್ತ ವಿಪತ್ತುಗಳನ್ನು ಪರಿಹರಿಸಿ, ಸಮಸ್ತ ಇಷ್ಟಾರ್ಥಗಳನ್ನು ಕೊಟ್ಟು ಕಾಪಾಡುತ್ತದೆಂದಭಿಪ್ರಾಯವು.

ಮತ್ತದ್ವಿಪೇಂದ್ರಮೃಗರಾಜದವಾನಲಾಹಿ
ಸಂಗ್ರಾಮವಾರಿಧಿಮಹೋದರಬಂಧನೋತ್ಥಂ ।
ತಸ್ಯಾಶುನಾಶಮುಪಯಾತಿಭಯಂಭಿಯೇವ
ಯಸ್ತಾವಕಂಸ್ತವಮಿಮಂಮತಿಮಾನಧೀತೆ ॥ ೪೭ ॥

೪೭. ತಾ॥ ಓ ಭವಬಂಧವಿಮೋಚಕನಾದ ಜಿನರಾಜನೇ ! ಯಾವ ವಿವೇಕಿಯಾದ ಭವ್ಯಾತ್ಮನು ತಮ್ಮ ಮಾಹಾತ್ಮ್ಯಪ್ರಕಾಶವಾದ ಈ ಭಕ್ತಾಮರ ಸ್ತೋತ್ರವನ್ನು ಜ್ಞಾನ, ಭಕ್ತಿ, ಶ್ರದ್ಧಾಪೂರ್ವಕವಾಗಿ ಓದುತ್ತಾನೊ, ಅಂತಹ ಮನುಷ್ಯನಿಗೆ ಮದಿಸಿದ ಆನೆ, ಸಿಂಹ, ಸರ್ಪ, ಕಾಡುಗಿಚ್ಚು, ಯುದ್ಧ, ಸಮುದ್ರ,

ಮಹೋದರರೋಗ, ಬಂದೀಖಾನೆ ಇವುಗಳಿಂದುಂಟಾದ ಭಯವು ತಮ್ಮಿಂದ ಹೆದರಿಯೋ ಎಂಬಂತೆ ಬಹಳ ಬೇಗನೆ ನಾಶವಾಗುವುದು. ತಮ್ಮ ಧ್ಯಾನ ನಾಮಸಂಕೀರ್ತನಾದಿ ಮಾಹಾತ್ಮ್ಯವು (ಮಹಿಮೆಯು) ಸಮಸ್ತ ಭವಭಯಗಳನ್ನೂ ಪರಿಹರಿಸುವುದೆಂದಭಿಪ್ರಾಯವು.

ಸ್ತೋತ್ರಸ್ರಜಂತವಜಿನೇಂದ್ರಗುಣೈರ್ನಿಬದ್ಧಾಂ
ಭಕ್ತ್ಯಾಮಯಾವಿವಿಧವರ್ಣವಿಚಿತ್ರಪುಷ್ಪಾಂ ।
ಧತ್ತೇಜನೋಯ ಇಹಕಂಠಗತಾಮಜಸ್ರಂ
ತಂಮಾನತುಂಗಮವಶಾಸಮುಪೈತಿಲಕ್ಷ್ಮೀಃ ॥ ೪೮ ॥

೪೮. ತಾ॥ ಓ ಸ್ವಾಮಿಯೇ ! ತಮ್ಮ ಅನಂತಜ್ಞಾನಾನಂತ ದರ್ಶನ ಅನಂತವೀರ್ಯ ಅನಂತಸುಖಾದಿ ಗುಣಗಳೆಂಬ ನೂಲು (ನಾರು) ಗಳಿಂದ ಪ್ರಕಾಶಿಸುತ್ತಿರುವ ನಾನಾ ಅಕ್ಷರಗಳೆಂಬ ವಿಚಿತ್ರವಾದ ಹೂವುಗಳುಳ್ಳ, ನನ್ನಿಂದ ಭಕ್ತಿಯಿಂದ ಕಟ್ಟಲ್ಪಟ್ಟ ಈ ಭಕ್ತಾಮರಸ್ತೋತ್ರವೆಂಬ ಮಾಲಿಕೆಯನ್ನು ಯಾವ ಭವ್ಯಾತ್ಮನು ಸರ್ವಕಾಲದಲ್ಲಿಯೂ ಕುತ್ತಿಗೆಯಲ್ಲಿ ಧರಿಸುತ್ತಾನೋ (ಉಚ್ಚರಿಸುತ್ತಾನೋ) ಅಂತಹ ಮಾನದಿಂದ ಉತ್ಕೃಷ್ಟನಾದ ಪುರುಷನನ್ನು (ಮಾನತುಂಗಾಚಾರ್ಯರನ್ನು) ಲಕ್ಷ್ಮಿಯು (ಇಹಪರ ಲೋಕಸಂಪತ್ತು) ತಾನೇ ಪರವಶವಾಗಿ ಹೊಂದುತ್ತಾಳೆ. ಈ ಸ್ತೋತ್ರವು ಹೂವಿನಂತೆ ಬಹಳ ಸುಕುಮಾರವಾದ ಅಕ್ಷರಗಳಿಂದ ಸೇರಿಸಲ್ಪಟ್ಟದ್ದಾಗಿಯೂ, ಅರ್ಥಚಾತುರ್ಯವುಳ್ಳದ್ದಾಗಿಯೂ, ಹೂವಿನ ಮಾಲೆಯಂತೆ ಅತ್ಯಂತ ಮನೋಹರವಾಗಿಯೂ, ಬಹಳ ಉತ್ಕೃಷ್ಟವಾಗಿಯೂ, ಇರುವುದೆಂಬ ಅತಿಶಯವನ್ನು ಆಚಾರ್ಯರು ಸೂಚಿಸಿರುತ್ತಾರೆ.

ಇತಿ ಶ್ರೀಮಾನತುಂಗಾಚಾರ್ಯ ವಿರಚಿತಂ
ಭಕ್ತಾಮರ ಸ್ತೋತ್ರಂ.

॥ ಶ್ರೀ ಸಿದ್ಧಸೇನದಿವಾಕರಪ್ರಣೀತಂ ॥

ಕಲ್ಯಾಣಮಂದಿರಸ್ತೋತ್ರಂ

ಕಲ್ಯಾಣಮಂದಿರಮುದಾರಮವದ್ಯಭೇದಿ
ಭೀತಾಭಯಪ್ರದಮನಿಂದಿತಮಂಘ್ರಿಪದ್ಮಂ ।
ಸಂಸಾರಸಾಗರನಿಮಜ್ಜದಶೇಷಜಂತು
ಪೋತಾಯಮಾನಮಭಿನಮ್ಯ ಜಿನೇಶ್ವರಸ್ಯ ॥ ೧ ॥

ಯಸ್ಯ ಸ್ವಯಂ ಸುರಗುರುರ್ಗರಿಮಾಂಬುರಾಶೇಃ
ಸ್ತೋತ್ರಂ ಸುವಿಸ್ತೃತಮತಿರ್ನ ವಿಭುರ್ವಿಧಾತುಂ ।
ತೀರ್ಥೇಶ್ವರಸ್ಯ ಕಮಠಸ್ಮಯಧೂಮಕೇತೋ
ಸ್ತಸ್ಯಾಹಮೇಷ ಕಿಲ ಸಂಸ್ತವನಂ ಕರಿಷ್ಯೇ ॥ ೨ ॥

೧, ೨. ತಾ॥ ಕಮಠನೆಂಬ ಪೂರ್ವಜನ್ಮವೈರಿಯ ಅಹಂಕಾರಕ್ಕೆ ಅಗ್ನಿಯಂತಿರುವ ಘೋರೋಪಸರ್ಗಗಳನ್ನು ಎಣಿಸದೆ ಕೇವಲಜ್ಞಾನವನ್ನು ಪಡೆದು, ಪಂಚಕಲ್ಯಾಣಪಾತ್ರರಾಗಿ ಸಮಸ್ತ ದೇವಾದಿವಂದ್ಯರಾಗಿ ಸಮವಸರಣವಿರಾಜಮಾನರಾಗಿ ಧರ್ಮಾಮೃತವರ್ಷದಿಂದ ಮೇಘದಂತೆ ಭವ್ಯಾತ್ಮರೆಂಬ ಪೈರುಗಳನ್ನು ರಕ್ಷಿಸಿದಂತಹ ಗುರುತ್ವಕ್ಕೆ ನಿಧಿಯಾದಂತಹ (ಗೌರವಕ್ಕೆ ಸಮುದ್ರದಂತಿರುವ) ಶ್ರೀ ಪಾರ್ಶ್ವನಾಥ ತೀರ್ಥಂಕರರ ಸ್ತೋತ್ರವನ್ನು ಮಾಡಲು ಮಹಾಬುದ್ಧಿಶಾಲಿಯಾದ ಬೃಹಸ್ಪತಿಯೂ ಕೂಡ ಸಮರ್ಥನಲ್ಲವೋ ಅಂತಹ ಪಾರ್ಶ್ವನಾಥ ತೀರ್ಥಂಕರರ ಸಮಸ್ತ ಮಂಗಳಕ್ಕೂ ವಾಸಸ್ಥಾನವಾಗಿಯೂ ಶ್ರೇಷ್ಠವಾಗಿಯೂ, ಮತ್ತು ಸಮಸ್ತ ಪಾಪಗಳನ್ನು ಪರಿಹರಿಸುವುದಾಗಿಯೂ, ಚತುರ್ಗತಿಭ್ರಮಣವೆಂಬ ಸಂಸಾರಸಮುದ್ರದಲ್ಲಿ ಭಯಭೀತರಾದ ಪ್ರಾಣಿಗಳಿಗೆ ಅಭಯಪ್ರದಾನವನ್ನು ಕೊಡುವುದಾಗಿಯೂ, ಸಂಸಾರವೆಂಬ ಸಮುದ್ರದಲ್ಲಿ

ಮುಳುಗುತ್ತಿರುವ ಸಮಸ್ತ ಜೀವಿಗಳಿಗೂ ಹಡಗಿನಂತೆ ದಡವನ್ನು ಸೇರಿಸುವುದಾಗಿಯೂ, ಇರುವ ಪಾದಕಮಲಗಳನ್ನು ನಮಸ್ಕರಿಸಿ ಸಿದ್ಧಸೇನದಿವಾಕರನೆಂಬ ಹೆಸರುಳ್ಳ ಈ ನಾನು ಯಥಾಶಕ್ತಿ ಸ್ತೋತ್ರವನ್ನು ಮಾಡುತ್ತೇನೆಂದು ಆಚಾರ್ಯರು ಜಿನೇಂದ್ರ ಪಾದನಮಸ್ಕಾರಪೂರ್ವಕವಾಗಿ ಕಲ್ಯಾಣಮಂದಿರವೆಂಬ ಪದವೇ ಪ್ರಾರಂಭದಲ್ಲಿ ಉಳ್ಳ ಈ ಸ್ತೋತ್ರವನ್ನಾರಂಭಿಸುತ್ತಾರೆ.

ಸಾಮಾನ್ಯತೋಪಿ ತವ ವರ್ಣಯಿತುಂ ಸ್ವರೂಪ
ಮಸ್ಮಾದೃಶಾಃ ಕಥಮಧೀಶ ಭವಂತ್ಯಧೀಶಾಃ ।
ಧೃಷ್ಟೋಪಿ ಕೌಶಿಕಶಿಶುರ್ಯದಿ ವಾ ದಿವಾಂಧೋ
ರೂಪಂ ಪ್ರರೂಪಯತಿ ಕಿಂ ಕಿಲ ಘರ್ಮರಶ್ಮೇಃ ॥ ೩ ॥

೩. ತಾ॥ ಓ ಸಮಸ್ತ ಲೋಕಾಧಿಪತಿಯಾದ ಶ್ರೀ ಪಾರ್ಶ್ವತೀರ್ಥಂಕರರೇ ! ತಮ್ಮ ಸ್ವರೂಪವನ್ನು ಸಾಧಾರಣವಾಗಿಯಾದರೂ ವರ್ಣಿಸುವುದಕ್ಕೆ ನಮ್ಮಂತಹ ಅಲ್ಪಜ್ಞರು ಹೇಗೆ ಸಮರ್ಥರಾದೇವು ? ಹಗಲಿನಲ್ಲೇ ಕುರುಡಾದ ಗೂಬೆಮರಿಯು ಎಷ್ಟು ಗರ್ವಪಟ್ಟರೂ ಸೂರ್ಯನ ರೂಪವನ್ನು ನೋಡುವುದಕ್ಕೆ ಸಮರ್ಥವಾಗುವುದಿಲ್ಲವಷ್ಟೆ ? ಹಾಗೆ ಮಹಾಬುದ್ಧಿ ಬುದ್ಧಿ ಸಾಮರ್ಥ್ಯಾದಿ ಗುಣಗಳುಳ್ಳ ದೇವೇಂದ್ರಾದಿಗಳಿಂದಲೂ ಹೊಗಳಲಶಕ್ಯವಾದ ತಮ್ಮ ಸ್ವರೂಪವನ್ನು ನಾನು ಹೊಗಳಲು ಹೇಗೆ ಸಮರ್ಥನಾದೇನೆಂದಭಿಪ್ರಾಯವು.

ಮೋಹಕ್ಷಯಾದನುಭವನ್ನಪಿ ನಾಥ ಮರ್ತ್ಯೋ
ನೂನಂ ಗುಣಾನ್ ಗಣಯಿತುಂ ನ ತವ ಕ್ಷಮೇತ ।
ಕಲ್ಪಾಂತವಾಂತಪಯಸಃ ಪ್ರಕಟೋಪಿ ಯಸ್ಮಾ
ನ್ಮೀಯೇತ ಕೇನ ಜಲಧೇರ್ನನು ರತ್ನರಾಶಿಃ ॥ ೪ ॥

೪. ತಾ॥ ಓ ಗುಣಸಿಂಧುವೇ ! ಮೋಹನೀಯ ಕರ್ಮವು (ಅಜ್ಞಾನವು) ಕ್ಷಯವನ್ನು ಹೊಂದಿದನಂತರವೂ ಕೂಡ ಮನುಷ್ಯನು ಮನಸ್ಸಿನಲ್ಲೇ ಅನುಭವಿಸುವನಾದರೂ ಸಹ ತಮ್ಮ ಗುಣಗಳನ್ನು ಎಣಿಸುವುದಕ್ಕೆ ಸಮರ್ಥನಲ್ಲ. ಹೇಗೆಂದರೆ, ಪ್ರಳಯಕಾಲದಲ್ಲಿ ನಿಶ್ಶೇಷವಾಗಿ ನೀರೆಲ್ಲಾ ಬತ್ತಿಹೋಗಿ ಚೆನ್ನಾಗಿ ಕಾಣುತ್ತಿದ್ದರೂ ಸಮುದ್ರದಲ್ಲಿರುವ ರತ್ನರಾಶಿಯನ್ನು ಲೆಖ್ಖ ಮಾಡಲು

ಯಾವನು ಸಮರ್ಥನಾದಾನು? ಹಾಗೆ ಸಮಸ್ತ ಅಜ್ಞಾನವೂ ತೊಲಗಿ ಹೋದರೂ ತಮ್ಮ ಗುಣಗಳು ಸಂಖ್ಯೆಗೆ ಅಡಗದೆ ಇರುವುದರಿಂದ ಇಷ್ಟೇ ಸರಿಯೆಂದು ನಿರ್ಣಯಿಸಲು ಸಾಧ್ಯವಿಲ್ಲವೆಂದರ್ಥವು.

ಅಭ್ಯುದ್ಯತೋಽಸ್ಮಿತವನಾಥಜಡಾಶಯೋಽಪಿ
ಕರ್ತುಂಸ್ತವಂಲಸದಸಂಖ್ಯಗುಣಾಕರಸ್ಯ ।
ಬಾಲೋಽಪಿಕಿಂನನಿಜಬಾಹುಯುಗಂವಿತತ್ಯ
ವಿಸ್ತೀರ್ಣತಾಂಕಥಯತಿಸ್ವಧಿಯಾಂಬುರಾಶೇಃ ॥ ೫ ॥

೫. ತಾ॥ ಓ ರಕ್ಷಕರೇ! ನಾನು ಮೂಢಾತ್ಮನಾಗಿದ್ದರೂ ಸಹ, ಪ್ರಕಾಶಿಸುತ್ತಿರುವ ಅಸಂಖ್ಯಾತವಾದ ಗುಣಗಳಿಗೆ ಗಣಿಯಂತಿರುವ ತಮ್ಮನ್ನು ಸ್ತೋತ್ರಮಾಡುವುದಕ್ಕೋಸ್ಕರ ಪ್ರಯತ್ನಿಸಿದೆನು. ಹೀಗೆ ಅಶಕ್ತನೆಂದು ತಿಳಿದೂ ಪ್ರವರ್ತಿಸಬಹುದೇ? ಅಂದರೆ, ಬಾಲಕನೂ ಕೂಡ ತನ್ನ ಎರಡು ತೋಳುಗಳನ್ನು ನೀಡಿಕೊಂಡು ತನ್ನ ಬುದ್ಧಿಯಿಂದ ಸಮುದ್ರದ ವಿಸ್ತಾರವನ್ನು ಇಷ್ಟಗಲವಾಗಿದೆ ಎಂದು ಹೇಳುವುದಿಲ್ಲವೇನು? ಹಾಗೆ ನಾನೂ ತಮ್ಮ ಗುಣಗಳನ್ನು ನನ್ನ ಬುದ್ಧಿಗೆ ತೋರಿದಷ್ಟು ಹೇಳುವುದು ದೋಷವಾಗುವುದಿಲ್ಲ. ಆದಮಾತ್ರಕ್ಕೆ ತಮ್ಮ ಗುಣಗಳಿಗೆ ಪರಿಮಾಣವನ್ನು ಹೇಳಿದಹಾಗಾಗಲಿಲ್ಲ. ಇದರಿಂದ ನನ್ನ ಮೌಢ್ಯವೇ ಪ್ರಕಟಿಸಲ್ಪಟ್ಟಿತು. ಬಾಲಕನು ಸಮುದ್ರದ ಅಳತೆಯನ್ನು ಕೈಗಳನ್ನು ಚಾಚಿ ತೋರಿಸಿದ ಹಾಗೆ ನನ್ನ ಪ್ರಯತ್ನವೂ ಯುಕ್ತವೆಂದಭಿಪ್ರಾಯವು.

ಯೇಯೋಗಿನಾಮಪಿನಯಾಂತಿಗುಣಾಸ್ತವೇಶ
ವಕ್ತುಂಕಥಂಭವತಿತೇಷುಮಮಾವಕಾಶಃ ।
ಜಾತಾತದೇವಮಸಮೀಕ್ಷಿತಕಾರಿತೇಯಂ
ಜಲ್ಪಂತಿವಾನಿಜಗಿರಾನನುಪಕ್ಷಿಣೋಽಪಿ ॥ ೬ ॥

೬. ತಾ॥ ಓ ಸ್ವಾಮಿಯೇ! ಯಾವ ತಮ್ಮ ಅಗಣ್ಯವಾದ ಗುಣಗಳು ಯೋಗಿಗಳಿಗೂ ಕೂಡ ಹೇಳಲಶಕ್ಯವೋ ಅಂತಹ ತಮ್ಮ ಗುಣಗಳನ್ನು ಸ್ತೋತ್ರ ಮಾಡಲು ಅತಿಸ್ವಲ್ಪ ಬುದ್ಧಿಯುಳ್ಳ ನಾನು ಹೇಗೆ ಯೋಗ್ಯತೆಯನ್ನು ಹೊಂದುವೆನು? ಈ ಪ್ರಕಾರ ಅಸಾಧ್ಯಕಾರ್ಯದಲ್ಲಿ ಪ್ರವರ್ತಿಸಿದ ನಾನು

ಪರ್ಯಾಲೋಚನೆ ಇಲ್ಲದವನೆಂದು ಲೋಕದ ಹೇಳಿಕೆಗೆ ಒಳಗಾಗುತ್ತೇನೆ. ಆದರೂ ನನ್ನ ಸಾಹಸವು ಯುಕ್ತವೇ ಸರಿ. ಹೇಗೆಂದರೆ, ಪಕ್ಷಿಗಳೂ ಕೂಡ ತಮ್ಮ ಚಿಲಿಪಿಲಿಗುಟ್ಟುವಿಕೆಯಿಂದ ಅಸ್ಫುಟವಾಗಿ ಮಾತನಾಡುತ್ತವೆಯಷ್ಟೆ? ಪಕ್ಷಿಯಂತೆ ನಾನೂ ಕೂಡ ಪರ್ಯಾಲೋಚನೆ ಇಲ್ಲದೆ ಯಥಾಶಕ್ತಿ ತಮ್ಮ ಗುಣಗಳನ್ನು ಸ್ತುತಿಸುತ್ತೇನೆಂದಭಿಪ್ರಾಯವು.

ಆಸ್ತಾಮಚಿಂತ್ಯಮಹಿಮಾಜಿನಸಂಸ್ತವಸ್ತೇ
ನಾಮಾಪಿಪಾತಿಭವತೋಭವತೋಜಗಂತಿ ।
ತೀವ್ರಾತಪೋಪಹತಪಾಂಥಜನಾನ್ನಿದಾಘೇ
ಪ್ರೀಣಾತಿಪದ್ಮಸರಸಸ್ಸರಸೋಽನಿಲೋಽಪಿ ॥ ೭ ॥

೭. ತಾ॥ ಓ ಜಿನೇಂದ್ರನೇ! ಮನಸ್ಸಿನಿಂದ ಚಿಂತಿಸುವುದಕ್ಕೂ ಕೂಡ ಅಶಕ್ಯವಾದ ಮಹಿಮೆಯುಳ್ಳ ತಮ್ಮ ಸ್ತೋತ್ರವನ್ನು ಮಾಡುವುದು ಹಾಗಿರಲಿ, ತಮ್ಮ ನಾಮಸ್ಮರಣೆಯು ಸಹ ಭವಬಂಧವನ್ನು ತಪ್ಪಿಸಿ, ಪ್ರಾಣಿಗಳನ್ನು ಕಾಪಾಡುತ್ತದೆ. ಹೇಗೆಂದರೆ:-ಬೇಸಿಗೆಯಲ್ಲಿ ಬಿಸಿಲಿನ ತಾಪದಿಂದ ಬಳಲಿದ ಜನಗಳನ್ನು ಕಮಲಗಳಿರುವ ಸರೋವರದ ಗಾಳಿಯೂ ಕೂಡ ಸಂತೋಷ ಪಡಿಸುತ್ತದೆ. ಹಾಗೆ ತಮ್ಮ ನಾಮಸಂಕೀರ್ತನವೂ ಕೂಡ ಭವದುಃಖಗಳನ್ನು ಹೋಗಲಾಡಿಸಿ ಕಾಪಾಡುವುದು. ಆದುದರಿಂದ ಅಶಕ್ತನಾಗಿದ್ದರೂ ಸ್ತೋತ್ರವನ್ನು ಮಾಡುವೆನೆಂದಭಿಪ್ರಾಯವು.

ಹೃದ್ವರ್ತಿನಿತ್ವಯಿವಿಭೋಶಿಥಿಲೀಭವಂತಿ
ಜಂತೋಃಕ್ಷಣೇನನಿಬಿಡಾಅಪಿಕರ್ಮಬಂಧಾಃ ।
ಸದ್ಯೋಭುಜಂಗಮಮಯಾಇವಮಧ್ಯಭಾಗ
ಮಭ್ಯಾಗತೇವನಶಿಖಂಡಿನಿಚಂದನಸ್ಯ ॥ ೮ ॥

೮. ತಾ॥ ಓ ಪ್ರಭುವಾದಂತಹ ಜಿನೇಂದ್ರನೇ! ತಾವು ಯಾವ ಪ್ರಾಣಿಯ ಹೃದಯದಲ್ಲಿರುತ್ತೀರೋ ಆ ಪ್ರಾಣಿಯ ಕರ್ಮಗಳೆಂಬ ಕಟ್ಟುಗಳು ಎಷ್ಟು ಬಿಗಿಯಾಗಿದ್ದರೂ ಒಂದು ಕ್ಷಣ ಮಾತ್ರದಿಂದ ಸಡಲಿಹೋಗುವುವು. ಹೇಗೆಂದರೆ, ನವಿಲು ವನಮಧ್ಯವನ್ನು ಹೊಂದಿದೆ ಕೂಡಲೇ ಗಂಧದ ಮರಕ್ಕೆ

ಸುತ್ತಿಕೊಂಡಿದ್ದ ಹಾವುಗಳು ಆ ಕ್ಷಣದಲ್ಲಿಯೇ ಬಿಟ್ಟುಹೋಗುವುವು. ಹಾಗೆ ತಮ್ಮ ಸ್ಮರಣೆಯಿಂದ ಪಾಪಗಳು ಬಿಟ್ಟು ಹೋಗುವುವೆಂದರ್ಥವು.

ಮುಚ್ಯಂತ ಏವ ಮನುಜಾಃ ಸಹಸಾ ಜಿನೇಂದ್ರ
ರೌದ್ರೈರುಪದ್ರವಶತೈಸ್ತ್ವಯಿ ವೀಕ್ಷಿತೇಽಪಿ ।
ಗೋಸ್ವಾಮಿನಿ ಸ್ಫುರಿತತೇಜಸಿ ದೃಷ್ಟಮಾತ್ರೇ
ಚೌರೈರಿವಾಶು ಪಶವಃ ಪ್ರಪಲಾಯಮಾನೈಃ ॥ ೯ ॥

೯. ತಾ॥ ಓ ಜಿನೇಂದ್ರನೇ! ತಮ್ಮನ್ನು ಯಾವ ಮನುಷ್ಯರು ದರ್ಶನ ಮಾಡುತ್ತಾರೋ ಅಂತಹ ಮನುಷ್ಯರು ಘೋರವಾದ ಅನೇಕ ಉಪದ್ರವಗಳಿಂದ ಶೀಘ್ರವಾಗಿ ಬಿಡುಗಡೆಹೊಂದುತ್ತಾರೆ. ಹೇಗೆಂದರೆ, ದನಗಳನ್ನು ಕಾಯುವವನು ಮತ್ತು ಸೂರ್ಯನು ಪ್ರಕಾಶಿಸುತ್ತಿರುವ ತೇಜಸ್ಸುಳ್ಳವನಾಗಿ ಕಣ್ಣಿಗೆ ಗೋಚರಿಸಿದ ಕೂಡಲೇ ಓಡಿಹೋಗುವ ಕಳ್ಳರಿಂದ ಬಿಡಲ್ಪಟ್ಟ ದನಗಳಂತೆ ತಮ್ಮನ್ನು ದರ್ಶನಮಾಡಿದೊಡನೆ ಸಮಸ್ತ ಪಾಪಗಳು ಪರಿಹಾರವಾಗಿ ಹೋಗುವುವೆಂದಭಿಪ್ರಾಯವು.

ತ್ವಂ ತಾರಕೋ ಜಿನ ಕಥಂ ಭವಿನಾಂ ತ ಏವ
ತ್ವಾಮುದ್ವಹಂತಿ ಹೃದಯೇನ ಯದುತ್ತರಂತಃ ।
ಯದ್ವಾ ದೃತಿಸ್ತರತಿ ಯಜ್ಜಲಮೇಷ ನೂನ-
ಮಂತರ್ಗತಸ್ಯ ಮರುತಸ್ಸ ಕಿಲಾನುಭಾವಃ ॥ ೧೦ ॥

೧೦. ತಾ॥ ಓ ಜಿನೇಶ್ವರನೇ! ನರಸುರತಿರ್ಯಙ್ನರಕಗಳೆಂಬ ಚತುರ್ಗತಿ ಸಂಸಾರರೂಪವಾದ ಸಮುದ್ರದಲ್ಲಿ ಆಯಾಯ ಪೂರ್ವಕರ್ಮಾನುಸಾರವಾಗಿ ಪರಿಭ್ರಮಿಸುತ್ತಿರುವ ಪ್ರಾಣಿಗಳನ್ನು ಈ ಸಂಸಾರ ಸಮುದ್ರದಿಂದ ತಾವು ದಾಟಿಸತಕ್ಕವರೆಂದು ಹೇಳುತ್ತಾರಷ್ಟೆ? ಈ ಮಾತನ್ನು ಹೇಗೆ ಒಪ್ಪಬಹುದು? ಏಕೆಂದರೆ, ಆ ದಾಟುವಂಥವರೇ ತಮ್ಮನ್ನು ಅವರ ಹೃದಯದಲ್ಲಿ ಧರಿಸಿಕೊಂಡು ದಾಟುತ್ತಾರೆ. ಲೋಕದಲ್ಲಿ ನೀರನ್ನು ದಾಟಲಸಮರ್ಥನಾದವನನ್ನು ದಾಟಿಸುವಂತಹವನು ಎತ್ತಿಕೊಂಡು ದಾಟುವುದು ಪ್ರಸಿದ್ಧವಾಗಿದೆ. ಹಾಗಿಲ್ಲದೆ ಸಂಸಾರಸಾಗರವನ್ನು ದಾಟುವವರು ತಮ್ಮನ್ನೇ ಹೃದಯದಲ್ಲಿಟ್ಟುಕೊಂಡು ದಾಟುತ್ತಾರಾದುದರಿಂದ ತಾವು ದಾಟಿಸುತ್ತೀರೆಂಬುದು ಹೇಗೆ ಯುಕ್ತವಾದೀತೆಂದಭಿಪ್ರಾಯವು. ಹೇಗೆಂದರೆ ನೀರಿನಲ್ಲಿ ಬಿದ್ದ ಚರ್ಮದ ಚೀಲವು ಅದರೊಳಗೆ ತುಂಬಿಕೊಂಡಿರುವ ಗಾಳಿಯ ಬಲದಿಂದಲ್ಲವೆ? ತೇಲುತ್ತದೆ? ಅದರಂತೆ ಸರ್ವಜ್ಞರಾಗಿ ಸರ್ವಶಕ್ತಿಯುಳ್ಳ ತಾವು ಹೃದಯದಲ್ಲಿರುವಕಾರಣ ಅವರು ದಾಟುತ್ತಾರೆ, ಇದು ಆಶ್ಚರ್ಯವಲ್ಲವೆಂದು ಭಾವವು. ತೇಲುವ ವಸ್ತುವು ಒಳಗೆ ಸೇರಿಕೊಂಡಿರುವ ಗಾಳಿಯ ಬಲದಿಂದ ತೇಲುವಂತೆ ತಮ್ಮನ್ನು ಹೃದಯದಲ್ಲಿ ಧರಿ(ಸ್ಮರಿ)ಸುವ ಬಲದಿಂದಲೇ ತಮ್ಮ ಭಕ್ತರು ಭವಸಾಗರವನ್ನು ದಾಟುವರೆಂದಭಿಪ್ರಾಯವು.

ಯಸ್ಮಿನ್ ಹರಪ್ರಭೃತಯೋಽಪಿ ಹತಪ್ರಭಾವಾಃ
ಸೋಽಪಿ ತ್ವಯಾ ರತಿಪತಿಃ ಕ್ಷಪಿತಃ ಕ್ಷಣೇನ ।
ವಿಧ್ಯಾಪಿತಾ ಹುತಭುಜಃ ಪಯಸಾಥ ಯೇನ
ಪೀತಂ ನ ಕಿಂ ತದಪಿ ದುರ್ಧರಬಾಡಬೇನ ॥ ೧೧ ॥

೧೧. ತಾ॥ ಭಗವಂತನೇ? ಯಾವನು ಶಿವನೇ ಮೊದಲಾದ ದೇವರುಗಳನ್ನು ಜಯಿಸಿದನೋ ಅಂತಹ ಸಮಸ್ತ ದೇವಾದಿಗಳನ್ನೂ ವಶರನ್ನಾಗಿ ಮಾಡಿದಂಥ ವೀರಮನ್ಮಥನನ್ನು ಕೂಡ ಕ್ಷಣಮಾತ್ರದಿಂದ ತಾವು ಜಯಿಸಿದಿರಿ. (ಆತ್ಮಾನಾತ್ಮತತ್ವಜ್ಞಾನಪೂರ್ವಕ ವೈರಾಗ್ಯದಿಂದ ಕಾಮ ಕ್ರೋಧಾದಿ ಆತ್ಮಶತ್ರುಗಳನ್ನು ನಾಶಮಾಡಿ ಜಿನರೆಂಬ ಪದವಿಯನ್ನು ಹೊಂದಿದಿರಿ.) ಆದರೆ ಇದು ಆಶ್ಚರ್ಯವಲ್ಲ, ಹೇಗೆಂದರೆ ಲೋಕದಲ್ಲಿ ಬೆಂಕಿಯನ್ನು ಆರಿಸುವಂತಹುದು ನೀರೆಂದು ಪ್ರಸಿದ್ಧವಷ್ಟೆ? ಅಂತಹ ನೀರನ್ನೂ ಕೂಡ ಹೀರಿ ಶೋಷಿಸುವಂತಹುದು ಬಡಬಾಗ್ನಿಯೆಂದು ಪ್ರಸಿದ್ಧವಾಗಿದೆ. ಅನಿರ್ವಚನೀಯವಾದ ಜ್ಞಾನವೈರಾಗ್ಯ ಮಹಿಮೆಯುಳ್ಳ ತಾವು ಹರಿಹರಾದಿಗಳಿಗಿಂತಲೂ ಅಧಿಕರೆಂದು ಭಾವವು.

ಸ್ವಾಮಿನ್ನನಂತಗರಿಮಾಣಮಪಿ ಪ್ರಪನ್ನಾ-
ಸ್ತ್ವಾಂ ಜಂತವಃ ಕಥಮಹೋ ಹೃದಯೇ ದಧಾನಾಃ ।
ಜನ್ಮೋದಧಿಂ ಲಘು ತರಂತ್ಯತಿಲಾಘವೇನ
ಚಿಂತ್ಯೋ ನ ಹಂತ ಮಹತಾಂ ಯದಿ ವಾ ಪ್ರಭಾವಃ ॥ ೧೨ ॥

೧೨. ತಾ॥ ಓ ಸ್ವಾಮಿಯೇ! ಬಹಳ ಭಾರವುಳ್ಳ ನಿಮ್ಮನ್ನು ಹೃದಯದಲ್ಲಿ ಧರಿಸುವಂತಹವರು ಬಹಳ ಲಘುತ್ವದಿಂದ (ಪಾಪಗಳೆಂಬ ಭಾರವನ್ನು ಕಳೆದು) ಜನ್ಮವೆಂಬ ಸಮುದ್ರವನ್ನು ಹೇಗೆ ದಾಟುತ್ತಾರೊ ಇದು ಆಶ್ಚರ್ಯವಾಗಿದೆ. ಲೋಕದಲ್ಲಿ ಬಹಳ ಭಾರವನ್ನು ಹೊತ್ತುಕೊಂಡವನು ಬಹಳ ಭಾರವುಳ್ಳವನಾಗುತ್ತಾನೆಯೇ ಹೊರತು ಹಗುರವಾಗಲಾರನು. ಬಹಳ ಗೌರವವುಳ್ಳ ನಿಮ್ಮನ್ನು ಹೃದಯದಲ್ಲಿ ಧರಿಸಿದವನು (ಸ್ಮರಿಸಿದವನು)ಬಹಳ ಲಘುವಾಗುತ್ತಾನೆಂದರೆ ಕೆಳಗಣಗತಿಯಾದ ನಾರಕತಿರ್ಯಗ್ಗತಿಗಳಿಗೆ ಕಾರಣವಾದ ಪಾಪಗಳನ್ನು ಬಿಟ್ಟು ಸ್ವರ್ಗವೇ ಮುಂತಾದ ಊರ್ಧ್ವೋರ್ಧ್ವಗತಿಗಳನ್ನು ಪಡೆಯಲು ಯೋಗ್ಯತೆಯುಳ್ಳವನಾಗುತ್ತಾನೆಂದರ್ಥವು. ಲೋಕದಲ್ಲಿ ಬಹಳ ಹಗುರವಾದ ಸೋರೆಬುರುಡೆ ಮುಂತಾದ ವಸ್ತುಗಳು ನೀರಿನಲ್ಲಿ ಮೇಲಕ್ಕೇ ಬರುತ್ತವೆ. ಹಾಗೆಯೇ ಜೀವನು ಕರ್ಮಗಳೆಂಬ ಭಾರ ಹೆಚ್ಚಾಗುತ್ತಾಬರಲು ನಾರಕತಿರ್ಯಗ್ಜನ್ಮವೆಂಬ ನೀರಿನಲ್ಲಿ ಮುಳುಗುವನು. ನಿಮ್ಮ ಧ್ಯಾನಾದಿ ಬಲದಿಂದ ಆ ಕರ್ಮಗಳೆಂಬ ಭಾರವನ್ನು ಕಳೆದು ಸ್ವರ್ಗಮೋಕ್ಷಗಳೆಂಬ ಊರ್ಧ್ವೋರ್ಧ್ವಗತಿಗೆ ಯೋಗ್ಯನಾಗುತ್ತಾನೆಂದಭಿಪ್ರಾಯವು. ಗೌರವ ಎಂಬ ಪದಕ್ಕೆ ಭಾರವೆಂಬುದೊಂದರ್ಥವು, ಪೂಜ್ಯತೆಯೆಂಬುದೊಂದರ್ಥವು. ಜಗತ್ಪೂಜ್ಯರಾದ ನಿಮ್ಮನ್ನು ಸರ್ವದಾ ಧ್ಯಾನಿಸುವವನು ಜನ್ಮಸಮುದ್ರವನ್ನುದಾಟಿ ಮೋಕ್ಷವನ್ನೇ ಪಡೆಯುತ್ತಾನೆಂಬುದು ಏನಾಶ್ಚರ್ಯ ಮಹಾತ್ಮರ ಮಹಿಮೆಯು ಮನಸ್ಸಿನಿಂದ ಹೀಗೆಯೇ ಸರಿಯೆಂದು ನಿರ್ಣಯಿಸಲಶಕ್ಯವು, ನೀವು ಮಹಾತ್ಮರಾದ್ದರಿಂದ ನಿಮ್ಮನ್ನು ಹೃದಯದಲ್ಲಿ ಧರಿಸಿದವರೂ ಮಹನೀಯರೇ ಆಗುತ್ತಾರೆಂದು ಮುಖ್ಯಭಾವವು.

ಕ್ರೋಧಸ್ತ್ವಯಾಯದಿವಿಭೋಪ್ರಥಮಂನಿರಸ್ತೋ
ಧ್ವಸ್ತಸ್ತದಾವದಕಥಂಕಿಲಕರ್ಮಚೋರಾಃ ।
ಪ್ಲೋಷತ್ಯಮುತ್ರಯದಿವಾಶಿಶಿರಾಪಿಲೋಕೇ
ನೀಲದ್ರುಮಾಣಿವಿಪಿನಾನಿನಕಿಂಹಿಮಾನೀ ॥ ೧೩ ॥

೧೩. ತಾ॥ ಓ ಸ್ವಾಮಿಯೇ ! ತಾವು ಕ್ರೋಧ ಕಷಾಯವೆಂಬ ಆತ್ಮವೈರಿಯನ್ನು ಮೊದಲು ನಾಶವನ್ನು ಮಾಡಿದಿರಿ. ಆದೇಕಾಲದಲ್ಲಿ ಕರ್ಮಗಳೆಂಬ ಕಳ್ಳರನ್ನು ಹೇಗೆ ನಾಶಮಾಡಿದಿರಿ ? ಲೋಕದಲ್ಲಿ ಕೋಪವಿಲ್ಲದವನು (ಮಹಾ ಕ್ಷಮೆಯುಳ್ಳವನು) ಶತ್ರುಗಳನ್ನು ಕೊಲ್ಲಲಾರ, ನೀವು ಮಹಾ ಶಾಂತರಾದ ಕಾಲದಲ್ಲಿ ಕರ್ಮಗಳೆಂಬ ಕಳ್ಳರನ್ನು ನಾಶಮಾಡಿದಿರೆಂದರೆ ಆಶ್ಚರ್ಯ. ಆದರೆ ಪರ್ಯಾಲೋಚಿಸಿದರೆ ಆಶ್ಚರ್ಯವಲ್ಲ. ಹೇಗೆಂದರೆ ಹಿಮಗಳು ಬಹಳ ತಣ್ಣಗಿದ್ದರೂ ಕಪ್ಪಗೆ ಆವರಿಸಿಕೊಂಡಿರುವ ಮರಗಳುಳ್ಳ ಮಹಾರಣ್ಯಗಳನ್ನು ಬಾಡಿಸುತ್ತವೆ. ಹಾಗೆಯೇ ಶಾಂತಿಗುಣದಿಂದಲೂ, ಕರ್ಮವು ನಾಶವಾಗುವುದು ನ್ಯಾಯವೇ ಸರಿಯೆಂದಭಿಪ್ರಾಯವು.

ತ್ವಾಂಯೋಗಿನೋಜಿನಸದಾಪರಮಾತ್ಮರೂಪ
ಮನ್ವೇಷಯಂತಿಹೃದಯಾಂಬುಜಕೋಶದೇಶೇ ।
ಪೂತಸ್ಯನಿರ್ಮಲರುಚೇರ್ಯದಿವಾಕಿಮನ್ಯ
ದಕ್ಷಸ್ಯಸಂಭವಪದಂನನುಕರ್ಣಿಕಾಯಾಃ ॥ ೧೪ ॥

೧೪. ತಾ॥ ಓ ಕರ್ಮ ಶತ್ರುಗಳನ್ನು ಜಯಿಸಿದ ಸ್ವಾಮಿಯೇ ! ಧ್ಯಾನಾರೂಢರಾದ ಮುನಿಗಳು ಹೃದಯವೆಂಬ ಕಮಲದ ಮಧ್ಯದಲ್ಲಿ ಪರಮಾತ್ಮಸ್ವರೂಪರಾದ ನಿಮ್ಮನ್ನು ಯಾವಾಗಲೂ ಹುಡುಕುತ್ತಲಿದ್ದಾರೆ. (ಕರ್ಮಗಳೆಂಬ ಕೊಳೆಗಳನ್ನು ಜ್ಞಾನವೆಂಬ ನೀರಿನಿಂದ ತೊಳೆದು ರತ್ನದಂತೆ ನಿರ್ಮಲರಾಗಿ ಪ್ರಕಾಶಿಸುತ್ತಿರುವ ತಮ್ಮ ಪರಿಶುದ್ಧ ಪರಮಾತ್ಮ ಸ್ವರೂಪವನ್ನು ಸರ್ವದಾ ವಿಚಾರಪೂರ್ವಕವಾಗಿ (ಧ್ಯಾನಿಸುತ್ತಾರೆ) ಪರಿಶುದ್ಧವಾದ ನಿರ್ಮಲ ಕಾಂತಿಯುಳ್ಳ ತಾವರೇ ಬೀಜವು ತಾವರೇಹೂವಿನ ಮಧ್ಯದಲ್ಲಿರುವ ಮಂಡಲಾಕಾರವಾದ ದಿಂಡನ್ನು ಬಿಟ್ಟು ಮತ್ತೆಲ್ಲಿ ಹುಟ್ಟುವುದು ? ಹಾಗೆ ತಮ್ಮ ಭಕ್ತರು ಹೃದಯಕಮಲದಲ್ಲಿಯೇ ಹೊರತು ಮತ್ತೆಲ್ಲಿ ತಮ್ಮನ್ನು ಧ್ಯಾನಿಸುವುದಕ್ಕಾದೀತು ? ಅಂದರೆ ಧ್ಯಾನದಿಂದ ಮಾತ್ರ ತಮ್ಮನ್ನು ನೋಡಬಹುದೇ ಹೊರತು ಇತರ ಕಣ್ಣಿಗೆ ಗೋಚರರಲ್ಲವೆಂದಭಿಪ್ರಾಯವು.

ಧ್ಯಾನಾಜ್ಜಿನೇಶಭವತೋಭವಿನಃಕ್ಷಣೇನ
ದೇಹಂವಿಹಾಯಪರಮಾತ್ಮದಶಾಂವ್ರಜಂತಿ ।
ತೀವ್ರಾನಲಾದುಪಲಭಾವಮಪಾಸ್ಯಲೋಕೇ
ಚಾಮೀಕರತ್ವಮಚಿರಾದಿವಧಾತುಭೇದಾಃ ॥ ೧೫ ॥

೧೫. ತಾ॥ ಓ ಜಿನೇಶ್ವರನೇ ! ಭವವನ್ನು ಹೊಂದಿರುವ ಪ್ರಾಣಿಗಳು ತಮ್ಮನ್ನು ಧ್ಯಾನಿಸಿ ದೇಹವನ್ನು ಬಿಟ್ಟೊಡನೆ ಪರಮಾತ್ಮ ರೂಪವನ್ನು (ಮುಕ್ತಿಯನ್ನು) ಹೊಂದುತ್ತಾರೆ. ಹೇಗೆಂದರೆ ಬಂಗಾರದ ಕಲ್ಲು ಅತ್ಯಂತ ತೀವ್ರವಾದ ಬೆಂಕಿಯಲ್ಲಿ ಹಾಕಲು ಕಲ್ಲಿನ ಭಾವವನ್ನು ಬಿಟ್ಟು ಬಂಗಾರದ ರೂಪವನ್ನು ಹೊಂದುತ್ತದೆ. ಹಾಗೆ ಸಂಸಾರಾವಸ್ಥೆಯಲ್ಲಿ ಕಲ್ಲಿನಲ್ಲಿ ಸೇರಿದ್ದ ಬಂಗಾರದಂತೆ ಕರ್ಮದೊಡನೆ ಕೂಡಿದ್ದ ಜೀವಾತ್ಮನು ಧ್ಯಾನವೆಂಬ ತೀವ್ರಪುಟದಲ್ಲಿಡಲು ತನ್ನ ಶುದ್ಧಸ್ವರೂಪವನ್ನು ಪಡೆಯುವನು. ಪರಿಶುದ್ಧ ಪರಮಾತ್ಮಧ್ಯಾನದಿಂದಲೇ ಕರ್ಮ ಕ್ಷಯವಾಗುವುದೆಂದಭಿಪ್ರಾಯವು.

ಅಂತಸ್ಸದೈವಜಿನಯಸ್ಯವಿಭಾವ್ಯಸೇತ್ವಂ
ಭವ್ಯೈಃಕಥಂತದಪಿನಾಶಯಸೇಶರೀರಂ ।
ಏತತ್ಸ್ವರೂಪಮಥಮಧ್ಯವಿವರ್ತಿನೋಹಿ
ಯದ್ವಿಗ್ರಹಂಪ್ರಶಮಯಂತಿಮಹಾನುಭಾವಾಃ ॥ ೧೬ ॥

೧೬. ತಾ॥ ಓ ಜಿನೇಶ್ವರನೇ ! ಯಾವ ಭವ್ಯಾತ್ಮರು ತಮ್ಮನ್ನು ಮಧ್ಯದಲ್ಲಿರಿಸಿ (ಹೃದಯಕಮಲದಲ್ಲಿರಿಸಿ) ಧ್ಯಾನಿಸುತ್ತಾರೋ ಅಂತಹವರ ಶರೀರವನ್ನೇ ನೀವು ನಾಶಮಾಡುತ್ತೀರಿ. ಅಂದರೆ ಮರಳಿ ಅಂತಹ ಶರೀರವನ್ನು ಎತ್ತೋಣವೆಂಬ ಭವಬಂಧದಿಂದ ಬಿಡಿಸಿ ಮೋಕ್ಷವನ್ನು ಹೊಂದಿಸುತ್ತೀರೆಂದಭಿಪ್ರಾಯವು. ಇದು ಯುಕ್ತವೇ ಸರಿ. ಹೇಗೆಂದರೆ, ಲೋಕದಲ್ಲಿ ಮಹಾನುಭಾವರನ್ನು ಮಧ್ಯಸ್ಥರನ್ನಾಗಿ ಇಟ್ಟರೆ ಅವರು ವಿಗ್ರಹ (ಜಗಳ)ವನ್ನು ಶಮನ ಮಾಡುತ್ತಾರೆಂಬುದು ಅವರ ಸ್ವಭಾವವಲ್ಲವೆ? ಮಹಾ ಮಹಿಮೆಯುಳ್ಳ ತಮ್ಮನ್ನು ಮಧ್ಯಸ್ಥರನ್ನಾಗಿ ಇಟ್ಟ ಭವ್ಯಾತ್ಮನಿಗೆ ತಾವೂ ವಿಗ್ರಹ (ಶರೀರ) ಶಮನವನ್ನು ಮಾಡಿದಿರಿ. ಇಲ್ಲಿ ವಿಗ್ರಹವೆಂಬ ಶಬ್ದಕ್ಕೆ ಜಗಳ ಒಂದರ್ಥ, ಶರೀರ ಇನ್ನೊಂದರ್ಥ. ಇಲ್ಲಿ ಚಮತ್ಕಾರಾರ್ಥವೇನೆಂದರೆ, ಮಹಾತ್ಮರನ್ನು ಮಧ್ಯಸ್ಥರನ್ನಾಗಿ ಇಟ್ಟರೆ ವಿಗ್ರಹ (ಕಲಹ) ಸಮಾಧಾನ ಮಾಡುವುದು ಲೋಕದಲ್ಲಿ ಪ್ರಸಿದ್ಧವಾಗಿದೆ. ಭವ್ಯಾತ್ಮನು ತಮ್ಮನ್ನು ಮಧ್ಯಸ್ಥರನ್ನಾಗಿ ಮಾಡಿ ವಿಗ್ರಹ (ಶರೀರ) ಸಮಾಧಾನವನ್ನು ಹೊಂದಿದನು (ಮುಕ್ತನಾದನು). ಅಂತಃ

ಎಂಬ ಶಬ್ದಕ್ಕೆ ಮಧ್ಯದಲ್ಲಿ ಎಂದೊಂದರ್ಥ, ಮನಸ್ಸಿನಲ್ಲಿ ಎಂಬುದಿನ್ನೊಂದರ್ಥ. ತಮ್ಮನ್ನು ಮನಸ್ಸಿನಲ್ಲಿಟ್ಟವನೆಂಬುದು ಇಲ್ಲಿ ಮುಖ್ಯಾರ್ಥವು.

ಆತ್ಮಾಮನೀಷಿಭಿರಯಂತ್ವದಭೇದಬುದ್ಧ್ಯಾ
ಧ್ಯಾತೋಜಿನೇಂದ್ರಭವತೀಹಭವತ್ಪ್ರಭಾವಃ ।
ಪಾನೀಯಮಪ್ಯಮೃತಮಿತ್ಯನುಚಿಂತ್ಯಮಾನಂ
ಕಿಂನಾಮನೋವಿಷವಿಕಾರಮಪಾಕರೋತಿ ॥ ೧೭ ॥

೧೭. ತಾ॥ ಓ ಜಿನೇಂದ್ರನೇ ! ಈ ಲೋಕದಲ್ಲಿ ಜ್ಞಾನಿಗಳು ಅವರ ಆತ್ಮನನ್ನು ಕರ್ಮಲೇಪವಿಲ್ಲದ ಪರಿಶುದ್ಧ ಚೈತನ್ಯಸ್ವರೂಪವುಳ್ಳ ತಮ್ಮ ಸಮಾನಸ್ವರೂಪವನ್ನಾಗಿ ಏಕರೂಪದಿಂದ ಧ್ಯಾನಿಸಿ ಶರೀರಾವಸಾನದಲ್ಲಿ ತಮ್ಮಂತೆ ಅನಂತಜ್ಞಾನಾದಿ ಗುಣಪ್ರಾಪ್ತಿ ಎಂಬ ಮಹಾ ಮಹಿಮೆಯನ್ನು ಪಡೆಯುತ್ತಾರೆ. ಹೇಗೆಂದರೆ, ಲೋಕದಲ್ಲಿ ನೀರನ್ನು ಅಮೃತವೆಂದು ಅಡಿಗಡಿಗೆ ಧ್ಯಾನಿಸಿಪಾನಮಾಡಲು ಅದು ವಿಷದಿಂದುಂಟಾದ ವಿಕಾರವನ್ನು ಪರಿಹರಿಸುವುದಿಲ್ಲವೇನು ? ಹಾಗೆಯೇ ಈ ಕರ್ಮಿಯಾದ ಆತ್ಮನು ತನ್ನನ್ನು ಪರಮಾತ್ಮಸಮಾನ ಶುದ್ಧಸ್ವರೂಪವನ್ನಾಗಿ ಧ್ಯಾನಿಸಲು ತಮಗೆ ಸಮಾನಸ್ವರೂಪನಾಗಿಯೇ ಆಗುತ್ತಾನೆಂಬುದು ಲೋಕದೃಷ್ಟಾಂತ ಸಿದ್ಧವೆಂದಭಿಪ್ರಾಯವು. ಭಾವನಾನುಗುಣವೇ ಸಿದ್ಧಿಯೆಂದು ಭಾವವು.

ತ್ವಾಮೇವವೀತತಮಸಂಪರವಾದಿನೋಪಿ
ನೂನಂವಿಭೋಹರಿಹರಾದಿಧಿಯಾಪ್ರಪನ್ನಾಃ ।
ಕಿಂಕಾಚಕಾಮಲಿಭಿರೀಶಸಿತೋಪಿಶಂಖೋ
ನೋಗೃಹ್ಯತೇವಿವಿಧವರ್ಣವಿಪರ್ಯಯೇಣ ॥ ೧೮ ॥

೧೮. ತಾ॥ ಓ ಸ್ವಾಮಿಯಾದ ವೀತರಾಗ ಪರಮಾತ್ಮನೇ ! ಬೇರೆ ಬೇರೆಯಾದ ವಾದಿಗಳೂ ಕೂಡ ನಿಷ್ಕಲ್ಮಷರಾದ ತಮ್ಮನ್ನೇ ಬ್ರಹ್ಮ, ವಿಷ್ಣು, ಮಹೇಶ್ವರರೆಂದು ಭಾವಿಸಿಕೊಂಡು ತಮ್ಮತಮ್ಮ ದೇವರನ್ನಾಗಿ ತಿಳಿದು ಭಕ್ತರಾಗಿದ್ದಾರೆ. ಈ ವಿಷಯದಲ್ಲಿ ಲೋಕದೃಷ್ಟಾಂತವೇನೆಂದರೆ, ಚಿತ್ತಕಾಮಾಲೆಯುಳ್ಳ ಜನಗಳು ಬೆಳ್ಳಗಿರುವ ಶಂಖವನ್ನು ಒಂದೊಂದುಕಾಲದಲ್ಲಿ ಒಂದೊಂದು

ಬಣ್ಣವುಳ್ಳದ್ದನ್ನಾಗಿ ತಿಳಿಯುತ್ತಾರಲ್ಲವೆ ? ಆ ಕಾಮಾಲೆ ರೋಗವಿಲ್ಲದವನ ಕಣ್ಣಿಗೆ ಆ ಶಂಖವು ಇದ್ದಹಾಗೆಯೇ ತೋರುತ್ತದೆ. ಹಾಗೆ ನಿಮ್ಮ ಯಥಾರ್ಥ ಸ್ವರೂಪವನ್ನು ಅರಿತವನ ಕಣ್ಣಿಗೆ ತಾವೂ ವೀತರಾಗಪರಮಾತ್ಮ ಜಿನೇಂದ್ರ ಸ್ವರೂಪರಾಗಿಯೇ ತೋರುತ್ತೀರಿ. ನಿಮ್ಮ ಸ್ವರೂಪದ ನಿಜಸ್ಥಿತಿಯನ್ನು ಅರಿಯದವರ ಭಾಗದಲ್ಲಿ ಅವರವರಿಗೆ ಇಷ್ಟವಾದ ಬ್ರಹ್ಮ, ವಿಷ್ಣು, ಶಿವಾದಿ ದೇವತಾರೂಪದಿಂದ ಭಾವಿಸಲ್ಪಡುತ್ತೀರೆಂದಭಿಪ್ರಾಯವು.

ಮುಂದೆ ಅಷ್ಟಮಹಾಪ್ರಾತಿಹಾರ್ಯಗಳ
ವರ್ಣನವನ್ನು ಮಾಡುತ್ತಾರೆ.

ಧರ್ಮೋಪದೇಶಸಮಯೇಸವಿಧಾನುಭಾವಾ
ದಾಸ್ತಾಂಜನೋಭವತಿತೇತರುರಪ್ಯಶೋಕಃ ।
ಅಭ್ಯುದ್ಗತೇದಿನಪತೌಸಮಹೀರುಹೋಪಿ
ಕಿಂವಾವಿಬೋಧಮುಪಯಾತಿನಜೀವಲೋಕಃ ॥ ೧೯ ॥

೧೯. ತಾ॥ ಓ ಜಿನೇಂದ್ರರೇ ! ಅರ್ಹಂತ ಪದವಿಯನ್ನು ಪಡೆದು ತಾವು ಸಮವಸರಣ ವಿರಾಜಮಾನರಾಗಿ ತತ್ತ್ವೋಪದೇಶ ಮಾಡುವ ಕಾಲದಲ್ಲಿ ತಮ್ಮ ಸನ್ನಿಧಾನದ (ಹತ್ತಿರ ಇರುವ) ಮಾಹಾತ್ಮ್ಯದಿಂದ ಮನುಷ್ಯನು ಶೋಕವಿಲ್ಲದವನಾಗುತ್ತಾನೆಂಬುದಿರಲಿ, ಮರವೂ ಕೂಡ ಅಶೋಕವಾಯಿತು. ಶೋಕವಿಲ್ಲದ್ದಾಯಿತೇ ಅಂದರೆ ಅಶೋಕವೆಂಬ ಹೆಸರುಳ್ಳದ್ದಾಯಿತೆಂದು ಪರಿಹಾರವು. ಸೂರ್ಯನು ಉದಯಿಸುತ್ತಿರಲಾಗಿ ಮರಗಳು ಮೊದಲುಗೊಂಡು ಸಮಸ್ತವು ಪ್ರಕಾಶಿಸುವಾಗ, ಮನುಷ್ಯನು ಎಚ್ಚರವನ್ನು ಹೊಂದುವುದಿಲ್ಲವೆ ? ಹಾಗೆ ತಮ್ಮ ಸಾನ್ನಿಧ್ಯದ ದೆಸೆಯಿಂದ ಮರವೂ ಕೂಡ ಶೋಕವಿಲ್ಲದ್ದೆಂಬ ಅರ್ಥವುಳ್ಳ ಅಶೋಕವೆಂಬ ಹೆಸರುಳ್ಳದ್ದಾಗುತ್ತದೆಂದಭಿಪ್ರಾಯವು. ಜನಗಳು ಅಶೋಕರಾಗುತ್ತಾರೆಂದರೆ ಸಂಸಾರದುಃಖಗಳನ್ನು ಕಳೆದು ಮುಕ್ತರಾಗುತ್ತಾರೆಂದಭಿಪ್ರಾಯವು.

ಚಿತ್ರಂವಿಭೋಕಥಮವಾಂಕುಖವೃಂತಮೇವ
ವಿಷ್ವಕ್ಪತತ್ಯವಿರಳಾಸುರಪುಷ್ಪವೃಷ್ಟಿಃ ।
ತ್ವದ್ಗೋಚರೇಸುಮನಸಾಂಯದಿವಾಮುನೀಶ
ಗಚ್ಛಂತಿನೂನಮಧಏವಹಿಬಂಧನಾನಿ ॥ ೨೦ ॥

೨೦. ತಾ॥ ಓ ಪ್ರಭುವೇ ! ತಮ್ಮ ಸಮವಸರಣದ ಸುತ್ತಲೂ ಮಳೆಯಂತೆ ಸುರಿಯುವ ದಟ್ಟವಾದ ಹೂವಿನ ರಾಶಿಯು ಹೇಗೆ ಕೆಳಮುಖವಾದ ತೊಟ್ಟುಳ್ಳದ್ದಾಗಿಯೇ ಬೀಳುತ್ತದೆ ? ಇದು ಆಶ್ಚರ್ಯವೆಂದರೆ ಓ ಮುನೀಶ್ವರರೇ ! ತಮ್ಮ ದೃಷ್ಟಿಗೋಚರವಾದ ಸುಮನಸ್ಸುಗಳ (ಪುಷ್ಪಗಳ) ಬಂಧನಗಳು ಕೆಳಗೇ ಹೋಗುತ್ತವಲ್ಲವೆ ? ಇಲ್ಲಿ ಸುಮನಸಾಂ ಎಂಬ ಶಬ್ದಕ್ಕೆ ಒಳ್ಳೆಯ ಮನಸ್ಸುಳ್ಳವರು ಎಂಬ ಅರ್ಥವನ್ನು ಇಟ್ಟುಕೊಂಡು, ಬಂಧನಾನಿ, ಎಂಬ ಶಬ್ದಕ್ಕೆ ಸಂಸಾರಬಂಧನಗಳೆಂಬ ಅರ್ಥವನ್ನು ಇಟ್ಟುಕೊಂಡರೆ ಒಳ್ಳೆಯ ಮನಸ್ಸುಳ್ಳ ಭವ್ಯಾತ್ಮರ ಸಂಸಾರಬಂಧಗಳೆಂಬ ಕಟ್ಟುಗಳು ಅಧೋಗತಿಯನ್ನು ಹೊಂದುತ್ತವಲ್ಲವೆ ಎಂದರ್ಥವಾಗುತ್ತದೆ. ಮತ್ತು ಸುಮನಸ್ ಶಬ್ದಕ್ಕೆ ಪುಷ್ಪವೆಂದೂ, ಬಂಧನಶಬ್ದಕ್ಕೆ ಅದರ ತೊಟ್ಟೆಂದೂ ಅರ್ಥವಾಗುತ್ತದೆ. ದೇವತೆಗಳಿಂದ ಮಾಡಲ್ಪಟ್ಟ ಪುಷ್ಪವೃಷ್ಟಿಯು ಯಾವಪ್ರಕಾರ ಕೆಳಮುಖವಾದ ಬಂಧನವುಳ್ಳದ್ದಾಗಿ ಬೀಳುತ್ತದೆಯೋ ಹಾಗೆ ತಮ್ಮ ಕಟಾಕ್ಷಪಾತ್ರವಾದ ಪ್ರಾಣಿಯ ಸಂಸಾರಬಂಧವೂ ತಪ್ಪಿ ಹೋಗಿ ಆ ಪ್ರಾಣಿಯು ಮೋಕ್ಷವನ್ನೈದುವುದೆಂದಭಿಪ್ರಾಯವು.

ಸ್ಥಾನೇಗಭೀರಹೃದಯೋದಧಿಸಂಭವಾಯಾಃ
ಪೀಯೂಷತಾಂತವಗಿರಸ್ಸಮುದೀರಯಂತಿ ।
ಪೀತ್ವಾಯತಃಪರಮಸಮ್ಮದಸಂಗಭಾಜೋ
ಭವ್ಯಾವ್ರಜಂತಿತರಸಾಪ್ಯಜರಾಮರತ್ವಂ ॥ ೨೧ ॥

೨೧. ತಾ॥ ಓ ಜಿನೇಂದ್ರರೇ ! ತಮ್ಮ ಗಂಭೀರವಾದ ಹೃದಯವೆಂಬ ಸಮುದ್ರದಲ್ಲಿ ಹುಟ್ಟಿದ ಸಮಸ್ತ ತತ್ತ್ವಾರ್ಥಗಳ ಉಪದೇಶಸ್ವರೂಪಗಳಾದ ವಾಣಿಯು (ದಿವ್ಯಧ್ವನಿಗಳು) ಅಮೃತಗಳೆಂಬುದು ಯುಕ್ತವೇ ಸರಿ. ಅದು ಹೇಗೆಂದರೆ, ಅಮೃತಪಾನವನ್ನು ಮಾಡಿದರೆ ಎಷ್ಟು ಆನಂದವುಂಟಾಗುತ್ತದೋ ಅಷ್ಟು ಆನಂದವು ತಮ್ಮ ದಿವ್ಯಧ್ವನಿಯನ್ನು ಕೇಳಿದಭವ್ಯಾತ್ಮರಿಗೆ ಉಂಟಾಗುತ್ತಾದುದರಿಂದಲೂ ಮತ್ತು ತಮ್ಮ ದಿವ್ಯಧ್ವನಿಯು ಕೇಳಿದ ಭವ್ಯಾತ್ಮರಿಗೆ ಪುನಃಜನ್ಮವಿಲ್ಲದ ಹಾಗೆ ಮೋಕ್ಷವನ್ನೇ ಉಂಟುಮಾಡುತ್ತಾದುದರಿಂದಲೂ, ಅಮೃತದಂತೆ ಮುಪ್ಪು ಮರಣಗಳನ್ನು ತಪ್ಪಿಸುತ್ತದೆ. ಆದುದರಿಂದಲೇ ತಮ್ಮ ವಾಣಿಯು ಅಮೃತಕ್ಕೆ ಸಮಾನಗಳೆಂದು ಭಾವವು.

ಸ್ವಾಮಿನ್ಸುದೂರಮವನಮ್ಯಸಮುತ್ಪತಂತೋ
ಮನ್ಯೇವದಂತಿ ಶುಚಯಸ್ಸುರಚಾಮರೌಘಾಃ ।
ಯೆಸ್ಮೈಕೃನತಿಂವಿದಧತೇಮುನಿಪುಂಗವಾಯ
ತೇನೂನಮೂರ್ಧ್ವಗತಯಃ ಖಲುಶುದ್ಧಭಾವಾಃ ॥ ೨೨ ॥

೨೨. ತಾ॥ ಓ ಸ್ವಾಮಿಯೆ! ತಮ್ಮ ಎರಡು ಪಾರ್ಶ್ವಗಳಲ್ಲಿಯೂ ದೇವತೆಗಳಿಂದ ಬೀಸಲ್ಪಡುವ ಪರಿಶುದ್ಧ (ಶುಭ್ರ) ಗಳಾದ ಚಾಮರಗಳ ಸಮೂಹಗಳು ಬೀಸುವಕಾಲದಲ್ಲಿ ಮೇಲಕ್ಕೆ ದೂರವಾಗಿ ಹೋಗಿ ಕೆಳಕ್ಕೆ ಬೀಳುತ್ತವೆ. ಈ ರೀತಿಯನ್ನು ನೋಡಿ ನಾನು ಊಹಿಸುವುದೇನೆಂದರೆ, ಈ ಮುನಿಶ್ರೇಷ್ಠರಾದ ಜಿನೇಂದ್ರರಿಗೆ ನಮಸ್ಕಾರಮಾಡಿದ ಪ್ರಾಣಿಗಳು ನಮ್ಮಂತೆಯೇ ಪರಿಶುದ್ಧಭಾವ (ನಿರ್ಮಲಪರಿಣಾಮ) ವುಳ್ಳವರಾಗಿ ಊರ್ಧ್ವ ಗತಿ (ಸ್ವರ್ಗಮೋಕ್ಷ) ಯನ್ನು ಪಡೆಯುವರೆಂದು ಈ ಚಾಮರಗಳು ಸೂಚಿಸು ತ್ತಲಿವೆ, ಇದು ನಿಶ್ಚಯ.

ಶ್ಯಾಮಂಗಭೀರಗಿರಮುಜ್ವಲಹೇಮರತ್ನ
ಸಿಂಹಾಸನಸ್ಥಮಿಹಭವ್ಯಶಿಖಂಡಿನಸ್ತ್ವಾಂ
ಆಲೋಕಯಂತಿರಭಸೇನನದಂತಮುಚ್ಚೈ
ಶ್ಚಾಮೀಕರಾದ್ರಿಶಿರಸೀವನವಾಂಬುವಾಹಂ ॥ ೨೩ ॥

೨೩. ತಾ॥ ಓ ಜಿನರಾಜನೇ ! ನೀಲವರ್ಣರಾಗಿರುವ ತಾವು ಹೊಳೆಯು ತ್ತಿರುವ ರತ್ನಖಚಿತವಾದ ಬಂಗಾರದ ಉನ್ನತಸಿಂಹಾಸನದಲ್ಲಿ ವಿರಾಜಮಾನ ರಾಗಿ ಗಂಭೀರವಾದ ದಿವ್ಯಧ್ವನಿ ಮಾಡುತ್ತಿರಲು ಈ ಸಮವಸರಣದಲ್ಲಿರುವ ಭವ್ಯಾತ್ಮರೆಂಬ ನವಿಲುಗಳು ತಮ್ಮನ್ನು ಮೇರುಪರ್ವತದ ತುದಿಯಲ್ಲಿ ಕುಳಿತು ಗಟ್ಟಿಯಾಗಿ ಗುಡುಗುತ್ತಿರುವ ಮೋಡದರೀತಿಯಲ್ಲಿ ವೇಗದಿಂದ ನೋಡುತ್ತವೆ. ಕರೀಮೋಡವನ್ನು ನೋಡಿ ನವಿಲುಗಳು ಎಷ್ಟು ಸಂತೋಷಿ ಸುತ್ತವೆಯೋ ಆ ಪ್ರಕಾರ ಅತ್ಯುನ್ನತರತ್ನಸಿಂಹಾಸನದಲ್ಲಿ ಕುಳಿತು ದಿವ್ಯ ಧ್ವನಿಯನ್ನು ಮಾಡುತ್ತಿರುವ ತಮ್ಮನ್ನು ದರ್ಶನಮಾಡಿ ಭವ್ಯಾತ್ಮರು ಅಷ್ಟೂ ಸಂತೋಷಿಸುತ್ತಾರೆಂದಭಿಪ್ರಾಯವು.

ಉದ್ಗಚ್ಛತಾತವಶಿತಿದ್ಯುತಿಮಂಡಲೇನ
ಲುಪ್ತಚ್ಛದಚ್ಛವಿರಶೋಕತರುರ್ಬಭೂವ ।
ಸಾಂನಿಧ್ಯತೋಪಿಯದಿವಾತವವೀತರಾಗ
ನೀರಾಗತಾಂವ್ರಜತಿಕೋನಸಚೇತನೋಪಿ ॥ ೨೪ ॥

೨೪. ತಾ॥ ಓ ವೀತರಾಗ ಪರಮಾತ್ಮನೇ ! ಮೇಲಕ್ಕೆ ಏಳುತ್ತಿರುವ ಮಂಡಲಾಕಾರವಾದ ತಮ್ಮ ದೇಹದ ನೀಲಕಾಂತಿ ಸಮೂಹದಿಂದ ಮರೆ ಮಾಡಲ್ಪಟ್ಟ ಅಶೋಕವೃಕ್ಷದ ಎಲೆಗಳ ಕೆಂಪುಕಾಂತಿಯು ಹೇಗೆ ತೋರುತ್ತಿದೆ ಅಂದರೆ ಅಚೇತನಗಳಾದ ಮರ ಮುಂತಾದವುಗಳೂ ಕೂಡ ತಮ್ಮ ಸನ್ನಿಧಾನದ ದೆಸೆಯಿಂದ ರಾಗ(ಕೆಂಪು)ವನ್ನು ತೊರೆಯುತ್ತಿವೆಂಬ ಭಾವವನ್ನು ಲೋಕಕ್ಕೆ ಸೂಚನೆ ಕೊಡುತ್ತಿವೆ. ಇನ್ನು ಸಚೇತನರು ರಾಗ(ಪ್ರೀತಿ)ಯನ್ನು ಬಿಡುವುದೇ ನತಿಶಯ ? ತಮ್ಮ ಸಮೀಪದಲ್ಲಿ ಯಾರಿದ್ದರೂ ರಾಗರಹಿತನಾಗಿ ಮೋಕ್ಷವನ್ನು ಹೊಂದುತ್ತಾನೆಂದು ಮುಖ್ಯಭಾವವು.

ಭೋಭೋಃಪ್ರಮಾದಮವಧೂಯಭಜಧ್ವಮೇನ
ಮಾಗತ್ಯನಿರ್ವೃತಿಪುರೀಪ್ರತಿಸಾರ್ಥವಾಹಂ ।
ಏತನ್ನಿವೇದಯತಿದೇವಜಗತ್ತ್ರಯಾಯ
ಮನ್ಯೇನದನ್ನಭಿನಭಃಸುರದುಂದುಭಿಸ್ತೇ ॥ ೨೫ ॥

೨೫. ತಾ॥ ಓ ಜಿನದೇವನೇ ! ಆಕಾಶದಲ್ಲಿ ಎಲ್ಲಾ ಕಡೆಯಲ್ಲಿಯೂ ಧ್ವನಿಮಾಡುತ್ತಿರುವ ದೇವದುಂದುಭಿ(ಭೇರಿ)ಯು ಎಲೈ ಎಲೈ ಭವ್ಯಾತ್ಮರೇ ಈ ದೇಹ, ಪತ್ನಿ, ಪುತ್ರಾದಿಗಳಿಂದ ಸುಖವುಂಟಾಗುತ್ತದೆಂಬ ಭ್ರಾಂತಿಯನ್ನು ತೊರೆದು ನಿತ್ಯಸುಖರೂಪವಾದ ಮೋಕ್ಷವೆಂಬ ಪಟ್ಟಣದ ಘನ ಸಾಹುಕಾರ ರಾದಂತಹ ಈ ಪಾರ್ಶ್ವನಾಥ ತೀರ್ಥಂಕರರನ್ನು ಸೇವಿಸಿರಿ. ನಿಮಗೂ ಆ ಅನಂತ ಸುಖರೂಪವಾದ ಮುಕ್ತಿಯೆಂಬ ನಿಧಿಯು ದೊರೆಯುವುದು. ಅನ್ಯಾಯವಾಗಿ ಸಂಸಾರಸುಖಾನುಭವವೆಂಬ ಭ್ರಾಂತಿಯಲ್ಲಿ ತೊಳಲಬೇಡಿರಿ. ಎಂಬುದಾಗಿ ಮೂರುಲೋಕದಲ್ಲಿರುವವರನ್ನು ಕುರಿತು ಹೇಳುವಂತೆ ನನಗೆ ತೋರುತ್ತಿದೆ, ಎಂದು ಸ್ತೋತ್ರ ಕರ್ತೃವಾದ ಆಚಾರ್ಯರು ಸ್ತುತಿಸುತ್ತಾರೆ.

ಉದ್ಯೋತಿತೇಷುಭವತಾಭುವನೇಷುನಾಥ
ತಾರಾನ್ವಿತೋವಿಧುರಯಂವಿಹತಾಂಧಕಾರಃ ।
ಮುಕ್ತಾಕಲಾಪಕಲಿತೋರುಸಿತಾತಪತ್ರ
ವ್ಯಾಜಾತ್ತ್ರಿಧಾಧೃತತನುರ್ಧ್ರುವಮಭ್ಯುಪೇತಃ ॥ ೨೬ ॥

೨೬. ತಾ॥ ಓ ರಕ್ಷಕರೇ! ತಮ್ಮಿಂದ ಈ ಸಮಸ್ತಲೋಕಗಳೂ ಪ್ರಕಾಶಿಸಲ್ಪಡುತ್ತಿರಲು ಸಮಸ್ತ ಕತ್ತಲೆಯನ್ನೂ ತೊಲಗಿಸುವಂತಹ ಈ ಚಂದ್ರನು ನಕ್ಷತ್ರಗಳೊಡನೆ ಕೂಡಿದವನಾಗಿ ಮುತ್ತಿನ ಕುಚ್ಚುಗಳಿಂದ ವ್ಯಾಪ್ತವಾಗಿರುವ ಶ್ವೇತಛತ್ರವೆಂಬ ನೆಪಮಾಡಿಕೊಂಡು (ಮುಕ್ಕೊಡೆ) ಶರೀರವನ್ನು ಧರಿಸಿ ತಮ್ಮ ಸಮೀಪವನ್ನು ಹೊಂದಿದ್ದಾನೆ. ಇದು ನಿಶ್ಚಯ. ಆದರೆ ಚಂದ್ರನಿಂದಲೂ ಹೋಗಲಾಡಿಸಲಾರದ ಸಮಸ್ತ ಲೋಕ (ಜನ) ಗಳ ಅಜ್ಞಾನಾಂಧಕಾರಗಳನ್ನು ಹೋಗಲಾಡಿಸಿ ಶುಭ್ರ(ಪರಿಶುದ್ಧ)ಗಳನ್ನಾಗಿ ಮಾಡಿದಿರೆಂಬ ವೈಭವವನ್ನು ಮುಕ್ಕೊಡೆಯು ತಿಳಿಸುತ್ತದೆಂದಭಿಪ್ರಾಯವು.

ಸ್ವೇನಪ್ರಪೂರಿತಜಗತ್ತ್ರಯಪಿಂಡಿತೇನ
ಕಾಂತಿಪ್ರತಾಪಯಶಸಾಮಿವಸಂಚಯೇನ ।
ಮಾಣಿಕ್ಯಹೇಮರಜತಪ್ರವಿನಿರ್ಮಿತೇನ
ಸಾಲತ್ರಯೇಣಭಗವನ್ನಭಿತೋವಿಭಾಸಿ ॥ ೨೭ ॥

೨೭. ತಾ॥ ಓ ಜಿನರಾಜನೇ! ತಮ್ಮ ಕಾಂತಿಯೂ, ಪ್ರತಾಪವೂ, ಯಶಸ್ಸೂ ಈ ಮೂರೂ ಗುಂಪಾಗಿ ಸೇರಿ ಮೂರುಲೋಕಗಳನ್ನೂ ತುಂಬಿ ಉಂಡೆಯಂತೆ ಗುಂಡಾಗಿ ಸುತ್ತಿಕೊಂಡಂತೆ, ಮಾಣಿಕ್ಯ, ಬಂಗಾರ, ಬೆಳ್ಳಿಗಳಿಂದ ನಿರ್ಮಿತವಾದ ಸಾಲತ್ರಯ (ಮೂರುಕೋಟೆ) ದಿಂದ ಪ್ರಕಾಶಿಸುತ್ತೀರಿ. ತಮ್ಮ ಕಾಂತಿಯು ಮಾಣಿಕ್ಯಕೋಟೆಯ ರೂಪವಾಗಿಯೂ, ಪ್ರತಾಪವು ಬಂಗಾರದ ಕೋಟೆಯ ರೂಪವಾಗಿಯೂ, ಯಶಸ್ಸು ಬೆಳ್ಳಿಕೋಟೆಯ ರೂಪವಾಗಿಯೂ, ಸಮವಸರಣದಲ್ಲಿ ಪ್ರಕಾಶಿಸುತ್ತದೆಂದಭಿಪ್ರಾಯವು.

ದಿವ್ಯಸ್ರಜೋಜಿನನಮತ್ತ್ರಿದಶಾಧಿಪಾನಾ
ಮುತ್ಸೃಜ್ಯರತ್ನರಚಿತಾನಪಿಮೌಳಿಬಂಧಾನ್ ।
ಪಾದೌಶ್ರಯಂತಿಭವತೋಯದಿವಾಪರತ್ರ
ತ್ವತ್ಸಂಗಮೇಸುಮನಸೋನರಮಂತಏವ ॥ ೨೮ ॥

೨೮. ತಾ॥ ಓ ಕರ್ಮಶತ್ರುಗಳನ್ನು ಗೆದ್ದಂತಹ ಸ್ವಾಮಿಯೇ! ದೇವತೆಗಳು ತಮಗೆ ನಮಸ್ಕಾರಮಾಡುವ ಕಾಲದಲ್ಲಿ ಅವರ ರತ್ನಮಯವಾದ ಕಿರೀಟಗಳಲ್ಲಿದ್ದ ಹೂವಿನ ಸರಗಳು ಆ ಕಿರೀಟಗಳನ್ನು ಬಿಟ್ಟು ತಮ್ಮ ಪಾದಗಳನ್ನಾಶ್ರಯಿಸುತ್ತವೆ, ಆದರೆ ತಮ್ಮ ಸರ್ವಾವಯಗಳನ್ನು ಬಿಟ್ಟು ಹೂವುಗಳು ತಮ್ಮ ಪಾದಗಳನ್ನೇ ಆಶ್ರಯಿಸುವುದಕ್ಕೆ ಕಾರಣವೇನೆಂದರೆ ಸುಮನಸ್ಸುಗಳೂ, ಜ್ಞಾನಿಗಳೂ ತಮ್ಮ ಪಾದಗಳನ್ನು ಬಿಟ್ಟು ಮತ್ತೆಲ್ಲಿಯೂ, ಪ್ರಕಾಶಿಸುವುದಿಲ್ಲ. ಶ್ರೀ ಜಿನೇಶ್ವರರು ಸರ್ವದೇವತೆಗಳಿಂದಲೂ ಪೂಜಿಸಲ್ಪಡುವ ಮಹಿಮೆಯುಳ್ಳವರೆಂದು ಭಾವವು.

ತ್ವಂನಾಥಜನ್ಮಜಲಧೇರ್ವಿಪರಾಙ್ಮುಖೋಽಪಿ
ಯತ್ತಾರಯಸ್ಯಸುಮತೋನಿಜಪೃಷ್ಠಲಗ್ನಾನ್ ।
ಯುಕ್ತಂಹಿಪಾರ್ಥಿವನಿಪಸ್ಯಸತಸ್ತವೈವ
ಚಿತ್ರಂವಿಭೋಯದಸಿಕರ್ಮವಿಪಾಕಶೂನ್ಯಃ ॥ ೨೯ ॥

೨೯. ತಾ॥ ಓ ರಕ್ಷಕರೆ! ನೀರಿನಲ್ಲಿ ಕೆಳಮುಖವಾಗಿ ಮಗುಚಿಕೊಂಡು ಮುಳುಗದ (ನೀರುತುಂಬದ) ಮಣ್ಣಿನಘಟ(ಹರಿವಿ)ದ ಮೇಲಿರುವ ಪ್ರಾಣಿಗಳು ನೀರಿನಲ್ಲಿ ಮುಳುಗುವುದಿಲ್ಲವಷ್ಟೆ? ಅದರಂತೆ ಸಂಸಾರವೆಂಬ ಸಮುದ್ರಕ್ಕೆ ಸಂಪೂರ್ಣವಾಗಿ ವಿಮುಖರಾಗಿರುವ (ಸಂಸಾರ ಬಾರದಂತೆ ಪ್ರತಿಭಟಿಸಿರುವ) ತಮ್ಮನ್ನಾಶ್ರಯಿಸಿದ (ಬೆನ್ನನ್ನು ಹತ್ತಿದ) ಪ್ರಾಣಿಗಳನ್ನು ತಾವು ಸಂಸಾರ ಸಮುದ್ರದಿಂದ ದಾಟಿಸುವುದು ಯುಕ್ತವೇ ಸರಿ. ಆದರೆ ಮಣ್ಣಿನ ಘಟವನ್ನು ಆವಿಗೆಯಲ್ಲಿಡದೆ ಹಸಿಯಾಗಿದ್ದರೆ ಪ್ರಾಣಿಗಳನ್ನು ವಹಿಸಲಾರದು, ಆವಿಗೆಯಲ್ಲಿ ಸುಟ್ಟದ್ದಾಗಿಯೇ ಇರಬೇಕು. ತಾವಾದರೋ ಕರ್ಮವಿಪಾಕವಿಲ್ಲದವರಾಗಿದ್ದುಕೊಂಡು ದಾಟಿಸುವುದು ಆಶ್ಚರ್ಯವು! ಅಂದರೆ ಕರ್ಮವಿಪಾಕವಿಲ್ಲದವರಾದುದರಿಂದ ಸುಡದ (ಹಸಿ) ಹರಿವಿಯಂತಿರುವ ತಾವು ಜಲಧಿಯನ್ನು ದಾಟಿಸುವುದು ಆಶ್ಚರ್ಯವೆಂದು ವಿರೋಧಾರ್ಥವು. ಅಶುಭವಾದ ಸಮಸ್ತ ಘಾತಿಕರ್ಮಗಳನ್ನು ನಾಶಮಾಡಿ ಶುದ್ಧಾತ್ಮರಾದ ತಮ್ಮನ್ನಾಶ್ರಯಿಸುವವರು (ಧ್ಯಾನಿಸುವವರು) ಸಂಸಾರಬಂಧದಿಂದ ವಿಮುಕ್ತರಾಗುವರೆಂದು ಸಮಾಧಾನವು.

ವಿಶ್ವೇಶ್ವರೋಽಪಿಜನಪಾಲಕದುರ್ಗತಸ್ತ್ವಂ
ಕಿಂವಾಕ್ಷರಪ್ರಕೃತಿರಪ್ಯಲಿಪಿಸ್ತ್ವಮೀಶ ।
ಅಜ್ಞಾನವತ್ಯಪಿಸದೈವಕಥಂಚಿದೇವ
ಜ್ಞಾನಂತ್ವಯಿಸ್ಫುರತಿವಿಶ್ವವಿಕಾಸಹೇತು ॥ ೩೦ ॥

೩೦. ತಾ॥ ಓ ಜಿನನಾಥರೇ ! ತಾವು ಪ್ರಪಂಚಕ್ಕೆ ಸ್ವಾಮಿ (ದೊರೆ) ಯಾಗಿದ್ದರೂ, ಸರ್ವಜನರನ್ನೂ ಪರಿಪಾಲಿಸುವವರೆಂದು ಪ್ರಸಿದ್ಧರಾದರೂ, ದರಿದ್ರರಾಗಿದ್ದೀರಿ. ಜನಪಾಲಕರಾಗಿದ್ದರೂ ದರಿದ್ರರಾಗಿದ್ದೀರೆಂಬ ಮಾತು ವಿರೋಧವಾಗಿ ತೋರುತ್ತದೆ, ಸಮಸ್ತ ವಿಷಯದಲ್ಲಿಯೂ ವೀತರಾಗರೆಂದು ಪರಿಹಾರಾರ್ಥವು. ತಮ್ಮ ಸ್ವರೂಪವನ್ನು ಬಹಳ ಕಷ್ಟದಿಂದ ತಿಳಿಯ ಬೇಕೆಂದೂ, ಮತ್ತು ತಾವು ಸರ್ವಸಂಗ ಪರಿತ್ಯಾಗಿಯಾದ್ದರಿಂದ ಈ ಲೋಕ ದಲ್ಲಿ ತಮಗೆ ಸ್ವತ್ತಾಗಿ ಅಭಿಮಾನವಿಷಯವಾದ ವಸ್ತುವು ಯಾವುದೂ ಇಲ್ಲ ವಾದ್ದರಿಂದ ದರಿದ್ರರೆಂತಲೂ, ಪರಿಹಾರಾರ್ಥವು. ತಾವು ಅಕ್ಷರಸ್ವಭಾವ (ವಿದ್ಯಾನಿಧಿ)ದವರಾಗಿದ್ದರೂ ಲಿಪಿ (ಅಕ್ಷರ) ಇಲ್ಲದವರೆಂಬುದಾಗಿ ವಿರುದ್ಧಾರ್ಥ ವನ್ನು ತೋರಿಸುತ್ತದೆ. ತಾವು ಸರ್ವವಿದ್ಯೆಗಳ ಮೂಲಸ್ವರೂಪರು (ಪರಮಾತ್ಮ ಸ್ವರೂಪರು) ಅನಂತಜ್ಞಾನ ಸುಖಸ್ವರೂಪರು. ಅಲಿಪಿಃ ಅಂದರೆ, ಅಕ್ಷರ ರೂಪವಾದ ವಾಣಿಯಲ್ಲದ ದಿವ್ಯಧ್ವನಿಯುಳ್ಳವರು. ಮತ್ತು ಅಲಿಪಿಃ ಅಂದರೆ, ಕರ್ಮಲೇಪವಿಲ್ಲದವರು. ಹಣೆಯುಬರಹವಿಲ್ಲದವರು (ಪುನಃ ಜನ್ಮವಿಲ್ಲದವರು) ತಾವು ಅಜ್ಞಾನಿಯಾಗಿದ್ದರೂ ಜ್ಞಾನವುಳ್ಳವರು ಅಂದರೆ, ವಿರೋಧವಾಗಿ ತೋರುತ್ತಿದೆ. ಘಾತಿಕರ್ಮಕ್ಷಯವನ್ನು ಹೊಂದಿರುವುದರಿಂದ ಇಂದ್ರಿಯ ಮೂಲಕ ಉಂಟಾಗುವ ಲೋಕಪ್ರಸಿದ್ಧವಾದ ಸಂಸಾರ ಸಂಬಂಧಿಯಾದ ಜ್ಞಾನದಲ್ಲದೆ ಒಂದೇಕಾಲದಲ್ಲಿ ಸಮಸ್ತ ಲೋಕಾಲೋಕವನ್ನೂ ನೋಡುವ ಪಂಚಮಜ್ಞಾನವೆಂಬ ಕೇವಲಜ್ಞಾನವುಳ್ಳವರೆಂದು ಪರಿಹಾರಾರ್ಥವು. ಇಂದ್ರಿಯದಿಂದ ಹುಟ್ಟುವ ಜ್ಞಾನವು ಮಿತವಾದದ್ದನ್ನು ತಿಳಿಯುವುದು ಈ ಕೇವಲಜ್ಞಾನವಾದರೋ ಅಪರಿಮಿತಪ್ರಪಂಚವನ್ನು ಒಂದೇ ಕಾಲದಲ್ಲಿ ತಿಳಿಯುವಂತಹುದು. ಆದುದರಿಂದ ತಮ್ಮ ಮಹಿಮೆಯು ಬಹಳ ವಿಚಿತ್ರ ವೆಂದು ಭಾವವು.

ಪ್ರಾಗ್ಭಾರಸಂಭೃತನಭಾಂಸಿರಜಾಂಸಿರೋಷಾ
ದುತ್ಥಾಪಿತಾನಿಕಮಠೇನಶಠೇನಯಾನಿ ।
ಛಾಯಾಪಿತೈಸ್ತವನನಾಥಹತಾಹತಾಶೋ
ಗ್ರಸ್ತಸ್ತ್ವಮೀಭಿರಯಮೇವಪರಂದುರಾತ್ಮಾ ॥ ೩೧ ॥

೩೧. ತಾ॥ ಓ ವೀತರಾಗಸ್ವರೂಪನೇ ! ತಮ್ಮ ವೈರಿಯಾದ ಕಮಠ ನೆಂಬ ದೈತ್ಯನು ತಾವು ಆತ್ಮಧ್ಯಾನದಲ್ಲಿರುವಾಗ ರೋಷದಿಂದ ಆಕಾಶ ಪ್ರದೇಶವನ್ನು ಆಕ್ರಮಿಸಿಕೊಳ್ಳುವಷ್ಟು ಧೂಳುಗಳನ್ನು ಎಳಿಸಿ ಘೋರೋಪ ಸರ್ಗವನ್ನು ಮಾಡಿದನು. ಆ ಕವಚಿಕೊಂಡ ಧೂಳುಗಳು ತಮ್ಮ ನೆರಳನ್ನೂ ಕೂಡ ಆಕ್ರಮಿಸಿಕೊಳ್ಳಲಿಲ್ಲ. ಆ ಮೂಢಾತ್ಮನಾದ ಕಮಠನೇ ಆ ಧೂಳು ಗಳಿಂದ ಆಕ್ರಮಿಸಲ್ಪಟ್ಟನು. ಅವನ ಕೋರಿಕೆಯು ನೆರವೇರದೆ ತನ್ನಿಂದ ಎಳಿಸಲ್ಪಟ್ಟ ಧೂಳುಗಳಿಂದ ತಾನೇ ಮುಚ್ಚಲ್ಪಟ್ಟನು. ಇಲ್ಲಿ ರಜಸ್ ಅಂದರೆ ಪಾಪವೆಂದೂ ಅರ್ಥವಾಗುತ್ತದೆ. ಮಹಾಮುನಿಗಳಾದ ತಮಗೆ ಪೂರ್ವಭವವೈರಿಯಾದ ಆ ದೈತ್ಯನು ಘೋರೋಪಸರ್ಗವನ್ನು ಮಾಡಿ ತಾನೇ ರಜಸ್ಸಿನಿಂದ ಆಕ್ರಮಿಸಲ್ಪಟ್ಟನು. ಅಂದರೆ ಮಹಾ ಪಾಪಿಯಾದನೆಂದಭಿ ಪ್ರಾಯವು. ಸತ್ಪುರುಷರಿಗೆ ಉಪದ್ರವವನ್ನು ಕೊಡುವವನು ಮಹಾ ವಿಪತ್ತನ್ನು ಹೊಂದುವನೇ ಹೊರತು ಸತ್ಪುರುಷರಿಗೆ ಯಾವ ಹಾನಿಯನ್ನೂ ಮಾಡಲಾರ ನೆಂದು ಮುಖ್ಯಾಭಿಪ್ರಾಯವು.

ಯದ್ಗರ್ಜದೂರ್ಜಿತಘನೌಘಮದಭ್ರಭೀಮ
ಭ್ರಶ್ಯತ್ತಡಿನ್ಮುಸಲಮಾಂಸಲಘೋರಧಾರಂ ।
ದೈತ್ಯೇನಮುಕ್ತಮಥದುಸ್ತರವಾರಿದಧ್ರೇ
ತೇನೈವತಸ್ಯಜಿನದುಸ್ತರವಾರಿಕೃತ್ಯಂ ॥ ೩೨ ॥

೩೨. ತಾ॥ ಓ ಜಿನನಾಥರೇ ! ಯಾವ ಕಮಠನೆಂಬ ದೈತ್ಯನು ತಮ್ಮ ತಪಸ್ಸನ್ನು ಕೆಡಿಸುವುದಕ್ಕೋಸ್ಕರ ಮಾಯೆಯಿಂದ ಗುಡುಗುಮಿಂಚುಗಳಿಂದ ಭಯಂಕರವಾಗಿ ಒನಕೆಯಷ್ಟು ದಪ್ಪವಾದ ಧಾರೆಯುಳ್ಳ ಮಳೆಯನ್ನು ಸುರಿಸಿ, ದಾಟುವದಕ್ಕಾಗದ ಪ್ರವಾಹವನ್ನುಂಟುಮಾಡಿದನೋ ಅದು ಅವನಿಗೇ ಕತ್ತಿಯ ಪೆಟ್ಟಿನಂತಾಯಿತು. ಮಹಾಮಹಿಮೆಯುಳ್ಳ ತಮಗೆ ಘೋರೋಪಸರ್ಗ

ಮಾಡಿದ ಕಮಠನು ಆ ಘೋರ ದುಃಖವನ್ನನುಭವಿಸಿದನೇ ಹೊರತು ತಮ್ಮ ತಪೋಭಂಗವಾಗಲೇ ಇಲ್ಲ. ಆ ಮಹೋಪಸರ್ಗವನ್ನು ಸಹಿಸಿದುದರಿಂದ ಕೇವಲಜ್ಞಾನೋದಯವಾಯಿತೆಂದಭಿಪ್ರಾಯವು. ಯಾರು ಮಹಾಮುನಿಗಳಿಗೆ ಉಪಸರ್ಗವನ್ನು ಮಾಡುವರೋ ಅಂತಹವರಿಗೆ ಇಹಪರ ಲೋಕಗಳಲ್ಲಿ ದುಃಖವು ತಪ್ಪುವುದಿಲ್ಲ. ಮತ್ತು ಅಂತಹಾ ಘೋರೋಪಸರ್ಗದಿಂದಲೂ ಕ್ರೋಧಕಷಾಯವನ್ನು ಹೊಂದದ ತಮ್ಮ ದಿವ್ಯಪರಿಣಾಮಶುದ್ಧಿಯು ತಮ್ಮಂತಹ ಧೀರರಿಗೆ ಸಾಧ್ಯವೇ ಹೊರತು ಮತ್ತಾರಿಗೂ ಹುಟ್ಟಲಾರದೆಂದು ಭಾವವು.

ಧ್ವಸ್ತೋರ್ಧ್ವಕೇಶವಿಕೃತಾಕೃತಿಮರ್ತ್ಯಮುಂಡ
ಪ್ರಾಲಂಬಭೃದ್ಭಯದವಕ್ತ್ರವಿನಿರ್ಯದಗ್ನಿಃ ।
ಪ್ರೇತವ್ರಜಃಪ್ರತಿಭವಂತಮಪೀರಿತೋಯಃ
ಸೋಽಸ್ಯಾಭವತ್ಪ್ರತಿಭವಂಭವದುಃಖಹೇತುಃ ॥ ೩೩ ॥

೩೩. ತಾ॥ ಓ ಶ್ರೀ ಪಾರ್ಶ್ವನಾಥಸ್ವಾಮಿಯೇ ! ಯಾವ ವೈರಿಯಾದ ಕಮಠನು ತಮ್ಮ ಸಮಾಧಿಯನ್ನು ಭಂಗಪಡಿಸುವುದಕ್ಕೋಸ್ಕರ ನೆಟ್ಟನೆ ನಿಂತಿರುವ ಕೆದರಿದ ತಲೆಕೂದಲುಗಳುಳ್ಳದ್ದಾಗಿಯೂ, ವಿಕಾರವಾದ ಭಯಂಕರವಾದ ಆಕಾರವುಳ್ಳದ್ದಾಗಿಯೂ ಮನುಷ್ಯರ ತಲೆಬುರುಡೆಗಳ ಸರವನ್ನು ಹಾಕಿಕೊಂಡು ಭಯಂಕರವಾದ ಮುಖದಿಂದ ಹೊರಡುತ್ತಿರುವ ಬೆಂಕಿಯ ಜ್ವಾಲೆಯುಳ್ಳದ್ದಾಗಿಯೂ, ಇರುವ ಭೂತಪಿಶಾಚಾದಿಗಳ ಸಮೂಹವನ್ನು ಕಳುಹಿಸಿದನೋ ಆ ಭೂತಪಿಶಾಚಾದಿ ಸಮೂಹವು ಆ ಕಮಠನಿಗೇ ಪ್ರತಿಜನ್ಮಗಳಲ್ಲಿಯೂ ದುಃಖಗಳನ್ನುಂಟುಮಾಡುವುದಕ್ಕೆ ಕಾರಣವಾಯಿತೇ ಹೊರತು, ತಮ್ಮ ಸಮಾಧಿ(ಯೋಗ)ಗೆ ಭಂಗವನ್ನು ಮಾಡಲು ಸಮರ್ಥವಾಗಲಿಲ್ಲ. ತಮ್ಮ ಮಹಾತ್ಮ್ಯವು ಮಾತಿಗೂ ಮನಸ್ಸಿಗೂ ಅಗೋಚರವೆಂದು ಭಾವವು.

ಧನ್ಯಾಸ್ತಏವಭುವನಾಧಿಪಯೇತ್ರಿಸಂಧ್ಯ
ಮಾರಾಧಯಂತಿವಿಧಿವದ್ವಿಧುತಾನ್ಯಕೃತ್ಯಾಃ ।
ಭಕ್ತ್ಯೋಲ್ಲಸತ್ಪುಲಕಪಕ್ಷ್ಮಲದೇಹದೇಶಾಃ
ಪಾದದ್ವಯಂತವವಿಭೋಭುವಿಜನ್ಮಭಾಜಃ ॥ ೩೪ ॥

೩೪. ತಾ॥ ಓ ಲೋಕಾಧಿಪತಿಯಾದ ಸ್ವಾಮಿಯೇ ! ಯಾವ ಭವ್ಯಾತ್ಮರು ತಮ್ಮಲ್ಲಿ ಪರಮಭಕ್ತಿಯುಳ್ಳವರಾಗಿ, ಬೇರೆ ಸಮಸ್ತ ಕೆಲಸಗಳನ್ನು ಬಿಟ್ಟು ಮೂರು ಸಂಧ್ಯಾಕಾಲಗಳಲ್ಲಿಯೂ, ಭಕ್ತಿಯಿಂದ ಮೈಕೂದಲೆದ್ದು ಆನಂದಪೂರಿತವಾದ ದೇಹವುಳ್ಳವರಾಗಿ ಶಾಸ್ತ್ರೋಕ್ತವಾಗಿ, ತಮ್ಮ ಪಾದಾರವಿಂದಗಳನ್ನು ಪೂಜಿಸುತ್ತಾರೆಯೋ ಅಂತಹವರ ಜನ್ಮವೇ ಸಾರ್ಥಕ. ಅವರೇ ಧನ್ಯರು. ತಮ್ಮನ್ನು ಮರೆತು ಸಂಸಾರ ಸುಖಗಳನ್ನು ಭೋಗಿಸುವ ಜನಗಳ ಜನ್ಮವು ನಿಷ್ಫಲವೆಂದರ್ಥವು.

ಅಸ್ಮಿನ್ನಪಾರಭವವಾರಿನಿಧೌಮುನೀಶ
ಮನ್ಯೇನಮೇಶ್ರವಣಗೋಚರತಾಂಗತೋಽಸಿ ।
ಆಕರ್ಣಿತೇತುತವಗೋತ್ರಪವಿತ್ರಮಂತ್ರೇ
ಕಿಂವಾವಿಪದ್ವಿಷಧರೀಸವಿಧಂಸಮೇತಿ ॥ ೩೫ ॥

೩೫. ತಾ॥ ಓ ಕಮಠನಿಂದ ಮಾಡಲ್ಪಟ್ಟ ಘೋರೋಪಸರ್ಗಗಳನ್ನೆಲ್ಲಾ ಸಹಿಸಿ ಆತ್ಮಸಮಾಧಿಯಿಂದ ಕೇವಲಜ್ಞಾನವನ್ನು ಪಡೆದಂತಹ, ಚಿತ್ತದ ಸ್ಥಿರತ್ವವುಳ್ಳ ಮುನೀಶ್ವರರೇ ! ಅಪಾರವಾದ ನರ ಸುರತಿರ್ಯಙ್ನಾರಕಗಳೆಂಬ ನಾಲ್ಕು ಪ್ರಕಾರವಾದ ಜನ್ಮಪರಂಪರೆಗಳೆಂಬ ಈ ಸಂಸಾರ ಸಮುದ್ರದಲ್ಲಿ ಯಾವ ಭವದಲ್ಲಿಯೂ ನೀವು ನನ್ನ ಕಿವಿಗೆ ಗೋಚರವಾಗಲಿಲ್ಲ. (ತಮ್ಮ ಮಹಿಮೆಯನ್ನು ಕೇಳಲೇ ಇಲ್ಲ.) ಇದುವರೆಗೂ ತಮ್ಮ ದಿವ್ಯನಾಮದಿಂದ ಪವಿತ್ರವಾದ ಮಂತ್ರವನ್ನು ನಾನು ಯಾವ ಜನ್ಮದಲ್ಲಾದರೂ ಕೇಳಿದ್ದ ಪಕ್ಷದಲ್ಲಿ ಈ ಜನ್ಮಜರಾಮರಣಸ್ವರೂಪವಾದ ವಿಪತ್ತೆಂಬ ಘೋರ ಸ್ತ್ರೀಸರ್ಪವು ನನ್ನ ಹತ್ತಿರ ಏಕೆ ಬರುತ್ತಿತ್ತು ? ಇದರಿಂದಲೇ ಕಳೆದ ನನ್ನ ಅಪಾರ ಜನ್ಮಗಳಲ್ಲಿ ಯಾವ ಜನ್ಮದಲ್ಲಿಯೂ ತಮ್ಮ ಪವಿತ್ರಚರಿತ್ರ ಮತ್ತು ತಮ್ಮ ಸಮಾಧಿಸಾಧನೆಮಾಡಿದ ಮಾಹಾತ್ಮ್ಯಗಳನ್ನು ಕೇಳಲಿಲ್ಲವೆಂದು ನಿಶ್ಚಯಿಸುತ್ತೇನೆ. ಹಾಗೆ ನಾನು ಕೇಳಿದ್ದರೆ ನನಗೆ ಈ ಜನ್ಮಾದಿ ಭವದುಃಖವು ಉಂಟಾಗುತ್ತಿರಲಿಲ್ಲ. ಈಗ ನಾನು ಈ ಭವದುಃಖಗಳನ್ನನುಭವಿಸುವುದೇ ನಾನು ಎಂದೂ ತಮ್ಮನ್ನು ಕೇಳಲಿಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ ಎಂದರ್ಥವು.

ಜನ್ಮಾಂತರೇಪಿತವಪಾದಯುಗಂನದೇವ
ಮನ್ಯೇಮಯಾಮಹಿತಮೀಹಿತದಾನದಕ್ಷಂ ।
ತೇನೇಹಜನ್ಮನಿಮುನೀಶಪರಾಭವಾನಾಂ
ಜಾತೋನಿಕೇತನಮಹಂಮಥಿತಾಶಯಾನಾಂ ॥ ೩೬ ॥

೩೬. ತಾ॥ ಓ ದೇವನೇ! ನಾನು ಜನ್ಮಾಂತರದಲ್ಲಿಯೂ ಸಮಸ್ತ ಇಷ್ಟಾರ್ಥಗಳನ್ನು ಕೊಡುವುದರಲ್ಲಿ ಸಮರ್ಥವಾದ ತಮ್ಮ ಪಾದಗಳೆರಡನ್ನು ಪೂಜಿಸಲಿಲ್ಲವೆಂದು ತಿಳಿಯುತ್ತೇನೆ. ಓ ಮುನಿಶ್ರೇಷ್ಠರೇ! ಆದುದರಿಂದಲೇ ನಾನು ಈ ಜನ್ಮದಲ್ಲಿ ನಷ್ಟವಾದ ಮನೋರಥಗಳುಳ್ಳವನಾಗಿ ಅನೇಕಪ್ರಕಾರವಾದ ದುಃಖಾನುಭವ ರೂಪವಾದ ಅಪಮಾನಗಳಿಗೆ ವಾಸಸ್ಥಾನವಾದ ಮನೆಯಂತೆ ಆದೆನು. ಪೂರ್ವಜನ್ಮದಲ್ಲಿ ತಮ್ಮ ಪಾದಪೂಜೆಯನ್ನು ನಾನು ಮಾಡಿದ್ದಿದ್ದರೆ ಈ ನಾನಾ ವಿಧವಾದ ಸಂಸಾರದುಃಖಗಳಿಗೆ ಪಾತ್ರನಾಗುತ್ತಿರಲಿಲ್ಲವೆಂದಭಿಪ್ರಾಯವು.

ನೂನಂನಮೋಹತಿಮಿರಾವೃತಲೋಚನೇನ
ಪೂರ್ವಂವಿಭೋಸಕೃದಪಿಪ್ರವಿಲೋಕಿತೋಸಿ ।
ಮರ್ಮಾವಿಧೋವಿಧುರಯಂತಿಹಿಮಾಮನರ್ಥಾಃ
ಪ್ರೋದ್ಯತ್ಪ್ರಬಂಧಗತಯಃಕಥಮನ್ಯಥೈತೆ ॥ ೩೭ ॥

೩೭. ತಾ॥ ಓ ಪ್ರಭುವೇ! ಮೋಹವೆಂಬ ನೇತ್ರರೋಗದಿಂದ ಆವರಿಸಲ್ಪಟ್ಟ ನಾನು ಪೂರ್ವದಲ್ಲಿ ಒಂದಾವರ್ತಿಯಾದರೂ ಚೆನ್ನಾಗಿ ತಮ್ಮನ್ನು ದರ್ಶನ ಮಾಡಲಿಲ್ಲ, ಇದು ನಿಶ್ಚಯ. ಅಂದರೆ ಮೋಹನೀಯಕರ್ಮದ ಬಲದಿಂದ ಶರೀರ, ಪತ್ನೀ ಪುತ್ರಾದಿ ಬಂಧುವರ್ಗ ಧನಕನಕ ವಸ್ತುವಾಹನ ಗೃಹ ಕ್ಷೇತ್ರ ಮುಂತಾದ ಹೊರಗಿನ ವಿಷಯಗಳ ವ್ಯಾಮೋಹವೆಂಬ ಪಾಶದಿಂದ ಕಟ್ಟಲ್ಪಟ್ಟ ಮನಸ್ಸುಳ್ಳವನಾಗಿ, ಒಂದಾವರ್ತಿಯಾದರೂ ತಮ್ಮ ಪರಿಶುದ್ಧವಾದ ದಿವ್ಯರೂಪವನ್ನು ಭಾವಿಸಲಿಲ್ಲವೆಂಬರ್ಥವು. ಹಾಗೆ ನಾನು ಜನ್ಮಾಂತರದಲ್ಲಿ ತಮ್ಮನ್ನು ಒಂದಾವರ್ತಿಯಾದರೂ ಸ್ಮರಿಸಿದ್ದರೆ ಈ ಜನ್ಮಜರಾಮರಣ ಆದಿವ್ಯಾಧ್ಯಾದಿ ಮರ್ಮಭೇದಕಗಳಾದ ಅನರ್ಥಗಳು (ದುಃಖಗಳು) ಹೇಗೆ

ನನ್ನನ್ನು ಪೀಡಿಸಲು ಸಾಧ್ಯ? ಈಗ ನಾನು ಅನುಭವಿಸುವ ಸಂಸಾರಸಂಬಂಧಿಯಾದ ಅನರ್ಥರೂಪವಾದ ಈ ಕ್ಲೇಶಗಳನ್ನು ಆಲೋಚಿಸಿ ನೋಡಿದರೆ ಜನ್ಮಾಂತರದಲ್ಲಿ ಎಂದೂ ನಿಮ್ಮನ್ನು ನಾನು ಸ್ಮರಿಸಿದವನಲ್ಲವೆಂಬುದು ಸ್ಪಷ್ಟವಾಗುತ್ತದೆಂದಭಿಪ್ರಾಯವು.

ಆಕರ್ಣಿತೋಪಿಮಹಿತೋಪಿನಿರೀಕ್ಷಿತೋಪಿ
ನೂನಂನಚೇತಸಿಮಯಾವಿಧೃತೋಸಿಭಕ್ತ್ಯಾ ।
ಜಾತೋಸ್ಮಿತೇನಜನಬಾಂಧವದುಃಖಪಾತ್ರಂ
ಯಸ್ಮಾತ್ ಕ್ರಿಯಾಃಪ್ರತಿಫಲಂತಿನಭಾವಶೂನ್ಯಾಃ ॥ ೩೮ ॥

೩೮. ತಾ॥ ಓ ದುಃಖಿ ಜನಗಳಬಂಧುವಾದ ಜಿನಪತಿಯೇ! ನನ್ನಿಂದ ತಾವು ಕೇಳಲ್ಪಟ್ಟಿದ್ದರೂ, ಪೂಜಿಸಲ್ಪಟ್ಟಿದ್ದರೂ, ನೋಡಲ್ಪಟ್ಟಿದ್ದರೂ, ಭಕ್ತಿಯಿಂದ ಮನಸ್ಸಿನಲ್ಲಿ ಧರಿಸಲಿಲ್ಲ. ಅಂದರೆ ತಮ್ಮಲ್ಲಿ ನಾನು ಭಕ್ತಿಪುರಸ್ಸರವಾಗಿ ಮನಸ್ಸನ್ನಿಡಲಿಲ್ಲವೆಂದರ್ಥವು. ಆದುದರಿಂದಲೇ ಈ ಪ್ರಕಾರ ನಾನಾ ದುಃಖಗಳಿಗೆ ಗುರಿಯಾದೆನು. ಹೇಗೆಂದರೆ ಮನಃಪೂರ್ವಕವಲ್ಲದ ಕ್ರಿಯೆಗಳು ಯಾವುದೂ ಲೋಕದಲ್ಲಿ ಪ್ರತಿಫಲವನ್ನು ಕೊಡುವುದಿಲ್ಲ. ಈಗ ನಾನು ಜನ್ಮವೇ ಮೊದಲಾದ ದುಃಖಗಳನ್ನನುಭವಿಸುವುದನ್ನು ಭಾವಿಸಿನೋಡಲು ನಾನು ಜನ್ಮಾಂತರದಲ್ಲಿಯೂ ತಮ್ಮನ್ನು ಮನಸ್ಸಿನಲ್ಲಿ ಧರಿಸಿಲ್ಲವೆಂಬುದು ಸ್ಪಷ್ಟವಾಗಿ ತೋರುತ್ತದೆಂದಭಿಪ್ರಾಯವು.

ತ್ವಂನಾಥದುಃಖಿಜನವತ್ಸಲಹೇಶರಣ್ಯ
ಕಾರುಣ್ಯಪುಣ್ಯವಸತೇವಶಿನಾಂವರೇಣ್ಯ ।
ಭಕ್ತ್ಯಾನತೇಮಯಿಮಹೇಶದಯಾಂವಿಧಾಯ
ದುಃಖಾಂಕುರೋದ್ದಳನತತ್ಪರಂತಾವಿಧೇಹಿ ॥ ೩೯ ॥

೩೯. ತಾ॥ ಓ ರಕ್ಷಕನೆ! ದುಃಖಾಕ್ರಾಂತರಾದ ಜನರಬಂಧುವೇ! ಕರ್ಮಬಂಧವನ್ನು ಬಿಡಿಸುವುದರಲ್ಲಿ ಸಮರ್ಥರಾದ ಸ್ವಾಮಿಯೆ! ಪ್ರಾಣಿದಯೆಗೂ ಪುಣ್ಯಕ್ಕೂ ವಾಸಸ್ಥಾನಭೂತರಾದ, ಮತ್ತು ಜಿತೇಂದ್ರಿಯರಿಗೆಲ್ಲಾ ಶ್ರೇಷ್ಠರಾದ ಸ್ವಾಮಿಯೇ! ಭಕ್ತಿಯಿಂದ ನಮಸ್ಕರಿಸಿರುವ ನನ್ನಲ್ಲಿ ದಯೆಯನ್ನಿಟ್ಟು, ಓ ಮಹಾಪ್ರಭುವೆ! ಈ ಸಂಸಾರ ದುಃಖಕ್ಕೆ ಕಾರಣವಾದ

ಕರ್ಮವೆಂಬ ಬೀಜವನ್ನು ನಾಶಮಾಡುವುದರಲ್ಲಿ ಆತ್ಮಾಸಕ್ತಿಯನ್ನು ನನಗೆ ಉಂಟುಮಾಡು.

ನಿಸ್ಸಂಖ್ಯಸಾರಶರಣಂಶರಣಂಶರಣ್ಯ
ಮಾಸಾದ್ಯಸಾದಿತರಿಪುಪ್ರಥಿತಾವದಾನಂ ।
ತ್ವತ್ಪಾದಪಙ್ಕಜಮಪಿಪ್ರಣಿಧಾನವಂಧ್ಯೋ
ವಂಧ್ಯೋಽಸ್ಮಿತದ್ಭುವನಪಾವನಹಾಹತೋಽಸ್ಮಿ ॥ ೪೦ ॥

೪೦. ತಾ॥ ಓ ಜಿನರಾಜನೇ ! ಅನಂತವಾದ ಸಾರಗುಣಗಳಿಗೆ ವಾಸಸ್ಥಾನವಾದಂತಹ ಲೆಖ್ಖಕ್ಕೆ ಒಳಪಡದ ನರೇಂದ್ರನಾಗೇಂದ್ರಾದಿ ಶ್ರೇಷ್ಠರಾದ ಭವ್ಯಾತ್ಮರಿಗೆ ಮನೆಯಂತೆ ರಕ್ಷಕವಾಗಿರುವ ಸಮಸ್ತಾತ್ಮಗಳನ್ನು ರಕ್ಷಿಸುವ ಸಾಮರ್ಥ್ಯವುಳ್ಳ ಮತ್ತು ಪ್ರಖ್ಯಾತವಾದ ಮೋಹನೀಯಾದಿ ಕರ್ಮಗಳೆಂಬ ಆತ್ಮಶತ್ರುಗಳ ಶೌರ್ಯಕೃತ್ಯವನ್ನು ನಾಶಮಾಡಿದಂತಹ ತಮ್ಮ ಪಾದಕಮಲವನ್ನು ಹೊಂದಿ ಧ್ಯಾನಮಾಡದ ನಾನು ನಿಷ್ಫಲನಾದೆನು. ಅನೇಕಜನ್ಮಗಳನ್ನು ವ್ಯರ್ಥಪಡಿಸಿಕೊಂಡೆನು. ಆದುದರಿಂದಲೇ ಗೊಡ್ಡುಮರದಂತೆ ಫಲವಿಲ್ಲದವನಾದೆನು. ಓ ಲೋಕವನ್ನು ಪರಿಶುದ್ಧಿಪಡಿಸುವ ಸ್ವಾಮಿಯೇ ! ಅಯ್ಯೋ ಕೆಟ್ಟೆನು ಕರ್ಮ ಶತ್ರುಗಳಿಂದ ಕೊಲ್ಲಲ್ಪಟ್ಟೆನು.

ದೇವೇಂದ್ರವಂದ್ಯವಿದಿತಾಖಿಲವಸ್ತುಸಾರ
ಸಂಸಾರತಾರಕವಿಭೋಭುವನಾಧಿನಾಥ ।
ತ್ರಾಯಸ್ವದೇವಕರುಣಾಹ್ರದಮಾಂಪುನೀಹಿ
ಸೀದಂತಮದ್ಯಭಯದವ್ಯಸನಾಂಬುರಾಶೇಃ ॥ ೪೧ ॥

೪೧. ತಾ॥ ಓ ದೇವೇಂದ್ರನಿಂದ ನಮಸ್ಕರಿಸಲ್ಪಡುವ ಸ್ವಾಮಿಯೇ ! ಸಮಸ್ತತತ್ತ್ವಗಳಲ್ಲಿಯೂ ಸಾರತತ್ತ್ವವೆನಿಸಿದ ಪರಮಾತ್ಮತತ್ತ್ವವನ್ನು ತಿಳಿದಂತಹ ಸ್ವಾಮಿಯೇ ! ಸಂಸಾರಸಮುದ್ರದಿಂದ ದಾಟಿಸುವಂತಹ ಸಮರ್ಥ ಪ್ರಭುವೇ ! ಸರ್ವಲೋಕರಕ್ಷಕರಾದಂತಹ ಸ್ವಾಮಿಯೆ ! ದಯೆಗೆ ಮಡುವಿನಂತೆ ಆಧಾರಭೂತರಾದಂತಹ ದೇವನೆ ! ಜನ್ಮಜರಾಮರಣಾದಿ ನಾನಾವಿಧ ದುಃಖಗಳಿಂದ ಬಾಧೆಪಡುತ್ತಿರುವ ಈ ನನ್ನನ್ನು ಭಯವನ್ನುಂಟುಮಾಡುತ್ತಿರುವ ವ್ಯಸನವೆಂಬ ಸಮುದ್ರದಿಂದ ದಾಟಿಸಿ ಕಾಪಾಡು (ಪರಿಶುದ್ಧನನ್ನಾಗಿ ಮಾಡು). ಅಂದರೆ ಮುಕ್ತಿಯೋಗ್ಯನನ್ನಾಗಿ ಮಾಡಬೇಕೆಂದರ್ಥವು. ಈ ಪ್ರಕಾರ ಆಚಾರ್ಯರು ಜನ್ಮನಿವೃತ್ತಿಯನ್ನು ಪ್ರಾರ್ಥಿಸುತ್ತಾರೆ.

ಯದ್ಯಸ್ತಿನಾಥಭವದಂಘ್ರಿಸರೋರುಹಾಣಾಂ
ಭಕ್ತೇಃಫಲಂಕಿಮಪಿಸಂತತಸಂಚಿತಾಯಾಃ ।
ತನ್ಮೇತ್ವದೇಕಶರಣಸ್ಯಶರಣ್ಯಭೂಯಾಃ
ಸ್ವಾಮೀತ್ವಮೇವಭುವನೇತ್ರಭವಾಂತರೇಪಿ ॥ ೪೨ ॥

೪೨. ತಾ॥ ಓ ರಕ್ಷಕರಾದ ಶ್ರೀಪಾರ್ಶ್ವತೀರ್ಥಂಕರರೇ ! ತಮ್ಮ ಪಾದಾರವಿಂದಗಳಲ್ಲಿ ಸರ್ವದಾ ಮಾಡಲ್ಪಟ್ಟ ಭಕ್ತಿಗೇನಾದರೂ ಫಲವಿರುವುದೇ ಆದರೆ ತಾವೇ ರಕ್ಷಕರೆಂದು ನಂಬಿರುವ ನನ್ನನ್ನು ತಾವೇ ಪರಿಪಾಲಿಸಬೇಕಲ್ಲದೆ ಮತ್ಯಾರುಸಮರ್ಥರಾದಾರು ? ಓ ರಕ್ಷಣ ಸಾಮರ್ಥ್ಯವುಳ್ಳ ಸ್ವಾಮಿಯೇ ! ನನಗೆ ಈ ಲೋಕದಲ್ಲಿಯೂ ಜನ್ಮಾಂತರದಲ್ಲಿಯೂ ತಾವೇ ನನ್ನನ್ನು ಈ ಭವಸಮುದ್ರದಿಂದ ಕಾಪಾಡುವಸ್ವಾಮಿಯು. ನಾನು ಇನ್ನು ಎಷ್ಟು ಜನ್ಮಗಳನ್ನೆತ್ತಿದರೂ ಮೋಕ್ಷಕ್ಕೆ ಸಾಧಕವಾದ ತಮ್ಮ ಪಾದಾರವಿಂದದಲ್ಲಿ ಭಕ್ತಿಯು ನನಗೆ ಸ್ಥಿರವಾಗಿರಬೇಕೆಂದು ಸ್ತೋತ್ರಕರ್ತೃವಾದ ಆಚಾರ್ಯರ ಪ್ರಾರ್ಥನಾ ಭಾವವು.

ಇತ್ಥಂಸಮಾಹಿತಧಿಯೋವಿಧಿವಜ್ಜಿನೇಂದ್ರ
ಸಾಂದ್ರೋಲ್ಲಸತ್ಪುಲಕಕಂಚುಕಿತಾಂಗಭಾಗಾಃ ।
ತ್ವದ್ಬಿಂಬನಿರ್ಮಲಮುಖಾಂಬುಜಬದ್ಧಲಕ್ಷ್ಯಾ
ಯೇಸಂಸ್ತವಂತವವಿಭೋರಚಯಂತಿಭವ್ಯಾಃ ॥ ೪೩ ॥

ಜನನಯನಕುಮುದಚಂದ್ರ, ಪ್ರಭಾಸ್ವರಾಃ
ಸ್ವರ್ಗಸಂಪದೋಭುಕ್ತ್ವಾ । ತೇವಿಗಲಿತಮಲನಿಚ ।
ಯಾ, ಅಚಿರಾನ್ಮೋಕ್ಷಂಪ್ರಪದ್ಯಂತೆ (ಯುಗ್ಮಂ) ॥ ೪೪ ॥

೪೩, ೪೪. ತಾ॥ ಓ ಜಿನೇಂದ್ರರೆ ! ಯಾವಭವ್ಯಾತ್ಮರು, ಹೀಗೆ ಯೋಗವಿಧಿ ಪ್ರಕಾರವಾಗಿ, ಏಕಾಗ್ರಮನಸ್ಸಿನಿಂದ ರೋಮಾಂಚನವುಳ್ಳವರಾಗಿ,

ತಮ್ಮ ಪ್ರತಿಮೆಯ ನಿರ್ಮಲವಾದ ಮುಖವೆಂಬ ಕಮಲದಲ್ಲಿ ದೃಷ್ಟಿ (ಲಕ್ಷ್ಯ) ಯುಳ್ಳವರಾಗಿ, ತಮ್ಮ ಸ್ತೋತ್ರವನ್ನು ಮಾಡುತ್ತಾರೋ, ಜನಗಳ ಕಣ್ಣುಗಳೆಂಬ ಕುಮುದ (ಬಿಳೀತಾವರೆ)ಗಳನ್ನು ಅರಳಿಸುವ ಚಂದ್ರನಾದಂತಹ ಸ್ವಾಮಿಯೆ! ಅಂತಹವರು, ಮಹಾತೇಜಸ್ವಿಗಳಾಗಿ ಸ್ವರ್ಗಸಂಪತ್ತು (ಸುಖ) ಗಳನ್ನನುಭವಿಸಿ, ಶೀಘ್ರವಾಗಿಯೇ ಸಮಸ್ತಪಾಪಗಳಿಂದ ಬಿಡುಗಡೆ ಹೊಂದಿ ಮೋಕ್ಷಪದವಿಯನ್ನು ಪಡೆಯುತ್ತಾರೆ.

॥ ಇತಿ ಶ್ರೀಸಿದ್ಧಸೇನದಿವಾಕರಪ್ರಣೀತಂ ॥

॥ ಕಲ್ಯಾಣಮಂದಿರಸ್ತೋತ್ರಂ ॥

॥ ಶ್ರೀ ವಾದಿರಾಜಪ್ರಣೀತಂ ॥

ಏಕೀಭಾವಸ್ತೋತ್ರಂ

ಏಕೀಭಾವಂಗತಇವಮಯಾಯಸ್ಸ್ವಯಂಕರ್ಮಬಂಧೋ
ಘೋರಂದುಃಖಂಭವಭವಗತೋದುರ್ನಿವಾರಃಕರೋತಿ।
ತಸ್ಯಾಪ್ಯಸ್ಯತ್ವಯಿಜಿನರವೇಭಕ್ತಿರುನ್ಮುಕ್ತಯೇಚೇ
ಜ್ಜೇತುಂಶಕ್ಯೋಭವತಿನತಯಾಕೋಪರಸ್ತಾಪಹೇತುಃ ॥೧॥

೧. ತಾ॥ ಓ ಜಿನ ಸೂರ್ಯನೆ! ಯಾವ ಕರ್ಮಬಂಧವು ತಾನಾಗಿಯೇ ನನ್ನೊಡನೆ ಹಾಲುನೀರು ಒಂದಾಗಿಸೇರಿ ಬೆರತಂತೆ ಆತ್ಮ ವಸ್ತು ಬೇರೆ ಕರ್ಮ ಬೇರೆ ಎಂದು ಕಾಣುವುದಕ್ಕೆ ಅಶಕ್ಯವಾಗಿದ್ದುಕೊಂಡು ಭವಭವದಲ್ಲಿಯೂ ಘೋರದುಃಖಗಳನ್ನುಂಟುಮಾಡುತ್ತಾ ತಡೆದು ನಿಲ್ಲಿಸುವುದಕ್ಕೆಶಕ್ಯವಾದದ್ದೋ, ಅಂತಹ ಕರ್ಮಬಂಧವುಳ್ಳವನಿಗೂ, ತಮ್ಮಲ್ಲಿ ಭಕ್ತಿಯುಂಟಾದರೆ ಆ ಭಕ್ತಿಯೇ ಮೋಕ್ಷವನ್ನು ಹೊಂದಿಸುತ್ತದೆ. ಎಂದೆಂದಿಗೂ ಬಿಡದೆ ಭವಭವದಲ್ಲಿಯೂ ಮಹಾದುಃಖಗಳನ್ನುಂಟುಮಾಡುತ್ತಿರುವ ಆ ಕರ್ಮ ಬಂಧವನ್ನೂ ಕೂಡ ತಮ್ಮಲ್ಲಿ ಮಾಡಿದ ಭಕ್ತಿಯಿಂದ ಜಯಿಸಬಹುದು. ಹೀಗಿರುವಲ್ಲಿ ಮತ್ಯಾವ ಸಂತಾಪಕರವಾದದ್ದು ಆ ಭಕ್ತಿಯಿಂದ ಜಯಿಸಲಶಕ್ಯವಾದೀತು? ಜಿನಭಕ್ತರಿಗೆ ಯಾವ ದುಃಖಗಳೂ ಸಂಭವಿಸುವುದಿಲ್ಲವೆಂದರ್ಥವು.

ಜ್ಯೋತೀರೂಪಂದುರಿತನಿವಹಧ್ವಾಂತವಿಧ್ವಂಸಹೇತುಂ
ತ್ವಾಮೇವಾಹುರ್ಜಿನವರಚಿರಂತತ್ತ್ವವಿದ್ಯಾಭಿಯುಕ್ತಾಃ।
ಚೇತೋವಾಸೇಭವಸಿಚಮಮಸ್ಫಾರಮುದ್ಭಾಸಮಾನ
ಸ್ತಸ್ಮಿನ್ನಂಹಃಕಥಮಿವತಮೋವಸ್ತುತೋವಸ್ತುಮೀಷ್ಟೇ ॥೨॥

೨. ತಾ॥ ಓ ಜಿನಪರಮೇಶ್ವರರೇ! ಬಹಳಕಾಲ ತತ್ತ್ವಜ್ಞಾನ ಪರಿಶೀಲನ ಮಾಡಿದವರಾದ ಆತ್ಮಾನಾತ್ಮ ತತ್ತ್ವವಿವೇಕಿಗಳಾದ ಜ್ಞಾನಿಗಳು ತಮ್ಮನ್ನೇ ಸಕಲಪಾಪಕರ್ಮಗಳೆಂಬ ಕಾರ್ಗತ್ತಲೆಯನ್ನು ತೊಲಗಿಸುವ ಜ್ಯೋತಿಸ್ಸ್ವರೂಪವಾದ ಪರತತ್ತ್ವವನ್ನಾಗಿ ಹೇಳುತ್ತಾರೆ. ಅಂತಹಾ ಮಹಾಜ್ಯೋತಿಸ್ವಾದ ತಾವು ನನ್ನ ಹೃದಯವೆಂಬ ಮನೆಯಲ್ಲಿ ಬಹಳವಾಗಿ ಪ್ರಕಾಶಿಸುತ್ತಿರಲು, ನನ್ನ ಚಿತ್ತವೆಂಬ ಮನೆಯಲ್ಲಿ ತಮಸ್ಸು (ಕತ್ತಲೆಯು) ಹೇಗೆ ತಾನೆ ವಾಸಮಾಡಲು ಸಾಧ್ಯ? ದೀಪದಂತೆ ತಾವು ಪ್ರಕಾಶಿಸುತ್ತಿರಲು ಕತ್ತಲೆಯಂತಿರುವ ಪಾಪಕರ್ಮವು ಹೇಗೆ ಇರಲುಸಾಧ್ಯ ಎಂದಭಿಪ್ರಾಯವು. ಒಂದು ಮನೆಯಲ್ಲಿ ದೀಪವು ಜಾಜ್ವಲ್ಯಮಾನವಾಗಿ ಉರಿಯುತ್ತಿರಲು ಅಲ್ಲಿ ಕತ್ತಲೆಯು ಆ ದೀಪದಜೊತೆಯಲ್ಲಿ ಹೇಗೆ ಇರುವುದಿಲ್ಲವೋ ಹಾಗೆ ಜ್ಞಾನಮಯ ಜ್ಯೋತಿಸ್ವಾದ ತಮ್ಮ ದಿವ್ಯಸ್ವರೂಪವು ಪ್ರಕಾಶಿಸುತ್ತಿರಲು ಸಕಲಪಾಪಗಳೂ ಧ್ವಂಸವಾಗದಿರುವುದುಂಟೇ ಎಂದಭಿಪ್ರಾಯವು. ವ್ಯವಹಾರನಯ ನಿಶ್ಚಯನಯ ಈ ಎರಡು ನ್ಯಾಯಂಗಳಿಂದ ಜಿನವಾಣಿಯಿಂದ ನಿಶ್ಚಯಿಸಲ್ಪಟ್ಟ ಪರಮಾತ್ಮತತ್ತ್ವವುಳ್ಳವರಾದ ಮಹಾತ್ಮರು ತಮ್ಮನ್ನು ಪರಮಭಕ್ತಿಯಿಂದ ಸರ್ವದಾ ಧ್ಯಾನಿಸುವರಾಗಿ ಸಕಲಕರ್ಮಕ್ಷಯವನ್ನು ಹೊಂದುವರಾದುದರಿಂದ ನನ್ನ ಹೃದಯದಲ್ಲಿ ತಾವು ನೆಲಸಿರಲು ನಾನು ಏತಕ್ಕೆ ಪಾಪಕರ್ಮಗಳಿಂದ ಹೆದರಬೇಕೆಂದು ತಮ್ಮನ್ನು ಹೇಳಿಕೊಳ್ಳುವ ನೆಪದಿಂದ ಆಚಾರ್ಯರು ಹಿತೋಪದೇಶವನ್ನು ಮಾಡುತ್ತಾರೆ.

ಆನಂದಾಶ್ರುಸ್ನಪಿತವದನಂಗದ್ಗದಂಚಾಭಿಜಲ್ಪ
ನ್ಯಶ್ಚಾಯೇತತ್ವಯಿದೃಢಮನಾಃಸ್ತೋತ್ರಮಂತ್ರೈರ್ಭವಂತಂ।
ತಸ್ಯಾಭ್ಯಸ್ತಾದಪಿಚಸುಚಿರಂದೇಹವಲ್ಮೀಕಮಧ್ಯಾ
ನ್ನಿಷ್ಕಾಸ್ಯಂತೇವಿವಿಧವಿಷಮವ್ಯಾಧಯಃಕಾದ್ರವೇಯಾಃ ॥೩॥

೩. ತಾ॥ ಓ ಜಿನರಾಜನೇ! ಯಾವ ತಮ್ಮ ಭಕ್ತನು ಕಣ್ಣುಗಳಿಂದ ಸುರಿಯುತ್ತಿರುವ ಆನಂದಬಾಷ್ಪ (ಕಣ್ಣೀರು)ದಿಂದ ನೆನೆದ ಮುಖವುಳ್ಳವನಾಗಿಯೂ, ಆನಂದದಿಂದ ಕಂಠದಲ್ಲಿ ತಡೆದು ತಡೆದು ಹೊರಡುವ ಅಕ್ಷರೋಚ್ಚಾರಣ ಸ್ವರದೊಡಗೂಡಿದವನಾಗಿಯೂ ನಿಮ್ಮಲ್ಲಿ ದೃಢಮನಸ್ಸುಳ್ಳವನಾಗಿಯೂ ಸ್ತೋತ್ರಮಂತ್ರಗಳಿಂದ ತಮ್ಮನ್ನು ಸ್ತುತಿಸುವವನಾಗಿ ದರ್ಶನವನ್ನು ಮಾಡುತ್ತಾನೋ ಮತ್ತು ಪೂಜಿಸುತ್ತಾನೋ (ಚಾಯ್ಯ, ಪೂಜಾ ದರ್ಶನಯಾಃ) ಅಂತಹ ಭಕ್ತನ ಶರೀರವೆಂಬ ಹುತ್ತದಲ್ಲಿ ಬಹುಕಾಲದಿಂದ ವಾಸಮಾಡಿಕೊಂಡಿದ್ದ ಘೋರವ್ಯಾಧಿಗಳೆಂಬ ಸರ್ಪಗಳು ತಾವೇ ಓಡಿಹೋಗುತ್ತವೆಯಲ್ಲವೆ? ಆದುದರಿಂದ ತಮ್ಮ ಸ್ತೋತ್ರಗಳೆಂಬ ಮಹಾ ಮಂತ್ರಗಳು ಆಧಿವ್ಯಾಧಿ ಮುಂತಾದ ಸಮಸ್ತವಿಪತ್ತುಗಳನ್ನೂ ಪರಿಹರಿಸುವುವೆಂದರ್ಥವು.

ಪ್ರಾಗೇವೇಹತ್ರಿದಿವಭವನಾದೇಷ್ಯತಾಭವ್ಯಪುಣ್ಯಾ
ತ್ಪೃಥ್ವೀಚಕ್ರಂಕನಕಮಯತಾಂದೇವನಿನ್ಯೇತ್ವಯೇದಂ।
ಧ್ಯಾನದ್ವಾರಂಮಮರುಚಿಕರಂಸ್ವಾಂತಗೇಹಂಪ್ರವಿಷ್ಟ
ಸ್ತತ್ಕಿಂಚಿತ್ರಂಜಿನವಪುರಿದಂಯತ್ಸುವರ್ಣೀಕರೋಷಿ ॥೪॥

೪. ತಾ॥ ಓ ಜಿನೇಶ್ವರರೇ! ಭವ್ಯಾತ್ಮರಪುಣ್ಯವಿಶೇಷದ ದೆಸೆಯಿಂದ ತಾವು ಸ್ವರ್ಗದಿಂದ ಭೂಮಿಗೆ ಇಳಿಯುವರಾಗಿ (ಗರ್ಭಾವತರಣ ಕಲ್ಯಾಣ ಕಾಲದಲ್ಲಿ) ಈ ಭೂಮಂಡಲವನ್ನು ದೇವತೆಗಳಿಂದ ಸುರಿಸಲ್ಪಟ್ಟ ಬಂಗಾರದ ಮಳೆಯಿಂದ ಮೊದಲೇ ಬಂಗಾರಮಯವನ್ನಾಗಿ ಮಾಡಿದಿರೋ ಅಂತಹಾ ಮಹಿಮೆಯುಳ್ಳ ತಾವು ಧ್ಯಾನವೆಂಬ ಬಾಗಿಲುಳ್ಳ ಪ್ರಕಾಶಮಾನವಾದ ಮನೆಯನ್ನು ಪ್ರವೇಶಿಸಿದಂಥವರಾಗಿ ಕುಷ್ಠರೋಗವುಳ್ಳ ನನ್ನ ಶರೀರವನ್ನು ಸುವರ್ಣ ಬಣ್ಣವುಳ್ಳದ್ದನ್ನಾಗಿ ಮಾಡಿದಿರೆಂಬುದು (ಕುಷ್ಠರೋಗವು ಹೋಗಿ ಒಳ್ಳೆಯಬಣ್ಣ ಉಳ್ಳದ್ದನ್ನಾಗಿ ಮಾಡಿದಿರೆಂಬುದು) ಏನು ಆಶ್ಚರ್ಯ? ಇದು ತಮ್ಮ ಮಾಹಾತ್ಮ್ಯಕ್ಕೆ ಯೋಗ್ಯವಾದ ರೀತಿಯಾಗಿದೆ ಎಂದರ್ಥವು. ನಿಮ್ಮ ಗರ್ಭಾವತಾರಕ್ಕಿಂತಲೂ ಮೊದಲೇ ಆರು ತಿಂಗಳು ಏಕ ಪ್ರಕಾರ ಸುವರ್ಣ ವೃಷ್ಟಿಯುಂಟಾದುದರಿಂದ ಸಾಕ್ಷಾತ್ತಾಗಿ ನನ್ನ ಮನಸ್ಸೆಂಬ ಮನೆಯಲ್ಲಿಯೇ ನಿಂತಿರಲು ನನ್ನ ಶರೀರವು ಸುವರ್ಣವಾಯಿತೆಂಬುದು ಆಶ್ಚರ್ಯವಲ್ಲವೆಂದಭಿಪ್ರಾಯವು.

ಲೋಕಸ್ಯೈಕಸ್ತ್ವಮಸಿಭಗವನ್ನಿರ್ನಿಮಿತ್ತೇನಬಂಧು
ಸ್ತ್ವಯ್ಯೇವಾಸೌಸಕಲವಿಷಯಾಶಕ್ತಿರಪ್ರತ್ಯನೀಕಾ।
ಭಕ್ತಿಸ್ಫೀತಾಂಚಿರಮಧಿವಸನ್ಮಾಮಿಕಾಂಚಿತ್ತಶಯ್ಯಾಂ
ಮಯ್ಯುತ್ಪನ್ನಂಕಥಮಿವತತಃಕ್ಲೇಶಯೂಥಂಸಹೇಥಾಃ ॥೫॥

೫. ತಾ ॥ ಭಗವಂತನೇ ! ಲೋಕಕ್ಕೆಲ್ಲಾ ತಾವು ನಿಷ್ಕಾರಣ ಬಂಧುವೆನಿಸಿದ್ದೀರಿ. ಈ ಸಮಸ್ತ ವಿಷಯವಾದ ಶಕ್ತಿಯೂ, ತಮ್ಮಲ್ಲಿಯೇ ನಿರ್ಬಾಧವಾಗಿದೆ, ತಮ್ಮಲ್ಲಿ ಭಕ್ತಿಯಿಂದ ಪೂರ್ಣವಾದ ನನ್ನ ಚಿತ್ತವೆಂಬ ಹಾಸಿಗೆಯಲ್ಲಿಯೇ ಬಹುಕಾಲದಿಂದ ವಾಸಮಾಡುತ್ತಿರುವ ತಾವು ನನ್ನ ದುಃಖಗಳ ಸಮೂಹವನ್ನು ಹೇಗೆತಾನೇ ಸಹಿಸುವಿರಿ ? ನನ್ನ ಚಿತ್ತದಲ್ಲಿ ತಾವು ಇರುವುದರಿಂದಲೇ ನನ್ನ ಕ್ಲೇಶಗಳೆಲ್ಲಾ ನಷ್ಟವಾದುವೆಂದರ್ಥವು.

ಜನ್ಮಾಟವ್ಯಾಂಕಥಮಪಿಮಯಾದೇವದೀರ್ಘಂಭ್ರಮಿತ್ವಾ
ಪ್ರಾಪ್ತೈವೇಯಂತವನಯಕಥಾಸ್ಫಾರಪೀಯೂಷವಾಪೀ ।
ತಸ್ಯಾಮಧ್ಯೇಹಿಮಕರಹಿಮವ್ಯೂಹಶೀತೇನಿತಾಂತಂ
ನಿರ್ಮಗ್ನಂಮಾಂನಜಹತಿಕಥಂದುಃಖದಾವೋಪತಾಪಾಃ ॥೬॥

೬. ತಾ॥ ಓ ದೇವರೇ ! ನಾನಾಜನ್ಮಗಳೆಂಬ ಘೋರಾರಣ್ಯದಲ್ಲಿ ಬಹುಕಾಲದಿಂದ ಸುತ್ತಿಸುತ್ತಿ ಬಳಲಿ ಬಾಯಾರಿ ಬೆಂಡಾದ ನನಗೆ ತಮ್ಮ ದಿವ್ಯೋಪದೇಶರೂಪವಾದ ಜಿನವಾಣಿಯೆಂಬ ಅಮೃತದಿಂದ ತುಂಬಲ್ಪಟ್ಟ ದೊಡ್ಡ ಸರೋವರವನ್ನು ಹೊಂದಿದೆನು. (ನಾನಾ ಯೋನಿಗಳಲ್ಲಿ ಜನಿಸಿ ಆಧಿವ್ಯಾಧಿ ಜರಾಮರಣಾದಿಗಳೆಂಬ ನಾನಾ ದುಃಖಗಳನ್ನನುಭವಿಸುವ ಜೀವನಿಗೆ ತೀರ್ಥಂಕರರ ಧರ್ಮೋಪದೇಶವು ಸಕಲ ಸಂಸಾರ ದುಃಖಗಳನ್ನು ಪರಿಹರಿಸಿ ಅನಂತ ಸುಖರೂಪವಾದ ಮುಕ್ತಿಗೆ ಕಾರಣವಾದುದರಿಂದ ಅಮೃತಸರೋವರದಂತೆ ಸಮಸ್ತ ಸಂತಾಪ ಪರಿಹಾರಕವೆಂದರ್ಥವು). ಚಂದ್ರನಂತೆಯೂ, ಹಿಮರಾಶಿಯಂತೆಯೂ, ತಣ್ಣಗಿರುವ ಆ ಅಮೃತ ಸರೋವರದ ಮಧ್ಯದಲ್ಲಿ ಚೆನ್ನಾಗಿ ಮುಳುಗಿರುವ ನನ್ನನ್ನು ಪೂರ್ವೋಕ್ತ ಸಂಸಾರ ಸಂಬಂಧಿಯಾದ ಗರ್ಭವಾಸ ಜನ್ಮಜರಾಮರಣಾದಿ ದುಃಖಗಳೆಂಬ ಕಾಡುಗಿಚ್ಚಿನ ಸಂತಾಪಗಳು ಹೇಗೆತಾನೇ ಬಿಡದಿರುವುವು ? ದ್ವಾದಶಾಂಗ ವೇದರೂಪವಾದ ಜಿನವಾಣಿಯ ಪರಿಶೀಲನೆಯಿಂದ ಆತ್ಮಾನಾತ್ಮ ವಿವೇಕವುಂಟಾಗಿ ರತ್ನತ್ರಯ ಸಂಪನ್ನನಾದವನಿಗೆ ಅನಾದಿ ಕರ್ಮಬಂಧದಿಂದುಂಟಾದ ಸಕಲ ಸಂಸಾರಿಕ ದುಃಖ ನಿವೃತ್ತಿಯುಂಟಾಗುವುದೇ ಹೊರತು ಮತ್ಯಾವುದೂ ಮೋಕ್ಷಕಾರಣವಾಗಲಾರದೆಂದಭಿಪ್ರಾಯವು.

ಪಾದನ್ಯಾಸಾದಪಿಚಪುನತೋಯಾತ್ರಯಾತೇತ್ರಿಲೋಕೀಂ
ಹೇಮಾಭಾಸೋಭವತಿಸುರಭಿಶ್ರೀನಿವಾಸಶ್ಚ ಪದ್ಮಃ ।
ಸರ್ವಾಂಗೇಣಸ್ಪೃಶತಿಭಗವಂಸ್ತ್ವಯ್ಯಶೇಷಂಮನೋಮೇ
ಶ್ರೇಯಃಕಿಂತತ್ಸ್ವಯಮಹರಹರ್ಯನ್ನಮಾಮಭ್ಯುಪೈತಿ ॥೭॥

೭. ತಾ॥ ಓ ಭಗವಂತನೇ ! ತಾವು ಸಮವಸರಣ ವಿರಾಜಮಾನರಾಗಿ ಸಂಚರಿಸುತ್ತಿರುವಾಗ ಮೂರುಲೋಕವನ್ನು ಪರಿಶುದ್ಧವನ್ನಾಗಿ ಮಾಡುವ ತಮ್ಮ ಪಾದಗಳನ್ನು ಇಟ್ಟಮಾತ್ರಕ್ಕೇ ದೇವತೆಗಳಿಂದ ಸಮರ್ಪಿಸಲ್ಪಟ್ಟ ಕಮಲವು ಬಂಗಾರದ ಕಾಂತಿಯುಳ್ಳದ್ದಾಗಿಯೂ, ಬಹಳ ಪರಿಮಳವುಳ್ಳದ್ದಾಗಿಯೂ, ಲಕ್ಷ್ಮೀನಿವಾಸಸ್ಥಾನವೆನಿಸುವುದಾಗಿಯೂ, ಮನೋಹರವಾಗುತ್ತದೆ. ತಮ್ಮ ಪಾದವೆಂಬ ಒಂದು ಅವಯವದ ಸ್ಪರ್ಶಮಾತ್ರದಿಂದಲೇ ಕಮಲವು ಸುವರ್ಣವಾಗಲಾಗಿ ನನ್ನ ಮನಸ್ಸು ಸಂಪೂರ್ಣವಾಗಿ ತಮ್ಮಲ್ಲಿಯೇ ಸೇರಿ ಸರ್ವಭಾಗದಿಂದಲೂ ತಮ್ಮನ್ನೇ ಸ್ಪರ್ಶಿಸುತ್ತಿರುವುದರಿಂದ ಪ್ರತಿದಿನವೂ ಯಾವ ಶ್ರೇಯಸ್ಸು ನನ್ನನ್ನು ಹೊಂದದು? ಅಂದರೆ ಮನಸ್ಸಿನಲ್ಲಿ ಸರ್ವದಾ ತಮ್ಮನ್ನೇ ಧ್ಯಾನಿಸುತ್ತಿರುವ ನನಗೆ ಪ್ರಾಪ್ತವಾಗದ ಶ್ರೇಯಸ್ಸು ಯಾವುದೂ ಇಲ್ಲ, ತಮ್ಮ ಧ್ಯಾನದಿಂದ ನನಗೆ ಸಮಸ್ತ ಶ್ರೇಯಸ್ಸೂ ಸಿದ್ಧಿಸಿತೆಂದಭಿಪ್ರಾಯವು.

ಪಶ್ಯಂತಂತ್ವದ್ವಚನಮಮೃತಂಭಕ್ತಿಪಾತ್ರ್ಯಾಪಿಬಂತಂ
ಕರ್ಮಾರಣ್ಯಾತ್ಪುರುಷಮಸಮಾನಂದಧಾಮಪ್ರವಿಷ್ಟಂ ।
ತ್ವಾಂದುರ್ವಾರಸ್ಮರಮದಹರಂತ್ವತ್ಪ್ರಸಾದೈಕಭೂಮಿಂ
ಕ್ರೂರಾಕಾರಾಃಕಥಮಿವರುಜಾಕಂಟಕಾನಿರ್ಲುಠಂತಿ ॥೮॥

೮. ತಾ॥ ಓ ಜಿನನಾಥರೇ ! ಯಾವ ಭವ್ಯಾತ್ಮನು ತಮ್ಮ ದರ್ಶನವನ್ನು ಮಾಡುವಂಥವನಾಗಿಯೂ, ತಮ್ಮ ಧರ್ಮೋಪದೇಶವೆಂಬ ಅಮೃತವನ್ನು ಭಕ್ತಿಯೆಂಬ ಪಾತ್ರೆಯಿಂದ ಕುಡಿಯುವನಾಗಿಯೂ, ಘೋರಕರ್ಮವೆಂಬ ಅರಣ್ಯವನ್ನು ದಾಟಿ ಅಪರಿಮಿತಾನಂದ ನಿಧಿಯಾದ ಪರಮಾತ್ಮಸ್ವರೂಪರಾದ, ತಡೆಯಲಶಕ್ಯವಾದ ಕಾಮನ ಗರ್ವವನ್ನು ಭಂಗಪಡಿಸಿದವರಾದ, ತಮ್ಮನ್ನು ಹೊಂದಿ ತಮ್ಮ ದಯೆಗೆ ಮುಖ್ಯಸ್ಥಾನಭೂತನಾಗಿಯೂ, ಇರುವನೋ ಅಂತಹ ಭವ್ಯಾತ್ಮನನ್ನು ಮಹಾ ಘೋರ ರೋಗಗಳೆಂಬ ಕ್ಷುದ್ರಶತ್ರುಗಳು ಹಾಗೂ

ಮುಳ್ಳುಗಳು ಹೇಗೆ ಬಾಧಿಸುವುವು ? ಅಂದರೆ ಮಹಾರಣ್ಯದಲ್ಲಿ ತಿರುಗುತ್ತಿರುವವನ ಕಾಲಿಗೆ ನಾನಾ ವಿಧವಾದ ಕ್ರೂರವಾದ ವಿಷದ ಮುಳ್ಳುಗಳು ಚುಚ್ಚಿಕೊಂಡು ಹೇಗೆ ಬಾಧಿಸುವುವೋ, ಮತ್ತು ಸಿಂಹಶಾರ್ದೂಲ ಶರಭಗಜವ್ಯಾಘ್ರ ಸರ್ಪ ಮುಂತಾದ ಕ್ರೂರಮೃಗಗಳೂ ಹೇಗೆ ಬಾಧಿಸುವುವೋ, ಹಾಗೆ ಜೀವನು ಮಹಾರಣ್ಯದಂತೆ ಭಯಂಕರವಾದ ಚತುರ್ಗತಿಗಳಲ್ಲಿ ತಿರುಗುತ್ತಿರುವವರೆಗೂ ಘೋರವಾದ ರೋಗಾದಿಗಳೇ ಮೊದಲಾದ ದುಃಖಗಳು ಬಾಧಿಸುವುವು. ಶುದ್ಧ ಪರಮಾತ್ಮರೂಪವನ್ನೈದಿದ ತಮ್ಮ ದರ್ಶನ ಧರ್ಮೋಪದೇಶ ಶ್ರವಣಾದಿಗಳಲ್ಲಿ ನಿರತನಾದ ಭಕ್ತನನ್ನು ರೋಗಾದಿ ದುಃಖಗಳು ಬಾಧಿಸಲಶಕ್ತವಾಗಿ ಸ್ವತಃ ಏವನಿವರ್ತಿಸಿ ಹೋಗುವುವೆಂದಭಿಪ್ರಾಯವು.

ಪಾಷಾಣಾತ್ಮಾತದಿತರಸಮಃ ಕೇವಲಂರತ್ನಮೂರ್ತಿ
ರ್ಮಾನಸ್ತಂಭೋಭವತಿಚಪರಸ್ತಾದೃಶೋರತ್ನವರ್ಗಃ ।
ದೃಷ್ಟಿಪ್ರಾಪ್ತೋಹರತಿಸಕಥಂಮಾನರೋಗಂನರಾಣಾಂ
ಪ್ರತ್ಯಾಸತ್ತಿರ್ಯದಿನಭವತಸ್ತಸ್ಯತಚ್ಛಕ್ತಿಹೇತುಃ ॥ ೯ ॥

೯. ತಾ॥ ಓ ಜಿನರಾಜನೇ ! ತಮ್ಮ ಎದುರಿಗಿರುವ ಮಾನಸ್ತಂಭವು ನಾನಾ ರತ್ನಮಯವಾಗಿದ್ದರೂ ಕಲ್ಲೆನಿಸಿಕೊಳ್ಳುವುದು. ಅದಕ್ಕಿಂತಲೂ ಬೇರೆಯಾದ ಕಲ್ಲುಗಳೂ, ಬೇರೆಯಾದ ರತ್ನಸಮೂಹವೂ, ಕಲ್ಲಿನಸ್ವರೂಪವಾದ ವಸ್ತುಗಳೇ. ಇವೆಲ್ಲವೂ ತನ್ನ ನಿಜರೂಪದಿಂದ ಕಲ್ಲುಗಳಾಗಿದ್ದರೂ, ಆ ಮಾನಸ್ತಂಭವು ಮಾತ್ರ ಮಾನಿಗಳ ಮಾನವನ್ನು ಸ್ತಂಭನಮಾಡುವುದು. ಆದಂದರಿಂದಲೇ ಇದಕ್ಕೆ ಮಾನಸ್ತಂಭವೆಂದು ಹೆಸರಾಯಿತು. ಮಾನಸ್ತಂಭವು ಇತರ ಕಲ್ಲುಗಳಂತೆ ತಾನೂ ಕಲ್ಲಾಗಿದ್ದರೂ ಮಾನಕಷಾಯವೆಂಬ ರೋಗವನ್ನು ಹೋಗಲಾಡಿಸುವ ಸಾಮರ್ಥ್ಯವು ತಮ್ಮ ಸನ್ನಿಧಾನದಲ್ಲಿರುವುದರಿಂದ ಉಂಟಾಯಿತು. ಅಚೇತನವಾದ ಮಾನಸ್ತಂಭಕ್ಕೂ ಆತ್ಮನ ರೋಗವಾದ ಮಾನಕಷಾಯವನ್ನು ನಿಲ್ಲಿಸುವ ಸಾಮರ್ಥ್ಯವಿರಲು, ತಮ್ಮನ್ನು ಹೃದಯದಲ್ಲೇ ಧರಿಸಿರುವವರಿಗೆ ಸಕಲ ರೋಗಾದಿ ಶರೀರ ದುಃಖಗಳು ಪರಿಹಾರವಾಗುತ್ತದೆಂಬ ವಿಷಯದಲ್ಲಿ ಹೇಳತಕ್ಕದ್ದೇನೆಂದಭಿಪ್ರಾಯವು.

ಹೃದ್ಯಃಪ್ರಾಪ್ತೋಮರುದಪಿಭವನ್ಮೂರ್ತಿಶೈಲೋಪವಾಹೀ
ಸದ್ಯಃಪುಂಸಾಂನಿರವಧಿರುಜಾಧೂಳಿಬಂಧಂಧುನೋತಿ।
ಧ್ಯಾನಾಹೂತೋಹೃದಯಕಮಲಂಯಸ್ಯತುತ್ವಂಪ್ರವಿಷ್ಟ
ಸ್ತಸ್ಯಾಶಕ್ಯಃಕಇಹಭುವನೇದೇವಲೋಕೋಪಕಾರಃ ॥೧೦॥

೧೦. ತಾ॥ ಓ ಜಿನನಾಥರೇ ! ತಮ್ಮ ದಿವ್ಯದೇಹವೆಂಬ ಪರ್ವತ ಸಮೀಪದಲ್ಲಿ ಬೀಸಿದ ಮನೋಹರವಾದ ಗಾಳಿಯೂ ಕೂಡ ಯಾವ ಪುರುಷರನ್ನು ಸೋಂಕುತ್ತದೋ, ಅಂತಹ ಮನುಷ್ಯರು ದೇಹವಿರುವ ಪರಿಯಂತ ಅನುಭವಿಸಬೇಕಾದ ಮಹಾರೋಗವನ್ನು ಆ ಕ್ಷಣದಲ್ಲಿಯೇ ಧೂಳಿನಂತೆ ಕೊಡಹುತ್ತದೆ. ತಮ್ಮ ದೇಹಸ್ಪರ್ಶವುಳ್ಳ ಗಾಳಿಗೂಕೂಡ ಇಂತಹ ಸಾಮರ್ಥ್ಯವಿರುವಲ್ಲಿ, ತಮ್ಮನ್ನು ಧ್ಯಾನದಿಂದ ಕರೆದು ಯಾವಭಕ್ತನು ತನ್ನ ಹೃದಯಕಮಲದಲ್ಲಿ ಸ್ಥಾಪಿಸಿಕೊಳ್ಳುತ್ತಾನೋ, ಓ ದೇವನೇ! ಅಂತಹ ಭಕ್ತರಿಗೆ ಈ ಲೋಕದಲ್ಲಿ ಮಾಡಲಶಕ್ಯವಾದ ಲೋಕೋಪಕಾರ ಯಾವುದು? ಅಂದರೆ ಅಂತಹ ಜಿನಭಕ್ತನು ಸರ್ವಪ್ರಾಣಿಗಳಿಗೂ ಆತ್ಮಕಲ್ಯಾಣಕ್ಕೆ ಯೋಗ್ಯವಾದ ಉಪಕಾರವನ್ನು ಮಾಡಲು ಶಕ್ತನೆಂದರ್ಥವು.

ಜಾನಾಸಿತ್ವಂಮಮಭವಭವೇಯಚ್ಚಯಾದೃಕ್ಚದುಃಖಂ
ಜಾತಂಯಸ್ಯಸ್ಮರಣಮಪಿಮೇಶಸ್ತ್ರವನ್ನಿಷ್ಪಿನಷ್ಟಿ ।
ತ್ವಂಸರ್ವೇಶಃಸಕೃಪಇತಿಚತ್ವಾಮುಪೇತೋಸ್ಮಿಭಕ್ತ್ಯಾ
ಯತ್ಕರ್ತವ್ಯಂತದಿಹವಿಷಯೇದೇವಏವಪ್ರಮಾಣಂ ॥೧೧॥

೧೧. ತಾ॥ ಓ ಸರ್ವಜ್ಞರೇ! ನಾನು ಯಾವಯಾವ ಜನ್ಮಗಳಲ್ಲಿ ಯಾವಯಾವ ಘೋರದುಃಖಗಳನ್ನನುಭವಿಸಿದೆನೋ ಅಂತಹ ಭವಭವಾಂತರ ದುಃಖಗಳನ್ನೆಲ್ಲಾ ಕೇವಲಜ್ಞಾನಿಯಾದ ತಾವು ತಿಳಿಯುತ್ತೀರಿ. ಮೋಹನೀಯಕರ್ಮದಿಂದ ಹತನಾದ ನಾನು ಹೇಳಲರಿಯೆನು. ಆ ದುಃಖಗಳನ್ನು ಸ್ಮರಿಸಿದರೂ ಕೂಡ, ನನಗೆ ಶಸ್ತ್ರಪ್ರಹಾರದಂತೆ ದುಃಖಕರವಾಗಿದೆ. ತಾವು ಸರ್ವಾತ್ಮಗಳಿಗೂ ರಕ್ಷಕರೆಂದೂ ಪರಮ ದಯಾಳುವೆಂದೂ ಭಕ್ತಿಯಿಂದ ತಮ್ಮನ್ನು ರಕ್ಷಕರನ್ನಾಗಿ ಹೊಂದಿದ್ದೇನೆ (ಶರಣಾಗಿದ್ದೇನೆ). ಈ ಶರಣಾಗತನಾದ ನನ್ನನ್ನು ಹೇಗೆ ರಕ್ಷಿಸಬೇಕೋ ಆ ವಿಷಯದಲ್ಲಿ ಸ್ವಾಮಿಯಾದ ತಾವೇ ತಿಳಿಯಬಲ್ಲಿರಿ.

ಯಾವ ಪ್ರಕಾರ ಭಕ್ತರ ರಕ್ಷಣೆಯನ್ನು ಮಾಡಬೇಕೋ ಆ ವಿಷಯವು ತಮ್ಮನ್ನೇ ಸೇರಿದೆ ಎಂದಭಿಪ್ರಾಯವು.

ಪ್ರಾಪದ್ದೈವಂ ತವನುತಿಪದೈರ್ಜೀವಕೇನೋಪದಿಷ್ಟೈಃ
ಪಾಪಾಚಾರೀ ಮರಣಸಮಯೇ ಸಾರಮೇಯೋಽಪಿ ಸೌಖ್ಯಂ ।
ಕಸ್ಸಂದೇಹೋ ಯದುಪಲಭತೇ ವಾಸವಶ್ರೀಪ್ರಭುತ್ವಂ
ಜಲ್ಪಂಜಾಪ್ಯೈರ್ಮಣಿಭಿರಮಲೈಸ್ತ್ವನ್ನಮಸ್ಕಾರಚಕ್ರಂ ॥ ೧೨॥

೧೨. ತಾ॥ ಓ ಜಿನೇಂದ್ರರೇ ! ಕೆಲವು ಮಿಥ್ಯಾಚಾರವುಳ್ಳವರು ಯಜ್ಞ ಕಾರ್ಯವನ್ನು ಮಾಡುತ್ತಿದ್ದಾಗ ಒಂದು ನಾಯಿಯು ಹೋಮಮಾಡುವುದಕ್ಕಾಗಿಟ್ಟಿದ್ದ ಅನ್ನವನ್ನು ಮುಟ್ಟಲು ಆ ಯಜ್ಞಶೀಲರು ಆ ನಾಯಿಯನ್ನು ಸಾಯುವಂತೆ ಹೊಡೆದರು. ಆ ನಾಯಿಗೆ ಪ್ರಾಣ ಹೋಗುವ ಕಾಲದಲ್ಲಿ ಸತ್ಯಂಧರ ಮಹಾರಾಜನ ಮಗನಾದ ಜೀವಂಧರ ಕುಮಾರನು ಪಂಚನಮಸ್ಕಾರ ಮಂತ್ರವನ್ನು ಉಪದೇಶಿಸಲು ಆ ಪಾಪಾಚಾರವುಳ್ಳ ನಾಯಿಯೂ ಕೂಡ ಆ ಮಂತ್ರ ಮಾಹಾತ್ಮ್ಯದಿಂದ ದೇವಭವವನ್ನು ಪಡೆದು ಸುಖವನ್ನನುಭವಿಸಿತು. ಹೀಗಿರುವಾಗ ಮನುಷ್ಯಜನ್ಮವನ್ನೆತ್ತಿ ಉತ್ತಮ ಜಿನಮತದಲ್ಲಿ ಜನಿಸಿ ನಿರ್ಮಲ ಸ್ಫಟಿಕಮಣಿಯ ಜಪಸರವನ್ನು ಹಿಡಿದುಕೊಂಡು ತಮ್ಮ ನಮಸ್ಕಾರಮಂತ್ರವನ್ನಾವರ್ತಿಸುವವನಾಗಿ ಜಪವನ್ನು ಮಾಡುವ ಜಿನಭಕ್ತನು ದೇವೇಂದ್ರ ಪದವಿಯನ್ನು ಪಡೆಯುವನೆಂಬ ವಿಷಯದಲ್ಲಿ ಸಂದೇಹವೇನು ? ತಮ್ಮ ದಿವ್ಯ ಮಂತ್ರಕ್ಕೆ ಸಮಸ್ತ ಅನಿಷ್ಟಗಳನ್ನೂ ಪರಿಹರಿಸಿ ಮೋಕ್ಷ ಪರ್ಯಂತವಾದ ಸರ್ವ ಶ್ರೇಯಸ್ಸನ್ನೂ ಕೊಡುವ ಸಾಮರ್ಥ್ಯವಿದೆ ಎಂದಭಿಪ್ರಾಯವು.

ಶುದ್ಧೇ ಜ್ಞಾನೇ ಶುಚಿನಿ ಚರಿತೇ ಸತ್ಯಪಿ ತ್ವಯ್ಯನೀಚಾ
ಭಕ್ತಿರ್ನೋ ಚೇದನವಧಿಸುಖಾವಂಚಿಕಾ ಕುಂಚಿಕೇಯಂ ।
ಶಕ್ಯೋದ್ಘಾಟಂ ಭವತಿ ಹಿ ಕಥಂ ಮುಕ್ತಿಕಾಮಸ್ಯ ಪುಂಸೋ
ಮುಕ್ತಿದ್ವಾರಂ ಪರಿದೃಢಮಹಾಮೋಹಮುದ್ರಾಕವಾಟಂ
॥ ೧೩ ॥

೧೩. ತಾ॥ ಓ ಅರ್ಹತ್ಪರಮೇಶ್ವರರೇ ! ಮೋಕ್ಷವನ್ನಪೇಕ್ಷಿಸುವವನಿಗೆ ಪರಿಶುದ್ಧವಾದ ಜ್ಞಾನ, ಚಾರಿತ್ರಗಳಿದ್ದರೂ ಅನಂತ ಸುಖರೂಪವಾದ ಮೋಕ್ಷವನ್ನು ತಪ್ಪದೆ ಕೊಡತಕ್ಕುದಾದ ತಮ್ಮಲ್ಲಿ ಮಾಡುವ ಭಕ್ತಿ ಎಂಬ ಬೀಗದಕೈಮಾತ್ರ ಇಲ್ಲದಿದ್ದರೆ ಮಹಾ ಮೋಹನೀಯ ಕರ್ಮವೆಂಬ ಮುದ್ರೆ ಹಾಕಿ ದೃಢವಾಗಿ ಮುಚ್ಚಲ್ಪಟ್ಟಿರುವ ಮೋಕ್ಷದ ಬಾಗಿಲು ಹೇಗೆ ತೆಗೆಯುವುದಕ್ಕೆ ಸಾಧ್ಯವಾದೀತು ? ಜ್ಞಾನಚಾರಿತ್ರಾದಿಗಳಿದ್ದರೂ, ಜಿನಭಕ್ತಿಯಿಲ್ಲದಿದ್ದರೆ ಸಕಲವೂ ನಿಷ್ಫಲವು. ಆದುದರಿಂದ ಜಿನಭಕ್ತಿಯೇ ಮುಕ್ತಿಗೆ ಮುಖ್ಯೋಪಾಯವೆಂದು ಭಾವವು.

ಪ್ರಚ್ಛನ್ನಃ ಖಲ್ವಯಮಘಮಯೈರಂಧಕಾರೈಸ್ಸಮಂತಾ
ತ್ಪಂಥಾ ಮುಕ್ತೇಃ ಸ್ಥಪುಟಿತಪದಃ ಕ್ಲೇಶಗರ್ತೈರಗಾಧೈಃ ।
ತತ್ಕಸ್ತೇನ ವ್ರಜತಿ ಸುಖತೋ ದೇವ ತತ್ತ್ವಾವಭಾಸೀ
ಯದ್ಯಗ್ರೇಗ್ರೇ ನ ಭವತಿ ಭವದ್ಭಾರತೀರತ್ನದೀಪಃ ॥ ೧೪ ॥

೧೪. ತಾ॥ ಓ ಸ್ವಾಮಿಯೇ ! ಸಮ್ಯಗ್ದರ್ಶನಜ್ಞಾನಚಾರಿತ್ರ ರೂಪವಾದ ಮೋಕ್ಷಮಾರ್ಗದಲ್ಲಿ ಸರ್ವ ಸಂಸಾರಿಜೀವಗಳೂ ಯೇತಕ್ಕೆ ಧಾರಾಳವಾಗಿ ಪ್ರವೇಶಿಸುವುದಿಲ್ಲವೆಂದರೆ ಈ ಮೋಕ್ಷಮಾರ್ಗದಲ್ಲಿ ಸಂಸಾರಿ ಜೀವಿಗಳು ಅನುಭವಿಸುವ ಕ್ಲೇಶಗಳೆಂಬುದೇ ದೊಡ್ಡ ದೊಡ್ಡ ಹಳ್ಳಗಳಾಗಿವೆ. ಪಾಪಸಮೂಹಗಳೆಂಬುದೇ ಕಗ್ಗತ್ತಲೆಯಾಗಿದೆ. ಇಂತಹ ಮೋಕ್ಷಮಾರ್ಗದಲ್ಲಿ ಜೀವಾಜೀವಾದಿ ತತ್ತ್ವಗಳ ಯಥಾರ್ಥಭಾವವನ್ನು ಪ್ರಕಾಶಪಡಿಸುವ ತಮ್ಮ ದಿವ್ಯಧ್ವನಿರೂಪವಾದ ರತ್ನದೀಪವು ಮುಂದೆ ಮುಂದೆಯಿಲ್ಲದಿದ್ದರೆ ಸಂಸಾರಿಜೀವನು ಯಾವದಾರಿಯಿಂದ ಮೋಕ್ಷಸ್ಥಾನವನ್ನು ಹೊಂದಲು ಸಮರ್ಥನಾದಾನು ? ಆದುದರಿಂದ ತಮ್ಮ ದಿವ್ಯವಾಣಿಯಿಂದಲೇ ತತ್ತ್ವಜ್ಞಾನವನ್ನು ಹೊಂದಿ ಸಂಸಾರಿಜೀವನು ಮೋಕ್ಷವನ್ನು ಹೊಂದಬಹುದೇ ಹೊರತು ಮತ್ಯಾವ ಮಿಥ್ಯಾ ದೇವಗುರುಶಾಸ್ತ್ರಗಳೂ ಮೋಕ್ಷಕ್ಕೆ ಮಾರ್ಗಗಳಾಗಿ ಆಗಲಾರವೆಂದಭಿಪ್ರಾಯವು.

ಆತ್ಮಜ್ಯೋತಿರ್ನಿಧಿರನವಧಿರ್ದ್ರಷ್ಟುರಾನಂದಹೇತುಃ
ಕರ್ಮಕ್ಷೋಣೀಪಟಲಪಿಹಿತೋ ಯೋಽನವಾಪ್ಯಃ ಪರೇಷಾಂ ।
ಹಸ್ತೇ ಕುರ್ವಂತ್ಯನತಿಚಿರತಸ್ತಂ ಭವದ್ಭಕ್ತಿಭಾಜಃ
ಸ್ತೋತ್ರೈರ್ಬಂಧಪ್ರಕೃತಿಪುರುಷೋದ್ದಾಮಧಾತ್ರೀಖನಿತ್ರೈಃ
॥ ೧೫ ॥

೧೫. ತಾ॥ ಓ ಜಿನಪರಮಾತ್ಮನೇ ! ಅನಂತಜ್ಞಾನ ಸುಖಾದಿ ಎಂಟು ಗುಣಗಳಿಂದ ಪ್ರಕಾಶಿಸುವ ಪರಮಾತ್ಮನೇ ಒಂದು ಅಕ್ಷಯವಾದನಿಧಿಯು. ಈ ನಿಧಿಯು, ನೋಡುವವರಿಗೆ (ಆತ್ಮಧ್ಯಾನಪರರಾದ ಯತಿಗಳಿಗೆ) ಆತ್ಮಾನಂದಕರವಾದದ್ದು. ಇದು ಕರ್ಮವೆಂಬ ಭೂಮಿಯಿಂದ ಮುಚ್ಚಲ್ಪಟ್ಟು ಭೂಮಿಯೊಳಗಿರುವ ನಿಧಿಯಂತೆ ಸರ್ವಸಾಧಾರಣವಾಗಿ ಪಡೆಯಲು ಸಾಧ್ಯವಾಗಲಾರದು. ಅಂತಹ ಪರಮಾತ್ಮನೆಂಬ ನಿಧಿಯನ್ನು ತಮ್ಮಲ್ಲಿ ಪರಮಭಕ್ತಿಯುಳ್ಳವರು ಪ್ರಕೃತಿಸ್ಥಿತಿ ಅನುಭಾಗ ಪ್ರದೇಶಗಳೆಂಬ ನಾಲ್ಕು ಬಂಧ ಪ್ರಕೃತಿ ಸ್ವರೂಪವನ್ನೂ, ಆತ್ಮಸ್ವರೂಪವನ್ನೂ, ಪ್ರಕಾಶಪಡಿಸುವ ಸ್ತೋತ್ರಗಳೆಂಬ ಉತ್ಕೃಷ್ಟಗುದ್ದಲಿಗಳಿಂದ ಅಗೆಯುವವರು (ತಮ್ಮನ್ನು ಧ್ಯಾನಿಸುವ ಭಕ್ತರು ಕೈಗೆ ತೆಗೆದುಕೊಳ್ಳುವರು) ಸ್ವಾಧೀನಪಡಿಸಿಕೊಳ್ಳುವರು.

ಪ್ರತ್ಯುತ್ಪನ್ನಾನಯಹಿಮಗಿರೇರಾಯತಾಚಾಮೃತಾಬ್ಧೇ
ರ್ಯಾದೇವತ್ವತ್ಪದಕಮಲಯೋಃಸಙ್ಗತಾಭಕ್ತಿಗಂಗಾ ।
ಚೇತಸ್ತಸ್ಯಾಂಮಮರುಚಿವಶಾದಾಪ್ಲುತಂಕ್ಷಾಳಿತಾಂಹಃ
ಕಲ್ಮಾಷಂಯದ್ಭವತಿಕಿಮಿಯಂದೇವಸಂದೇಹಭೂಮಿಃ
॥ ೧೬ ॥

೧೬. ತಾ॥ ಓ ಜಿನದೇವನೇ ! ತಮ್ಮ ಪಾದಕಮಲಗಳಲ್ಲಿ ಸಂಬಂಧಿಸಿರುವ ಭಕ್ತಿಯೇ ಒಂದು ಗಂಗಾನದಿಯು. ಈ ಭಕ್ತಿಯೆಂಬ ಗಂಗೆಯು ಸ್ಯಾದ್ವಾದ ನ್ಯಾಯವೆಂಬ ಹಿಮವತ್ಪರ್ವತದ ದೆಸೆಯಿಂದಹುಟ್ಟಿದ್ದು. ಲೋಕಸಿದ್ಧವಾದ ಗಂಗಾನದಿಯು ಹಿಮವತ್ಪರ್ವತದಲ್ಲಿ ಹುಟ್ಟಿ ಸಮುದ್ರದಲ್ಲಿ ಸೇರುವಂತೆ ಸ್ಯಾದ್ವಾದ ನ್ಯಾಯವೆಂಬ ಹಿಮವತ್ಪರ್ವತದಲ್ಲಿ ಹುಟ್ಟಿದ ಗಂಗೆಯು ಮುಕ್ತಿಯೆಂಬ ಆನಂದಸಮುದ್ರದಲ್ಲಿ ಸಂಗಮವಾಗುವುದು. ಈ ಪ್ರಕಾರವಾದ ತಮ್ಮ ಪಾದಭಕ್ತಿಯೆಂಬ ಗಂಗೆಯಲ್ಲಿ ನನ್ನ ಮನಸ್ಸು ಅತ್ಯಂತ ಶುಚಿಯ ದೆಸೆಯಿಂದ (ಪ್ರೀತಿಯಿಂದ) ಮುಳುಗಿತು. ಸಮಸ್ತ ಪಾಪನಾಶವನ್ನೂ ಹೊಂದಿ ಶುದ್ಧವಾದ ನನ್ನ ಮನಸ್ಸು ಬೆಳ್ಳಗಾಗುವುದೇ ನ್ಯಾಯವಾಗಿದ್ದರೂ ಕಲ್ಮಷವಾಯಿತು ಅಂದರೆ ನಾನಾ ಬಣ್ಣವಾಯಿತೆಂದು ಅರ್ಥತೋರುತ್ತದೆ, ಆಶ್ಚರ್ಯವನ್ನು ಹೊಂದಿತೆಂದು ಮುಖ್ಯಾರ್ಥವು. ನಿರ್ಮಲವಾದ ಗಂಗೆಯಲ್ಲಿ ಸ್ನಾನಮಾಡಿದ ವಸ್ತು ಕೊಳೆ ಹೋಗಿ ನಿರ್ಮಲವಾಗಬೇಕೇ ಹೊರತು ಯಾವ

ಕಾರಣದಿಂದ ಕಲ್ಮಷವಾಯಿತೆಂಬುವುದೇ ನನಗೆ ಸಂದೇಹಾಸ್ಪದವಾಗಿದೆ. ದೇವನೇ, ಇದಕ್ಕೆ ಕಾರಣವನ್ನು ತಾವೇ ಅಪ್ಪಣೆ ಕೊಡಿಸಬೇಕು. ತಮ್ಮ ಪಾದಭಕ್ತಿಯಿಂದ ನನ್ನ ಮನಸ್ಸು ಪೂರ್ವರೀತಿಯನ್ನು ಬಿಟ್ಟು ಶುದ್ಧವಾಗಿ ವಿಚಿತ್ರ ಪರಿಣಾಮವನ್ನು ಹೊಂದಿತೆಂದರ್ಥವು. ಜಿನಭಕ್ತಿಗೆ ಗಂಗೆಯಂತೆ ಎಲ್ಲಾ ಗುಣಗಳೂ ಒಪ್ಪಿದರೂ ಕೂಡ ಇದರಲ್ಲಿ ಮುಳುಗಿದ ನನ್ನ ಮನಸ್ಸು ಚಿತ್ರವಾದುದರಿಂದ ಈ ಜಿನಭಕ್ತಿಯು ಗಂಗೆ ಹೌದೋ ಅಲ್ಲವೋ ? ಎಂಬುದಾಗಿ ಸಂದೇಹಪಡಬಹುದಾಗಿದೆ. ಹಾಗೆ ಈ ತಮ್ಮ ಪಾದಭಕ್ತಿಯು ಸಂದೇಹಾಸ್ಪದವಲ್ಲ, ಕಲ್ಮಷವೆಂಬ ಪದಕ್ಕೆ ಚಿತ್ರವೆಂಬುದು ಪ್ರತಿಪದವಾದುದರಿಂದ ನನಗೆ ಪೂರ್ವದಲ್ಲಿದ್ದ ಸಂಸಾರಮೋಹಗಳೆಂಬ ಪಾಪಗಳೆಲ್ಲಾ ಹೋಗಿ ಮನಸ್ಸಿನಲ್ಲಿ ವಿಚಿತ್ರವಾದ ಒಳ್ಳೆಯ ಪರಿಣಾಮ ಹುಟ್ಟಿತೆಂಬ ಅರ್ಥವನ್ನಂಗೀಕರಿಸಿ ಪೂರ್ವೋಕ್ತ ಗಂಗಾನದಿಯ ಲಕ್ಷಣಗಳೆಲ್ಲಾ ತಮ್ಮ ಪಾದಭಕ್ತಿಯಲ್ಲಿ ಒಪ್ಪಿದೆಯಾದುದರಿಂದ ಈ ಭಕ್ತಿಯು ಸಂಪೂರ್ಣವಾಗಿ ಗಂಗೆಯೇ ಸರಿಯೆಂದು ತಾತ್ಪರ್ಯವು.

ಪ್ರಾದುರ್ಭೂತಸ್ಥಿರಪದಸುಖತ್ವಾಮನುಧ್ಯಾಯತೋಮೇ
ತ್ವಯ್ಯೇವಾಹಂಸಇತಿಮತಿರುತ್ಪದ್ಯತೇನಿರ್ವಿಕಲ್ಪಾ ।
ಮಿಥ್ಯೈವೇಯಂತದಪಿತನುತೇತೃಪ್ತಿಮಭ್ರೇಷರೂಪಾಂ
ದೋಷಾತ್ಮಾನೋಽಪ್ಯಭಿಮತಫಲಾಸ್ತ್ವತ್ಪ್ರಸಾದಾದ್ಭವಂತಿ
॥ ೧೭ ॥

೧೭. ತಾ॥ ಓ ಸ್ಥಿರವಾದ ಮುಕ್ತಿಸುಖವನ್ನು ಪಡೆದಿರುವ ಸ್ವಾಮಿಯೇ ! ತಮ್ಮನ್ನೇ ಧ್ಯಾನಿಸುತ್ತಿರುವ ನನಗೆ ನಾನು ಬೇರೆ ತಾವು ಬೇರೆಯೆಂಬ ಭೇದಬುದ್ಧಿಯೇ ನಷ್ಟವಾಗಿ ನಿರ್ವಿಕಲ್ಪಕ (ಅಭೇದ) ಬುದ್ಧಿಯು ಹುಟ್ಟುತ್ತದೆ. ಈ ನಿರ್ವಿಕಲ್ಪಕ ಸಮಾಧಿಯನ್ನು ಚೆನ್ನಾಗಿ ವಿಚಾರಿಸಿ ನೋಡುವಲ್ಲಿ ತಾವು ಕರ್ಮಕ್ಷಯವನ್ನು ಹೊಂದಿದ ಪರಿಶುದ್ಧ ಪರಮಾತ್ಮಸ್ವರೂಪರು, ನಾನು ಕರ್ಮಿಯಾಗಿದ್ದೇನೆ. ತಾವೇ ನಾನೆಂಬುದು ಭಾವನಾಮಾತ್ರದಲ್ಲಿ ಹೊರತು ನಿಜವಾದದ್ದಲ್ಲ. ಹೀಗೆ ಸುಳ್ಳುಭಾವನೆಯಾದರೂ ತಮ್ಮ ಅನುಗ್ರಹದಿಂದ ಇಷ್ಟ ಫಲಗಳು ಸಿದ್ಧಿಯಾಗಿಯೇ ಆಗುತ್ತವೆ.

ಮಿಥ್ಯಾವಾದಂಮಲಮಪನುದನ್ಸಪ್ತಭಂಗೀತರಂಗೈ
ರ್ವಾಗಂಭೋಧಿರ್ಭುವನಮಖಿಲಂದೇವಪರ್ಯೇತಿಯಸ್ತೇ।
ತಸ್ಯಾವೃತ್ತಿಂಸಪದಿವಿಬುಧಾಶ್ಚೇತಸೈವಾಚಲೇನ
ವ್ಯಾತನ್ವಂತಃಸುಚಿರಮಮೃತಾಸೇವಯಾತೃಪ್ನುವಂತಿ ॥೧೮॥

೧೮. ತಾ॥ ಓ ಅರ್ಹಂತ ದೇವನೇ ! ತಮ್ಮ ವಾಣಿಎಂಬುದೇ ಒಂದು ಸಮುದ್ರವು ಆ ಸಮುದ್ರಕ್ಕೆ ಸಪ್ತಭಂಗೀನ್ಯಾಯಗಳೇ ಅಲೆಗಳು. ಈ ಸಪ್ತ ಭಂಗೀನ್ಯಾಯಗಳೆಂಬ ತೆರೆಮಾಲೆಗಳಿಂದ ಮಿಥ್ಯಾವಾದಗಳೆಂಬ ಕಶ್ಮಲಗಳು ಹೋಗಲಾಡಿಸಲ್ಪಟ್ಟು ಆ ತಮ್ಮ ದಿವ್ಯವಾಣಿ ಎಂಬ ಸಮುದ್ರವು ಸಮಸ್ತ ಲೋಕಗಳನ್ನು ವ್ಯಾಪಿಸುತ್ತದೆ. ಆ ತಮ್ಮ ದಿವ್ಯವಾಣಿ ಎಂಬ ಸಮುದ್ರವನ್ನು ದೇವತೆಗಳು, ವಿದ್ವಾಂಸರು, ಮನಸ್ಸೆಂಬ ಪರ್ವತದಿಂದ ಕಡೆದರು (ಚರ್ಚಿಸಿ ತತ್ವನಿಶ್ಚಯವನ್ನು ಹೊಂದಿದರು). ಅದರಿಂದುಂಟಾದ ಅಮೃತ ಸೇವನೆ ಯಿಂದ ಬಹುಕಾಲ ತೃಪ್ತಿಯನ್ನು ಹೊಂದುತ್ತಾರೆ. ತತ್ವಶ್ರದ್ಧಾನಿಗಳಿಗೆ ಕ್ರಮೇಣ ಮೋಕ್ಷವಾಗುವುದೆಂದಭಿಪ್ರಾಯವು.

ಆಹಾರ್ಯೇಭ್ಯಸ್ಸ್ಪೃಹಯತಿಪರಂಯಃಸ್ವಭಾವಾದಹೃದ್ಯಃ
ಶಸ್ತ್ರಗ್ರಾಹೀಭವತಿಸತತಂವೈರಿಣಾಯಶ್ಚಶಕ್ಯಃ।
ಸರ್ವಾಂಗೇಷುತ್ವಮಸಿಸುಭಗಸ್ತ್ವಂನಶಕ್ಯಃಪರೇಷಾಂ
ತತ್ಕಿಂಭೂಷಾವಸನಕುಸುಮೈಃಕಿಂಚಶಸ್ತ್ರೈರುದಸ್ತ್ರೈಃ
॥ ೧೯ ॥

೧೯. ತಾ॥ ಓ ಜಿನದೇವನೇ ! ಲೋಕದಲ್ಲಿ ಯಾವನು ಸ್ವಭಾವದಿಂದ ಸುಂದರನಲ್ಲವೋ ಅಂಥವನು ಕಾಂತಿ (ಚೆಲುವಿಕೆ)ಯನ್ನುಂಟು ಮಾಡತಕ್ಕ ಸ್ವಭಾವವುಳ್ಳ ಆಭರಣಗಳನ್ನು ಧರಿಸಿಕೊಳ್ಳಬೇಕೆಂದು ಆಸೆಪಡುವನು. ಅವ ಯವಗಳು ಸೌಂದರ್ಯವಾಗಿಲ್ಲದಿದ್ದರಲ್ಲವೇ ಅಂದಕಾಣುವುದಕ್ಕೆ ಒಡವೆಗಳ ನ್ನಿಟ್ಟುಕೊಳ್ಳಬೇಕು. ಮತ್ತು ಯಾವನು ವೈರಿಗಳಿಂದ ಜಯಿಸಲು ಶಕ್ಯನೋ ಅಂತಹವನಿಗೆ ಆತ್ಮಸಂರಕ್ಷಣೆಗೋಸ್ಕರ ಯಾವಾಗಲೂ ಆಯುಧವು ಬೇಕಾಗು ವುದು. ತಾವಾದರೋ ಸರ್ವಾಂಗಗಳಲ್ಲಿಯೂ, ಸ್ವಭಾವದಿಂದಲೇ ಸೌಂದರ್ಯ ವುಳ್ಳವರು ಮತ್ತು ಶತ್ರುಗಳಿಂದ ಜಯಿಸಲಶಕ್ಯರಾದವರು. ಆದುದರಿಂದ

ತಮಗೆ ಆಭರಣ ವಸ್ತ್ರ ಪುಷ್ಪಗಳಿಂದೇನು ಪ್ರಯೋಜನ ? ಉತ್ಕೃಷ್ಟವಾದ ಅಸ್ತ್ರಶಸ್ತ್ರಗಳಿಂದೇನು ಪ್ರಯೋಜನ ? ಸ್ವಾಮಿಯ ಜಾತರೂಪವಾದ ಆಕಾರವೇ ತಮ್ಮ ವೀತರಾಗತ್ವವನ್ನು ಪ್ರಕಟಿಸುತ್ತಿದೆ ಎಂದು ಭಾವವು.

ಇಂದ್ರಸ್ಸೇವಾಂತವಸುಕುರುತಾಂಕಿಂತಯಾಶ್ಲಾಘನಂತೇ
ತಸ್ಯೈವೇಯಂಭವಲಯಕರೀಶ್ಲಾಘ್ಯತಾಮಾತನೋತಿ।
ತ್ವಂನಿಸ್ತಾರೀಜನನಜಲಧೇಸ್ಸಿದ್ಧಿಕಾಂತಾಪತಿಸ್ತ್ವಂ
ತ್ವಂಲೋಕಾನಾಂಪ್ರಭುರಿತಿತವಶ್ಲಾಘ್ಯತೇಸ್ತೋತ್ರಮಿತ್ಥಂ
॥ ೨೦ ॥

೨೦. ತಾ॥ ಓ ವೀತರಾಗಪರಮಾತ್ಮನೇ ! ದೇವೇಂದ್ರನು ತಮಗೆ ಚೆನ್ನಾಗಿ ಸೇವೆಯನ್ನು ಮಾಡಲಿ ಆದರಿಂದ ತಮಗೊಂದು ಶ್ಲಾಘ್ಯತೆಯುಂಟಾಗು ವುದಿಲ್ಲ, ಆ ಇಂದ್ರನು ಮಾಡುವ ಸೇವೆಯು ಆತನ ಭವಬಂಧವನ್ನು ಹೋಗ ಲಾಡಿಸಿಕೊಳ್ಳುವುದಕ್ಕೆ ಕಾರಣವಾಗಿ ಅವನಿಗೇ, ಶ್ಲಾಘ್ಯತೆಯನ್ನುಂಟುಮಾಡು ತ್ತದೆ. ಯಾರು ವೀತರಾಗಪರಮಾತ್ಮನ ಸೇವೆಯನ್ನು ಮಾಡುತ್ತಾರೋ ಅದು ಅವರ ಪುಣ್ಯಬಂಧಕ್ಕೆ ಕಾರಣವಾಗುತ್ತದೆಯೇ ಹೊರತು ಅದರಿಂದ ಭಗವಂತನಿಗೆ ಶ್ಲಾಘ್ಯತೆಯುಂಟಾಗುವುದಿಲ್ಲವೆಂದು ತಾತ್ಪರ್ಯವು. ತಾವಾದರೋ ತಮ್ಮ ಭಕ್ತರನ್ನು ಸಂಸಾರ ಸಮುದ್ರದಿಂದ ದಾಟಿಸತಕ್ಕವರು ಅಂದರೆ ವೀತರಾಗ ಪರಮಾತ್ಮ ಧ್ಯಾನದಿಂದ ಜನ್ಮಕಾರಣವಾದ ರಾಗದ್ವೇಷಗಳು ಕ್ಷಯವನ್ನು ಹೊಂದಿ ಧ್ಯಾನಿಸಿದವರು ವೀತರಾಗ ಪದವಿಯನ್ನು ಪಡೆಯುವರೆಂದಭಿ ಪ್ರಾಯವು. ತಾವು ಮುಕ್ತಿ ಎಂಬ ಕಾಂತೆಗೆ (ಮೋಕ್ಷಸಂಪತ್ತಿಗೆ) ಪತಿಯಾದ ವರು, ಮತ್ತು ತಾವು ಸರ್ವಲೋಕಗಳಿಗೂ ಪ್ರಭುವಾದಂಥವರು, ಆದುದರಿಂದ ಈ ಪ್ರಕಾರ ತಮ್ಮ ಸ್ತೋತ್ರವು ಶ್ಲಾಘಿಸಲ್ಪಡುತ್ತದೆ.

ವೃತ್ತಿರ್ವಾಚಾಮಪರಸದೃಶೀನತ್ವಮನ್ಯೇನತುಲ್ಯಃ
ಸ್ತುತ್ಯುದ್ಗಾರಾಃಕಥಮಿವತತಸ್ತ್ವಯ್ಯಮೀನಃಕ್ರಮಂತೇ।
ಮೈವಂಭೂವಂಸ್ತದಪಿಭಗರ್ವಭಕ್ತಿಪೀಯೂಷಪುಷ್ಟಾ
ಸ್ತೇಭವ್ಯಾನಾಮಭಿಮತಫಲಾಃಪಾರಿಜಾತಾಭವಂತಿ ॥೨೧॥

೨೧. ತಾ॥ ಓ ಭಗವಂತನೇ ! ಈ ಸ್ತೋತ್ರ ರೂಪವಾದ ಮಾತುಗಳ ಪ್ರವೃತ್ತಿಯು ಇತರ ದೇವತೆಗಳ ವಿಷಯದಲ್ಲಿಯೂ ಪ್ರವರ್ತಿಸುತ್ತದೆ ಅಂದರೆ ಇತರರೂ ಇದೇ ಪ್ರಕಾರ ತಮ್ಮ ತಮ್ಮ ಇಷ್ಟ ದೇವರುಗಳನ್ನು ಸ್ತೋತ್ರ ಮಾಡುತ್ತಾರೆ. ಆಯಾಯಾ ಸ್ತೋತ್ರಗಳು ಇದರಂತೆ ಇದ್ದರೂ ಆ ಸ್ತೋತ್ರ ಮಾಡಲ್ಪಟ್ಟ ದೇವರುಗಳು ತಮಗೆ ಸಮಾನರಲ್ಲ. ಆ ದೇವರುಗಳು ರಾಗಾಕ್ರಾಂತ ಸಂಸಾರ್ಯಾತ್ಮಗಳೇ ಹೊರತು ಮುಕ್ತಿಪ್ರದರಾದ ವೀತರಾಗಪರಮಾತ್ಮರಲ್ಲವೆಂದಭಿಪ್ರಾಯವು. ಆ ಕಾರಣದದೆಸೆಯಿಂದ ನಮ್ಮ ಈ ಸ್ತೋತ್ರ ವಚನಗಳು ತಮ್ಮಲ್ಲಿ ಹೇಗೆ ಅವಕಾಶವನ್ನು ಹೊಂದಲಾರವು ? ಓ ಭಗವಂತನೆ! ನಾನು ಈ ಸ್ತೋತ್ರವನ್ನು ಮಾಡಿ ತಮ್ಮಿಂದ ಒಂದು ಫಲವನ್ನು ಪಡೆಯಬೇಕೆಂದು ಸಂಕಲ್ಪಿಸಿ ಸ್ತೋತ್ರಮಾಡಿದವನಲ್ಲ. ಹಾಗಾದರೂ ಆ ನನ್ನ ಸ್ತೋತ್ರ ವಚನಗಳು ತಮ್ಮ ಪಾದಕಮಲಗಳ ಭಕ್ತಿಯೆಂಬ ಅಮೃತರಸದಿಂದ ಪುಷ್ಟಿಯನ್ನು ಹೊಂದಿದವುಗಳಾಗಿ ಭವ್ಯಾತ್ಮರಿಗೆ ಇಷ್ಟ ಸಿದ್ಧಿಯನ್ನುಂಟು ಮಾಡುವ ವಿಷಯದಲ್ಲಿ ಕಲ್ಪವೃಕ್ಷಸಮಾನಗಳಾಗುತ್ತವೆ. ಸ್ವಾಮಿಯು ಸಮಸ್ತ ರಾಗಗಳನ್ನು ಬಿಟ್ಟವರಾದ್ದರಿಂದ ಭಕ್ತನ ಸ್ತೋತ್ರಕ್ಕೆ ಮೆಚ್ಚಿ ಪ್ರೀತಿಯಿಟ್ಟು ಫಲವನ್ನು ಕೊಡುವುದಿಲ್ಲ. ಭಕ್ತರ ಭಕ್ತಿಪೂರ್ವಕವಾದ ಸ್ತೋತ್ರಗಳಿಂದುಂಟಾದ ಪುಣ್ಯಗಳು ಫಲಗಳನ್ನು ಕೊಡುತ್ತವೆ. ಹೇಗೆಂದರೆ ಮರದ ನೆರಳು ಬಿಸಲಿನಲ್ಲಿ ಬಳಲಿದವರನ್ನು ಕರೆದು ಶ್ರಮವನ್ನು ಪರಿಹರಿಸುವುದಿಲ್ಲ. ಮರದ ನೆರಳಿನಲ್ಲಿ ಕುಳಿತವರಿಗೆ ತಾನಾಗಿಯೇ ಶ್ರಮ ಪರಿಹಾರವಾಗುತ್ತದೆ. ಅದರಂತೆ ವೀತರಾಗ ಪರಮಾತ್ಮನ ಸೇವೆಯೇ ಕರ್ಮಬಂಧವನ್ನು ಬಿಡಿಸುವುದೆಂದು ವಾದಿರಾಜರು ತಮ್ಮ ಸ್ತೋತ್ರಸಾಫಲ್ಯವನ್ನು ತಿಳಿಸುತ್ತಾರೆ.

ಕೋಪಾವೇಶೋನತವನತವಕ್ವಾಪಿದೇವಪ್ರಸಾದೋ
ವ್ಯಾಪ್ತಂಚೇತಸ್ತವಹಿಪರಮೋಪೇಕ್ಷಯೈವಾನಪೇಕ್ಷಂ ।
ಆಜ್ಞಾವಶ್ಯಂತದಪಿಭುವನಂಸನ್ನಿಧಿರ್ವೈರಹಾರೀ
ಕ್ವೈವಂಭೂತಂಭುವನತಿಲಕಪ್ರಾಭವಂತ್ವತ್ಪರೇಷು ॥೨೨॥

೨೨. ತಾ॥ ಓ ದೇವನೇ ! ಯಾವ ಪ್ರಾಣಿಯಲ್ಲಿಯೂ ತಮಗೆ ಕೋಪಾವೇಶವಿಲ್ಲ, ಮತ್ತು ಯಾವ ಪ್ರಾಣಿಯಲ್ಲಿಯೂ ತಮಗೆ ಅನುಗ್ರಹ (ಪ್ರೀತಿ)ವೂ ಇಲ್ಲ. ತಮ್ಮ ಮನಸ್ಸು ಸಮಸ್ತ ವಿಷಯಗಳ ಆಶೆಗಳನ್ನು ಬಿಟ್ಟಿರುವುದರಿಂದ ಎಲ್ಲದರಲ್ಲಿಯೂ ಉಪೇಕ್ಷೆ (ಉದಾಸೀನಭಾವ) ಯುಳ್ಳದ್ದಾಗಿದೆ. ಹಾಗಿದ್ದರೂ ಲೋಕವೆಲ್ಲಾ ತಮ್ಮ ಅಜ್ಞೆಗೆ ಅಧೀನವಾಗಿದೆ. ತಮ್ಮ ಹತ್ತಿರವಿರುವ ಮಾತ್ರದಿಂದಲೇ ಪ್ರಾಣಿಗಳಿಗೆ ಸ್ವಾಭಾವಿಕ ದ್ವೇಷಭಾವವು ತಪ್ಪಿ ಹೋಗಿ ಪರಮಶಾಂತಿಯುಂಟಾಗುತ್ತದೆ. ಓ ಲೋಕಕ್ಕೆ ತಿಲಕದಂತೆ ಅಲಂಕಾರ ಸ್ವರೂಪರಾದ ವೀತರಾಗಪರಮಾತ್ಮನೇ ! ಈ ಪ್ರಕಾರವಾದ ಮಾಹಾತ್ಮ್ಯವು ತಮ್ಮಲ್ಲಿ ಹೊರತು ಇತರ ರಾಗಾಕ್ರಾಂತರಾದ ಸಂಸಾರಿ ಆತ್ಮಗಳಲ್ಲಿ ಹೇಗುಂಟಾದೀತು ? ಅವರ ಸ್ತುತಿ ಮಾಡುವುದರಿಂದ ಕರ್ಮಕ್ಷಯವಾಗುವುದಿಲ್ಲವೆಂದು ಭಾವವು.

ದೇವಸ್ತೋತಂತ್ರಿದಿವಗಣಿಕಾಮಂಡಲೀಗೀತಕೀರ್ತಿಂ
ತೋತೂರ್ತಿತ್ವಾಂಸಕಲವಿಷಯಜ್ಞಾನಮೂರ್ತಿಂ ಜನೋಯಃ
ತಸ್ಯಕ್ಷೇಮಂನಪದಮಟತೋಜಾತುಜೋಹೂರ್ತಿಪಂಥಾ
ಸ್ತತ್ತ್ವಗ್ರಂಥಸ್ಮರಣವಿಷಯೇನೈಷಮೋಮೂರ್ತಿಮರ್ತ್ಯಃ
॥೨೩॥

೨೩. ತಾ॥ ಓ ವೀತರಾಗಪರಮಾತ್ಮನೇ ! ಅಪ್ಸರಸ್ತ್ರೀಯರ ಸಮೂಹಗಳಿಂದ ಗಾನಮಾಡಲ್ಪಟ್ಟ ಕೀರ್ತಿಯುಳ್ಳವರಾಗಿಯೂ, ಸಮಸ್ತ ಲೋಕಾಲೋಕಗಳನ್ನೂ ಪ್ರತ್ಯಕ್ಷೀಕರಿಸುವ ಕೇವಲಜ್ಞಾನವೇ ಮೂರ್ತಿಯಾಗಿ ವುಳ್ಳವರಾಗಿಯೂ, ಇರುವ ತಮ್ಮನ್ನು ಯಾವಜನವು ಸ್ತೋತ್ರ ಮಾಡಬೇಕೆಂದು ತ್ವರೆಪಡುತ್ತದೆಯೋ ಸ್ವರ್ಗಾದಿ ಸಂಪತ್ತನ್ನಾಗಲಿ, ಮೋಕ್ಷವನ್ನಾಗಲಿ ಪಡೆಯಬೇಕೆಂದು ಧರ್ಮ ಮಾರ್ಗದಲ್ಲಿ ಪ್ರವರ್ತಿಸಿರುವ ಆ ಜನಕ್ಕೆ ಆ ಮಾರ್ಗವು ಎಂದಿಗೂ ತಪ್ಪಿ ಹೋಗುವುದಿಲ್ಲ. (ಕುಟಿಲಮಾರ್ಗವಾಗುವುದಿಲ್ಲ) ಮತ್ತು ಜೀವಾದಿ ತತ್ತ್ವಜ್ಞಾನವು ಅದರ ಸ್ಮರಣವು ಇವುಗಳಲ್ಲಿ ಅಂತಹ ಜನವು ಯಾವಾಗಲೂ ಸಂದೇಹಪಡುವುದಿಲ್ಲವು. (ಭ್ರಾಂತಿಪಡುವುದಿಲ್ಲ.)

ಚಿತ್ತೇಕುರ್ವನ್ನಿರವಧಿಸುಖಜ್ಞಾನದೃಗ್ವೀರ್ಯರೂಪಂ
ದೇವತ್ವಾಂಯಃಸಮಯನಿಯಮಾದಾದರೇಣಸ್ತವೀತಿ ।
ಶ್ರೇಯೋಮಾರ್ಗಂಸಖಲುಸುಕೃತೀತಾವತಾಪೂರಯಿತ್ವಾ
ಕಲ್ಯಾಣಾನಾಂಭವತಿವಿಷಯಃಪಂಚಧಾಪಂಚಿತಾನಾಂ ॥೨೪॥

೨೪. ತಾ॥ ಓ ವೀತರಾಗಪರಮಾತ್ಮನೇ ! ಯಾವಮನುಷ್ಯನು ಅನಂತ ಜ್ಞಾನ, ಅನಂತ ದರ್ಶನ, ಅನಂತ ವೀರ್ಯ, ಅನಂತ ಸುಖ ಇವುಗಳೇ ಸ್ವರೂಪವಾಗಿವುಳ್ಳ ತಮ್ಮನ್ನು ಮನಸ್ಸಿನಲ್ಲಿಟ್ಟು ಶಾಸ್ತ್ರದಲ್ಲಿ ಹೇಳಿರುವ ವಿಧಿಪ್ರಕಾರವಾಗಿ ಭಕ್ತಿಯಿಂದ ಸ್ತೋತ್ರಮಾಡುತ್ತಾನೋ, ಅಂತಹ ಮನುಷ್ಯನು ಆ ಭಕ್ತಿಪೂರ್ವಕವಾದ ಸ್ತೋತ್ರಮಾಡಿದ ಮಾತ್ರದಿಂದಲೇ ಸಮಸ್ತವಾದ ಇಹಪರಲೋಕಗಳ ಭೋಗಗಳನ್ನೆಲ್ಲಾ ಅನುಭವಿಸಿ ಪೂರ್ತಿ ಮಾಡಿ ಶಾಸ್ತ್ರದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿರುವ ಪಂಚಕಲ್ಯಾಣಗಳಿಗೂ ಪಾತ್ರನಾಗುತ್ತಾನೆ. ಜಿನಭಕ್ತಿ ಸ್ತೋತ್ರಪೂಜಾದಿಗಳಿಂದ ಸಕಲ ಶ್ರೇಯಸ್ಸೂ ಸಿದ್ಧಿಸುತ್ತದೆಂದಭಿಪ್ರಾಯವು.

ಭಕ್ತಿಪ್ರಹ್ವಮಹೇಂದ್ರಪೂಜಿತಪದತ್ವತ್ಕೀರ್ತನೇನಕ್ಷಮಾಃ
ಸೂಕ್ಷ್ಮಜ್ಞಾನದೃಶೋಽಪಿಸಂಯಮಭೃತಃಕೇಹಂತ
ಮಂದಾವಯಂ ।
ಅಸ್ಮಾಭಿಃಸ್ತವನಚ್ಛಲೇನತುಪರಸ್ತ್ವಯ್ಯಾದರಸ್ತನ್ಯತೇ
ಸ್ವಾತ್ಮಾಧೀನಸುಖೈಷಿಣಾಂಸಖಲುನಃಕಲ್ಯಾಣಕಲ್ಪದ್ರುಮಃ
॥೨೫॥

೨೫. ತಾ॥ ಭಕ್ತಿಯಿಂದ ಬಗ್ಗಿರುವ ದೇವೇಂದ್ರರುಗಳಿಂದ ಪೂಜಿಸಲ್ಪಟ್ಟ ಪಾದಾರವಿಂದವುಳ್ಳ ಸ್ವಾಮಿಯೇ ! ತಮ್ಮನ್ನು ಸ್ತೋತ್ರಮಾಡುವ ವಿಷಯದಲ್ಲಿ ಸೂಕ್ಷ್ಮಜ್ಞಾನದೃಷ್ಟಿಯುಳ್ಳ, ಸಂಯಮಧರರು (ಯತಿಗಳು) ಕೂಡಾ ಅಸಮರ್ಥರಾಗಿರುವಲ್ಲಿ ಮೂಢರಾದ ನಾವು ಎಷ್ಟುಮಾತ್ರದವರು ? ನಾವು ಸ್ವಲ್ಪವೂ ಅನರ್ಹರೆಂದು ಭಾವವು. ಹೀಗೆ ತಿಳಿದರೂ ಏತಕ್ಕೆ ಸ್ತೋತ್ರ ಮಾಡುತ್ತೀರೆಂದರೆ, ನಾವು ತಮ್ಮ ಸ್ತೋತ್ರವನ್ನು ಮಾಡುವ ನೆಪದಿಂದ ತಮ್ಮಲ್ಲಿ ಭಕ್ತಿಯನ್ನು ವ್ಯಕ್ತಪಡಿಸುತ್ತೇವೆ. ಆ ಭಕ್ತಿಪ್ರಕಟನೆಯು ಪರಾಧೀನವಾದ ಸಂಸಾರಸುಖಗಳನ್ನು ಬಿಡಿಸಿ ಆತ್ಮಾಧೀನವಾದ ನಿತ್ಯಸುಖರೂಪವಾದ ಮೋಕ್ಷವನ್ನಪೇಕ್ಷಿಸುವ ನಮ್ಮಂಥವರಿಗೆ ಆತ್ಮಕಲ್ಯಾಣವನ್ನು ಕೊಡುವ ಕಲ್ಪವೃಕ್ಷವಲ್ಲವೇ ? ಇದರಿಂದ ಭಕ್ತಿಯ ಅತಿಶಯವು ತೋರುತ್ತದೆ.

ವಾದಿರಾಜಮನುಶಾಬ್ದಿಕಲೋಕೋ
ವಾದಿರಾಜಮನುತಾರ್ಕಿಕಸಿಂಹಃ ।
ವಾದಿರಾಜಮನುಕಾವ್ಯಕೃತಸ್ತೇ
ವಾದಿರಾಜಮನುಭವ್ಯಸಹಾಯಃ ॥ ೨೬ ॥

೨೬. ತಾ॥ ಸಮಸ್ತ ವ್ಯಾಕರಣಶಾಸ್ತ್ರಪಂಡಿತರೂ ಈ ಏಕೀಭಾವ ಸ್ತೋತ್ರವನ್ನು ಮಾಡಿದ ವಾದಿರಾಜರಿಗಿಂತಲೂ ಕೀಳಾದವರು. ಸಮಸ್ತ ತರ್ಕಶಾಸ್ತ್ರಪಂಡಿತರೂ ವಾದಿರಾಜರಿಗಿಂತ ಕೀಳಾದವರು. ಉತ್ಕೃಷ್ಟಕಾವ್ಯಗಳನ್ನು ಮಾಡುವ ಕವಿಗಳೂ ವಾದಿರಾಜರಿಗಿಂತ ಕೀಳಾದವರು. ಮತ್ತು ಭವ್ಯಾತ್ಮರಿಗೆ ಸಹಾಯವನ್ನು ಮಾಡತಕ್ಕವರೂ ಕೂಡ ವಾದಿರಾಜರಿಗಿಂತಲೂ ಕೀಳಾದವರೇ ಹೊರತು, ಯಾರೂ ಇವರಿಗೆ ಸಮಾನರಿಲ್ಲ. "ಓ ಪಂಡಿತಮ್ಮನ್ಯರಾದ ವಿದ್ವಾಂಸರುಗಳಿರಾ ! ಸಕಲ ವಿದ್ಯಾಪಂಡಿತರಾದ ವಾದಿರಾಜರಿಂದ ವಿರಚಿತವಾದ ಈ ಸ್ತೋತ್ರದಲ್ಲಿ ನೀವುಗಳು ಮಾತ್ಸರ್ಯದಿಂದ ದೋಷವನ್ನೇ ಹುಡುಕಬೇಡಿರಿ" ಎಂದು ಲೋಕಕ್ಕೆ ತಿಳಿಸುವುದಕ್ಕೋಸ್ಕರ ಆತ್ಮಶ್ಲಾಘೆಯಂತೆ ತೋರುತ್ತಿರುವ ಈ ಕವಿಶ್ಲಾಘಾರೂಪವಾದ ಶ್ಲೋಕವು ರಚಿಸಲ್ಪಟ್ಟಿದೆಯೇ ಹೊರತು ಆತ್ಮಪ್ರಶಂಸೆಯಲ್ಲ. ಇದು ವಸ್ತುಸ್ಥಿತಿಯೆಂದು ಭವ್ಯಾತ್ಮರು ಭಾವಿಸಲಿ.

॥ ಇತಿ ವಾದಿರಾಜಕೃತಂ ॥

ಏಕೀಭಾವಸ್ತೋತ್ರಂ.

॥ ಶ್ರೀ ಧನಂಜಯ ಕವಿಕೃತಂ ॥

ವಿಷಾಪಹಾರಸ್ತೋತ್ರಂ

ಸ್ವಾತ್ಮಸ್ಥಿತಃಸರ್ವಗತಃಸಮಸ್ತ
ವ್ಯಾಪಾರವೇದೀವಿನಿವೃತ್ತಸಂಗಃ ।
ಪ್ರವೃದ್ಧಕಾಲೋಪ್ಯಜರೋವರೇಣ್ಯಃ
ಪಾಯಾದಪಾಯಾತ್ಪುರುಃಪುರಾಣಃ ॥ ॥ ೧ ॥

೧. ತಾ॥ ಶ್ರೀ ಧನಂಜಯಕವಿಯು ಆದಿತೀರ್ಥಂಕರರಾದ ಶ್ರೀ ವೃಷಭಸ್ವಾಮಿಯು ನಮ್ಮನ್ನು (ಸಮಸ್ತ ಸಂಸಾರಿಜೀವಗಳನ್ನು ನಾನಾ ದುಃಖಾಸ್ಪದವೆನಿಸಿದ ಕರ್ಮಬಂಧವೆಂಬ ಅಪಾಯವನ್ನು) ತಪ್ಪಿಸಿ ರಕ್ಷಿಸಬೇಕೆಂಬುದಾಗಿ ಸ್ತೋತ್ರದ ಮೊದಲಿನಲ್ಲಿ ಶಿಷ್ಟಾಚಾರ ಪ್ರಾಪ್ತವಾದ ಮಂಗಳವನ್ನು ಪ್ರಾರ್ಥಿಸುತ್ತಾರೆ. ಆದಿತೀರ್ಥಂಕರರು ಎಂತಹವರೆಂದರೆ ಅನಂತ ಸುಖಜ್ಞಾನಾದಿ ಗುಣಗಳಿಂದ ಪರಿಪೂರ್ಣವಾದ ಪರಿಶುದ್ಧ ಪರಮಾತ್ಮರೂಪ ಪ್ರಾಪ್ತಿಯನ್ನು ಹೊಂದಿದವರು ಅರ್ಹಂತ್ಯಪದವಿಯಲ್ಲಿ ಜ್ಞಾನಜ್ಞೇಯ ಮೂಲಕ ಸರ್ವವ್ಯಾಪಿಯಾದವರು, ಸಮಸ್ತ ವ್ಯಾಪಾರವನ್ನೂ ತಿಳಿದ ಸರ್ವಜ್ಞ ಸ್ವರೂಪರಾದವರು, ಸರ್ವಸಂಗಪರಿತ್ಯಾಗವನ್ನು ಮಾಡಿದವರು ಬಹಳ ವೃದ್ಧಿ ಹೊಂದಿದ ಕಾಲವುಳ್ಳವರಾಗಿದ್ದರೂ ಮುಪ್ಪಿಲ್ಲದವರು, (ಜನ್ಮಜರಾಮರಣಾದಿ ದುಃಖಗಳಿಲ್ಲದವರು) ಸರ್ವ ದೇವಾದಿ ಪೂಜಿತರಾದವರು, ಇಂತಹ ಪುರಾತನ ಪುರುಷರಾದಂತಹ ಶ್ರೀ ವೃಷಭಸ್ವಾಮಿಯು ಅಪಾಯಭೂತವಾದ ಕರ್ಮಬಂಧವನ್ನು ಬಿಡಿಸಿ ಸಮಸ್ತಾತ್ಮಗಳನ್ನು ಕಾಪಾಡಲಿ ಎಂಬುದಾಗಿ ಮಂಗಳ ಪ್ರಾರ್ಥನಾ.

ಪರೈರಚಿಂತ್ಯಂಯುಗಭಾರಮೇಕಃ
ಸ್ತೋತುಂವಹನ್ಯೋಗಿಭಿರಪ್ಯಶಕ್ಯಃ ।
ಸ್ತುತ್ಯೋದ್ಯಮೇಸಾವೃಷಭೋನಭಾನೋಃ
ಕಿಮಪ್ರವೇಶೇವಿಶತಿಪ್ರದೀಪಃ ॥ ॥ ೨ ॥

೨. ತಾ॥ ಯಾವ ಶ್ರೀ ವೃಷಭಸ್ವಾಮಿಯವರು ಮೊದಲು ಈ ಭೂಲೋಕದಲ್ಲಿ ಸಮಸ್ತ ಪ್ರಜೆಗಳಿಗೂ, ಸರ್ವೇಂದ್ರಿಯಸುಖಕರವಾದ ಭೋಗೋಪಭೋಗವಸ್ತುಗಳನ್ನು ಯಥೇಚ್ಛವಾಗಿ ಕೊಟ್ಟು ಕಾಪಾಡುತ್ತಿದ್ದ ದಶಾಂಗಕಲ್ಪವೃಕ್ಷಗಳು, ಕಾಲಮಹಿಮೆಯಿಂದ ನಷ್ಟವಾಗಲು ಇತರರಿಂದ ಅಚಿಂತ್ಯವಾದ ಅಸಿ, ಮಷಿಕೃಷಿ, ವಾಣಿಜ್ಯ, ವಿದ್ಯಾ, ಶಿಲ್ಪಗಳೆಂಬ ಆರು ಪ್ರಕಾರವಾದ ಯುಗಭಾರ (ಜೀವನೋಪಾಯ)ವನ್ನು ತಿಳಿಸಿ ರಕ್ಷಿಸಿದ, ಮತ್ತು ಮಹಾಯೋಗಿಗಳಿಂದಲೂ ಕೂಡ ಸ್ತೋತ್ರಮಾಡಲಶಕ್ಯರಾದ ಈ ಆದಿ ಜಿನೇಂದ್ರರನ್ನು ಈಗ ನಾನು ಸ್ತೋತ್ರಮಾಡುತ್ತೇನೆ. ಯೋಗಿಗಳಿಗೂ ಮಾಡಲಶಕ್ಯವಾದ ಆದಿಜಿನೇಂದ್ರ ಸ್ತೋತ್ರದಲ್ಲಿ ನೀನು ಹೇಗೆ ಪ್ರವೇಶಿಸುವೆ ಎಂದರೆ, ಸೂರ್ಯನು ಪ್ರಕಾಶಿಸದೆಯಿರುವಲ್ಲಿ ದೀಪವು ಪ್ರವೇಶಿಸಿ ಪ್ರಕಾಶಿಸುವುದಿಲ್ಲವೇನು ? ಹಾಗೆಯೇ ನಾನು ಅಂತಹ ಅಶಕ್ಯಸ್ತೋತ್ರದಲ್ಲಿ ಪ್ರವೇಶಿಸಬಹುದೆಂದಭಿಪ್ರಾಯವು.

ತತ್ಯಾಜಶಕ್ರಃಶಕನಾಭಿಮಾನಂ
ನಾಹಂತ್ಯಜಾಮಿಸ್ತವನಾನುಬಂಧಂ ।
ಸ್ವಲ್ಪೇನಬೋಧೇನತತೋಧಿಕಾರ್ಥಂ
ವಾತಾಯನೇನೇವನಿರೂಪಯಾಮಿ ॥ ॥ ೩ ॥

೩. ತಾ॥ ಓ ಆದಿಜಿನೇಂದ್ರರೇ ! ತಮ್ಮನ್ನು ಸ್ತೋತ್ರಮಾಡುವ ವಿಷಯದಲ್ಲಿ ಮಹಾ ಶಕ್ತನಾಗಿದ್ದರೂ ದೇವೇಂದ್ರನೂ ಕೂಡ ತಾನು ಸ್ತೋತ್ರ ಮಾಡಲು ಸಮರ್ಥನೆಂದು ಗರ್ವಪಡಲಿಲ್ಲ. ಹೀಗಿದ್ದರೂ ನಾನು ತಮ್ಮನ್ನು ಸ್ತುತಿಸುವುದನ್ನು ಬಿಡುವುದಿಲ್ಲ. ನಾನು ಅಲ್ಪಜ್ಞಾನವುಳ್ಳವನಾಗಿದ್ದರೂ ಅದಕ್ಕಿಂತ ಅಧಿಕವಾದ ಅರ್ಥವನ್ನು ತಿಳಿಸುತ್ತೇನೆ. ಹೇಗೆಂದರೆ, ಒಂದು

ಗವಾಕ್ಷದಿಂದ ಪರ್ವತವನ್ನಾದರೂ ನೋಡಬಹುದಲ್ಲವೇ ? ಸಣ್ಣ ಕಿಟಕಿಯಿಂದ ನೋಡಿದರೆ ದೊಡ್ಡವಸ್ತುವೂ ಕೂಡ ಕಾಣುತ್ತದೆಂದರ್ಥವು.

ತ್ವಂವಿಶ್ವದೃಶ್ವಾಸಕಲೈರದೃಶ್ಯೋ
ವಿದ್ವಾನಶೇಷಂನಿಖಿಲೈರವೇದ್ಯಃ ।
ವಕ್ತುಂಕಿಯರ್ಾಕೀದೃಶಇತ್ಯಶಕ್ಯಃ
ಸ್ತುತಿಸ್ತತೋಽಶಕ್ತಿಕಥಾತವಾಸ್ತು ॥ ॥ ೪ ॥

೪. ತಾ॥ ಓ ಆದಿಜಿನೇಂದ್ರರೇ ! ತಾವು ಕೇವಲಜ್ಞಾನವೆಂಬ ನೇತ್ರದಿಂದ ಸರ್ವವನ್ನೂ ನೋಡುತ್ತೀರಿ, ಆದರೆ ತಾವು ಎಲ್ಲರಿಗೂ ನೋಡುವುದಕ್ಕೆ ಶಕ್ಯರಲ್ಲ. (ಎಲ್ಲರೂ ತಮನ್ನು ನೋಡಲು ಶಕ್ಯರಲ್ಲ.) ತಾವು ಸಮಸ್ತವನ್ನೂ ತಿಳಿದವರು, ಸರ್ವರಿಂದಲೂ ತಮ್ಮನ್ನು ತಿಳಿಯಲಾಗುವುದಿಲ್ಲ. ಈ ಮೂಢ ಲೋಕವು ಅನಂತಜ್ಞಾನಾದಿಗುಣ ಪರಿಪೂರ್ಣವಾದ ಪರಮಾತ್ಮಸ್ವರೂಪರಾದ ತಮ್ಮನ್ನು ತಿಳಿಯಲು ಶಕ್ತವಲ್ಲ. ತಾವು ಎಷ್ಟುಪರಿಮಾಣವುಳ್ಳವರು, ಮತ್ತು ತಮ್ಮ ಸ್ವರೂಪವು ಯಾವ ಪ್ರಕಾರವಾದದ್ದೆಂದು ಹೇಳುವುದಕ್ಕೆಸಾಧ್ಯವಾಗಿದೆ. ಆದುದರಿಂದ ಅಶಕ್ತಿಯೆಂಬ ಮಾತೇ ತಮಗೆ ಸ್ತೋತ್ರವಾಗಿರಲಿ. ಅಂದರೆ ತಮ್ಮ ಸ್ತೋತ್ರವನ್ನು ಮಾಡುವುದಕ್ಕೆ ನಮಗೆ ಶಕ್ತಿಯಿಲ್ಲವೆಂಬ ಮಾತೇ ತಮಗೆ ಸ್ತೋತ್ರರೂಪವಾಗಿ ಪರಿಣಮಿಸಲೆಂದು ಕವಿಯ ಭಾವವು.

ವ್ಯಾಪೀಡಿತಂಬಾಲಮಿವಾತ್ಮದೋಷೈ
ರುಲ್ಲಾಘತಾಂಲೋಕಮವಾಪಿಪಸ್ತ್ವಂ ।
ಹಿತಾಹಿತಾನ್ವೇಷಣಮಾಂದ್ಯಭಾಜಃ
ಸರ್ವಸ್ಯಜಂತೋರಸಿಬಾಲವೈದ್ಯಃ ॥ ॥ ೫ ॥

೫. ತಾ॥ ಓ ವೀತರಾಗ ಪರಮಾತ್ಮನೇ ! ಬಾಲಕನಂತೆ ತನ್ನ ದೋಷ (ಪಾಪಕೃತ್ಯ)ಗಳಿಂದ ಬಾಧಿಸಲ್ಪಟ್ಟ (ರೋಗದಲ್ಲಿ ನರಳುತ್ತಿರುವ) ಈ ಸಂಸಾರಿಲೋಕವನ್ನು ವೈದ್ಯನು ಯಾವಪ್ರಕಾರ ಒಳ್ಳೆಯ ಸಿದ್ಧೌಷಧವನ್ನು ಕೊಟ್ಟು ಹಿತಾಹಿತವನ್ನು ತಿಳಿಯದ ಪ್ರಾಣಿಯನ್ನು (ರೋಗಿಯನ್ನು) ರೋಗಗಳಿಂದ ಬಿಡುಗಡೆ ಮಾಡುವನೋ ಹಾಗೆ ತಾವು ಮೋಕ್ಷಸಿದ್ಧಿಗೆ ಸಾಧಕ

ವಾದ ಧರ್ಮೋಪದೇಶವನ್ನು ಮಾಡುತ್ತೀರಾದುದರಿಂದ ಜಗತ್ತಿಗೇ ಬಾಲ ವೈದ್ಯರಾಗಿದ್ದೀರಿ.

ದಾತಾನಹರ್ತಾದಿವಸಂವಿವಸ್ವಾ
ನದ್ಯಶ್ವ ಇತ್ಯಚ್ಯುತದರ್ಶಿತಾಶಃ ।
ಸವ್ಯಾಜಮೇವಂಗಮಯತ್ಯಶಕ್ತಃ
ಕ್ಷಣೇನದತ್ಸೇಭಿಮತಂನತಾಯ ॥ ॥ ೬ ॥

೬. ತಾ॥ ಓ ಸ್ವಾಮಿಯೇ ! ಸೂರ್ಯನು ಕೊಡುವುದಿಲ್ಲ, ತೆಗೆದು ಕೊಳ್ಳುವುದೂ ಇಲ್ಲ, ಸುಮ್ಮನೆ ಈ ಹೊತ್ತು, ನಾಳೆಯೆಂಬುದಾಗಿ ಆಶೆಯನ್ನು ಮಾತ್ರ ತೋರಿಸಿ ನೆಪವಾಗಿ ಕಾಲವನ್ನು ಕಳೆಯುತ್ತಾನೆ. ಅಂದರೆ ಇಂದು ನಾಳೆ ಎಂಬ ಮಾತು ಲೋಕದಲ್ಲಿ ಸೂರ್ಯೋದಯ ಸೂರ್ಯಾಸ್ತಮಾನ ಮೂಲಕವಾಗಿರುವುದರಿಂದ ಲೋಕದಲ್ಲಿ ಒಬ್ಬರಿಗೆ ಒಂದು ವಸ್ತುವನ್ನು ಕೊಡುವುದಕ್ಕೆ ಶಕ್ತಿಯಿಲ್ಲದ ಮನುಷ್ಯನು ಹೇಗೆ ಈಗ ಕೊಡುತ್ತೇನೆ ನಾಳೆ ಕೊಡುತ್ತೇನೆಂಬುದಾಗಿ ಈಹೊತ್ತು ನಾಳೆ ಎಂಬ ಕಾಲವನ್ನೇ ನೆಪಮಾಡಿಕೊಂಡು ಒಂದು ವಸ್ತುವನ್ನು ಕೊಡದೇ ತೆಗೆದುಕೊಳ್ಳದೇ ಕಾಲವನ್ನು ತಳ್ಳುವನೋ ಹಾಗೆ ಸೂರ್ಯನೂ ಕೂಡ ಕಾಲವನ್ನು ತಳ್ಳುವ ದೇವನಾಗಿದ್ದಾನೆಯೇ ಹೊರತು ಯಾರಿಗೇನನ್ನೂ ಕೊಡಲು ಮತ್ತು ತೆಗೆಯಲು ಶಕ್ತನಲ್ಲ ಎಂದರ್ಥವು. ಓ ವೀತರಾಗ ಪರಮಾತ್ಮನೇ ! ತಾವಾದರೋ ನಮಸ್ಕರಿಸುವ ಭಕ್ತನಿಗೆ ಒಂದು ಕ್ಷಣಮಾತ್ರದಲ್ಲಿ ಇಷ್ಟಾರ್ಥವನ್ನು ಕೊಡುತ್ತೀರಿ ಇಂತಹ ಶಕ್ತಿಯು ಬೇರೆ ದೇವತೆಗಳಿಗಿಲ್ಲವಾದುದರಿಂದ ತಮ್ಮ ಪಾದಭಕ್ತಿಯೇ ಸಮಸ್ತ ಇಷ್ಟಗಳನ್ನು ಕೊಡುತ್ತದೆಂದು ಭಾವವು.

ಉಪೈತಿಭಕ್ತ್ಯಾಸುಮುಖಸ್ಸುಖಾನಿ
ತ್ವಯಿಸ್ವಭಾವಾದ್ವಿಮುಖಶ್ಚ ದುಃಖಂ ।
ಸದಾವದಾತದ್ಯುತಿರೇಕರೂಪ
ಸ್ತಯೋಸ್ತ್ವಮಾದರ್ಶಇವಾವಭಾಸಿ ॥ ॥ ೭ ॥

೭. ತಾ॥ ಓ ಜಿನರಾಜನೇ ! ಯಾವನು ತಮ್ಮಲ್ಲಿ ಭಕ್ತಿಯಿಂದ ಸುಮುಖ (ಸಂತೋಷದಿಂದ ಮಂದಹಾಸದೊಡಗೂಡಿದ ಮುಖ) ನಾಗಿ ತಮ್ಮ

ಸಮೀಪವನ್ನು ಹೊಂದುತ್ತಾನೋ ಅಂತಹ ಭಕ್ತನು ಐಹಿಕಾಮುಷ್ಮಿಕ ಸಕಲ ಸುಖಗಳನ್ನು ಪಡೆಯುವನು. ತಮ್ಮಲ್ಲಿ ಯಾವ ಅಭವ್ಯಾತ್ಮನು ಸ್ವಭಾವ ದಿಂದಲೇ ವಿಮುಖನೋ (ಅನಾದರದಿಂದ ತಮ್ಮ ದರ್ಶನವನ್ನೇ ಮಾಡ ದಿರುವನೊ) ಅಂತಹವನು (ನರಕತಿರ್ಯಂಚಗತಿಗಳಲ್ಲಿ) ಘೋರದುಃಖಗಳನ್ನು ಅನುಭವಿಸುವನು. ತಾವು ರಾಗದ್ವೇಷಾದಿ ಸಕಲ ದೋಷರಹಿತ ನಿರ್ಮಲ ವೀತರಾಗ ಪರಮಾತ್ಮಸ್ವರೂಪರಾದುದರಿಂದ ಭಕ್ತನಲ್ಲಿಯೂ, ಅಭಕ್ತ ನಲ್ಲಿಯೂ, ಯಾವಾಗಲೂ ನಿಷ್ಪಕ್ಷಪಾತರಾಗಿ ಒಂದೇರೀತಿಯಾಗಿರುವುದರಿಂದ ನಿರ್ಮಲವಾದ ಕನ್ನಡಿಯಂತೆ ಪ್ರಕಾಶಿಸುತ್ತೀರಿ. ಕನ್ನಡಿಯು ಮುಖದಲ್ಲಿ ವಿಕಾರವಿದ್ದರೆ ಪ್ರತಿಬಿಂಬದಲ್ಲಿಯೂ ವಿಕಾರವನ್ನೇ ತೋರಿಸುವುದು. ಮುಖ ದಲ್ಲಿ ಸೌಂದರ್ಯವಿದ್ದರೆ ಸೌಂದರ್ಯವನ್ನೇ ತೋರಿಸುವುದು. ಸೌಂದರ್ಯ ವಿಕಾರಗಳುಪ್ರತಿಫಲಿಸುವ ಪದಾರ್ಥನಿಷ್ಠವಾದುವುಗಳೇ ಹೊರತು, ದರ್ಪಣ ನಿಷ್ಠವಾದುವುಗಳಲ್ಲ. ಅದರಂತೆ ಸುಖದುಃಖಾನುಭವಗಳು ಭಕ್ತಾಭಕ್ತರ ಪರಿಣಾಮನಿಷ್ಠವಾದವುಗಳೆಂದು ಭಾವವು.

ಅಗಾಧತಾಬ್ಧೇಸ್ಸಯತಃಪಯೋಧಿ
ರ್ಮೇರೋಶ್ಚ ತುಂಗಾಪ್ರಕೃತಿಸ್ಸಯತ್ರ ।
ದ್ಯಾವಾಪೃಥಿವ್ಯೋಃಪೃಥುತಾತಥೈವ
ವ್ಯಾಪತ್ವದೀಯಾಭುವನಾಂತರಾಣಿ ॥ ॥ ೮ ॥

೮. ತಾ॥ ಓ ಜಿನನಾಥರೇ ! ಸಮುದ್ರಕ್ಕೆ ಆಳವೆಂಬ ಗುಣವು ಸ್ವಭಾವ ವಾಗಿದೆ. ಎತ್ತರವಾಗಿರುವುದು ಮೇರುಪರ್ವತಕ್ಕೆ ಸ್ವಭಾವಗುಣವಾಗಿದೆ. ಭೂಮಿ ಮತ್ತು ಆಕಾಶಗಳಿಗೆ ದಪ್ಪವಾಗಿರುವಿಕೆ (ವಿಶಾಲತೆ) ಎಂಬ ಗುಣವು ಸ್ವಭಾವವಾಗಿದೆ. ಈ ಗುಣಗಳು ಆಯಾಯ ವಸ್ತುಗಳಲ್ಲಿ ಸ್ವಭಾವವಾಗಿರು ವಂತೆ ತಮ್ಮ ಗಂಭೀರಭಾವವೂ, ಉನ್ನತತ್ವ (ಎಲ್ಲರಿಗಿಂತಲೂ ಉತ್ಕೃಷ್ಟ ರಾಗಿರುವ) ಗುಣವೂ, ಕೇವಲಜ್ಞಾನಮೂಲಕ ಲೋಕಾಂತರ (ಸ್ವರ್ಗಾದಿ)ಗಳನ್ನು ವ್ಯಾಪಿಸುವ ಗುಣವೂ, ತಮ್ಮ ಸ್ವಭಾವಗುಣಗಳಾಗಿವೆ. ಆದುದರಿಂದ ಮಾತಿಗೂ ಮನಸ್ಸಿಗೂ ಅಗೋಚರವಾದ ತಮ್ಮ ಮಹಾತ್ಮ್ಯವನ್ನು ಯಾರು ಹೊಗಳಲು ಶಕ್ತರಾದಾರೆಂದಭಿಪ್ರಾಯವು. ಅನಂತಜ್ಞಾನವೇ ಆಕಾರವಾಗಿವುಳ್ಳ ಪರಮಾತ್ಮ

ಸ್ವರೂಪರಾದ ಸ್ವಾಮಿಯಲ್ಲಿರುವ ಕೇವಲಜ್ಞಾನವು ಸರ್ವವ್ಯಾಪಕವೆಂದು ಮುಖ್ಯಭಾವವು.

ತವಾನವಸ್ಥಾ ಪರಮಾರ್ಥತತ್ವಂ
ತ್ವಯಾನಗೀತಃಪುನರಾಗಮಶ್ಚ ।
ದೃಷ್ಟಂವಿಹಾಯತ್ವಮದೃಷ್ಟಮೈಷೀ
ರ್ವಿರುದ್ಧವೃತ್ತೋಽಪಿಸಮಂಜಸಸ್ತ್ವಂ ॥ ॥ ೯ ॥

೯. ತಾ॥ ಓ ಜಿನೇಶ್ವರನೇ ! ತಮ್ಮ ಪರಮಾರ್ಥ ತತ್ವವು ಅವಧಿ ಯಿಲ್ಲದ್ದಾಗಿದೆ. ಅಂದರೆ ಸ್ಯಾದಸ್ತಿ, ಸ್ಯಾನ್ನಾಸ್ತಿ, ಸ್ಯಾದಸ್ತಿನಾಸ್ತಿ, ಸ್ಯಾದ ವಕ್ತವ್ಯಂ ಸ್ಯಾದಸ್ತ್ಯವಕ್ತವ್ಯಂ, ಸ್ಯಾನ್ನಾಸ್ತ್ಯವಕ್ತವ್ಯಂ, ಸ್ಯಾದಸ್ತಿನಾಸ್ತ್ಯ ವಕ್ತವ್ಯಂ ಎಂಬೀ ಸ್ಯಾದ್ವಾದನಯದಿಂದ ಜೀವಾದಿಸಮಸ್ತತತ್ವಗಳೂ, ಅಸ್ತಿತ್ವನಾಸ್ತಿತ್ವಾದಿವಿರುದ್ಧ ಸ್ವಭಾವವುಳ್ಳವುಗಳಂತೆ ತೋರುತ್ತವೆ. ಒಂದೊಂದೇ ಸ್ವಭಾವವುಳ್ಳವುಗಳಾಗಿಲ್ಲ. (ಇದು ಜೀವಾದಿತತ್ವಗಳ ನಿಜ ಸ್ಥಿತಿಯು) ತಾವು ಮುಕ್ತಿಯನ್ನು ಹೊಂದಿದ ಆತ್ಮನು ಪುನಃ ಈ ಲೋಕಕ್ಕೆ ಬರುತ್ತಾನೆಂದು ಹೇಳಲಿಲ್ಲ. ಪ್ರತ್ಯಕ್ಷವಾಗಿರುವ ಸಮಸ್ತವನ್ನೂ ಪರಿತ್ಯಜಿಸಿ, ಅಪ್ರತ್ಯಕ್ಷವಾದದ್ದನ್ನು ಅಪೇಕ್ಷಿಸಿದಿರಿ, ಇದು ಲೋಕವಿರುದ್ಧವಾದ ವ್ಯಾಪಾರ ವಾಗಿ ತೋರುತ್ತದೆ. ಇದರ ಅಭಿಪ್ರಾಯವೇನೆಂದರೆ, ಪಂಚೇಂದ್ರಿಯಗಳಿಂದ ಅನುಭವಿಸಲ್ಪಡತಕ್ಕ ಸಮಸ್ತ ಐಹಿಕಾಮುಷ್ಮಿಕ ಸುಖವನ್ನು ಅಸ್ಥಿರವ ನ್ನಾಗಿಯೂ, ಅಸಾರವನ್ನಾಗಿಯೂ, ಆತ್ಮಕಲ್ಯಾಣಕ್ಕೆ ವಿರೋಧಿಯನ್ನಾಗಿಯೂ, ಕೊನೆಗೆ ದುಃಖರೂಪವನ್ನಾಗಿಯೂ, ನಿಶ್ಚಯಿಸಿ ತಪೋಮಹಿಮೆಯಿಂದ ಘಾತಿಕರ್ಮಗಳೆಂಬ ಆತ್ಮಶತ್ರುಗಳನ್ನು ಗೆದ್ದು, ಅನಂತಜ್ಞಾನ, ದರ್ಶನ, ವೀರ್ಯ, ಸುಖರೂಪವಾದ ಮುಕ್ತಿಯನ್ನಪೇಕ್ಷಿಸಿದರೆಂದರ್ಥ. ತಾವು ಲೋಕಾನುಭವ ವಿರುದ್ಧವಾದ ಆಚರಣೆಯುಳ್ಳವರಾಗಿದ್ದರೂ ಆತ್ಮತತ್ವ ಸ್ವರೂಪಕ್ಕೆ ಅನುರೂಪವಾದ ಕ್ರಮವುಳ್ಳವರಾಗಿದ್ದೀರಿ. ಅಂದರೆ ಕರ್ಮ ಬದ್ಧರಾದ ಸಂಸಾರಿ ಜೀವಗಳ ರೀತಿಯನ್ನು ತ್ಯಜಿಸಿ, ನಿತ್ಯ ನಿರ್ಬಾಧ ನಿರುಪಮ ಸುಖರೂಪವಾದ ಮೋಕ್ಷಪದವಿಯನ್ನು ಪಡೆದಿರುತ್ತೀರೆಂದು ಭಾವವು. ಇಲ್ಲಿ ವ್ಯಾಜಸ್ತುತಿಯೆಂಬ ಅಲಂಕಾರದಿಂದ ಸ್ತುತಿಯಾಗಿದೆ.

ಸ್ಮರಸ್ಸುದಗ್ಧೋಭವತೈವತಸ್ಮಿ
ನ್ನುದ್ಧೂಳಿತಾತ್ಮಾಯದಿನಾಮಶಂಭುಃ ।
ಅಶೇತಬೃಂದೋಪಹತೋಪಿವಿಷ್ಣುಃ
ಕಿಂಗೃಹ್ಯತೇ ಯೇನಭವಾನಜಾಗಃ ॥ ॥ ೧೦ ॥

೧೦. ತಾ॥ ಓ ವೀತರಾಗನೇ ! ಭೋಗೋಪಭೋಗಸುಖಗಳನ್ನು ನಿಶ್ಶೇಷಪರಿತ್ಯಾಗ ಮಾಡಿ ಶುಕ್ಲಧ್ಯಾನವೆಂಬ ಅಗ್ನಿಯಿಂದ ತಾವೇ ಕಾಮ (ಮೋಹ)ನನ್ನು ನಿಶ್ಶೇಷವಾಗಿ ದಹಿಸಿದವರು. ಆದುದರಿಂದ ಕಾಮನನ್ನು ಜಯಿಸಿದವರು ತಾವೆಂದು ಹೇಳುವುದು ನ್ಯಾಯವಾಗಿರಲು, ಕಾಮನೆಂಬೊಬ್ಬನನ್ನು ಸುಟ್ಟು ಬೂದಿಮಾಡಿ ಆ ಬೂದಿಯನ್ನು ಮೈಗೆ ಲೇಪನವಮಾಡಿಕೊಂಡ ಅಮಂಗಳ ರೂಪನಾದವನನ್ನು ಶಂಭು(ಸುಖೋತ್ಪತ್ತಿಸ್ಥಾನ)ವೆಂದು ಯಾವ ಜ್ಞಾನಿಯು ಹೇಳುತ್ತಾನೆ ? ಆ ಶಿವನಾದರೋ ಹೆಸರಿಗೆ ಕಾಮದಹನಮಾಡಿದವನೆನ್ನಿಸಿಕೊಂಡು, ತನ್ನರ್ಧ ಶರೀರವನ್ನೇ ಸ್ತ್ರೀಯನ್ನಾಗಿ ಧರಿಸಿದ್ದಾನೆ. ಇಂತಹ ಕಾಮುಕನು ಹೇಗೆ ಭಕ್ತರಿಗೆ ಮೋಕ್ಷಸುಖವನ್ನುಂಟುಮಾಡುವ ಶಂಭು (ಶಂ ಸುಖಂ, ಭವತ್ಯಸ್ಮಾದಿತಿ, ಶಂಭುಃ) ಶಬ್ದಕ್ಕೆ ಅರ್ಥವಾಗುವನು ? ಮತ್ತು ನೆಗ್ಗಿಲುಮುಳ್ಳು ಕಾಲಿಗೆ ಚುಚ್ಚಿಕೊಳ್ಳಲು, ಜನಸಮೂಹದಿಂದ ಬಾಧಿಸಲ್ಪಟ್ಟಿದ್ದರೂ, ಬೃಂದಾವನ ಸಮೀಪ ಸಂಚಾರಿಯಾಗಿದ್ದರೂ, ಯಾವನು ಮಲಗಿದನೋ, ಅಂತಹ ಲಕ್ಷ್ಮೀರಮಣನು ಸರ್ವವ್ಯಾಪಕನೆಂಬರ್ಥವುಳ್ಳ ವಿಷ್ಣು (ವೇತ್ತಿ, ವ್ಯಾಪ್ನೋತೀತಿ, ವಿಷ್ಣುಃ) ಶಬ್ದಕ್ಕೆ ಹೇಗೆ ಅರ್ಥವಾಗುವನು ? ಆದುದರಿಂದ ಶೋಕ, ಮೋಹ, ಭಯ, ನಿದ್ರಾದಿ ದೋಷಗಳಿಲ್ಲದವರಾಗಿಯೂ, ಸರ್ವಜ್ಞರಾಗಿಯೂ, ವೀತರಾಗರಾಗಿಯೂ ಇರುವ ತಮ್ಮಲ್ಲಿ ಮಾತ್ರ ಶಂಭು ಶಬ್ದಾರ್ಥವೂ, ವಿಷ್ಣು ಶಬ್ದಾರ್ಥವೂ, ಒಪ್ಪುತ್ತದೆ. ಎಲ್ಲಾ ದೇವರುಗಳಿಗಿಂತಲೂ ವೀತರಾಗ ಜಿನೇಶ್ವರನೇ ಶ್ರೇಷ್ಠನೆಂದಭಿಪ್ರಾಯವು.

ಸನೀರಜಾಸ್ಸ್ಯಾದಪರೋಘವಾನ್ವಾ
ತದ್ದೋಷಕೀರ್ತ್ಯೈವನತೇಗುಣಿತ್ವಂ ।
ಸ್ವತೋಂಬುರಾಶೇರ್ಮಹಿಮಾನದೇವ
ಸ್ತೋಕಾಪವಾದೇನಜಲಾಶಯಸ್ಯ ॥ ॥ ೧೧ ॥

೧೧. ತಾ॥ ಓ ವೀತರಾಗಪರಮಾತ್ಮನೇ ! ಇತರ ದೇವರುಗಳು ಕರ್ಮಿಗಳಾಗಿಯಾದರೂ ಇರಲಿ ಅಥವಾ ಕರ್ಮರಹಿತರಾಗಿಯಾದರೂ ಇರಲಿ ಅವರ ದೋಷವನ್ನು ಹೇಳುವುದರಿಂದಲೇ ತಮಗೊಂದು ಗುಣತ್ವವುಂಟಾಗುವುದಿಲ್ಲ. ಹೇಗೆಂದರೆ ಲೋಕದಲ್ಲಿ ಕೆರೆ, ಕಟ್ಟೆ, ಸರೋವರ ಮುಂತಾದ ಜಲಾಧಾರ ಪ್ರದೇಶವು ಸ್ವಲ್ಪ ನೀರುಳ್ಳದ್ದೆಂದು ಇದ್ದ ಯಥಾಸ್ಥಿತಿಯನ್ನು ಹೇಳುವುದರಿಂದ ಸಮುದ್ರಕ್ಕೆ ಮಹಿಮೆಯು ಹೆಚ್ಚುವುದಿಲ್ಲ. ಆ ಸಮುದ್ರಕ್ಕೆ ಆ ಮಹಿಮೆಯು ಸ್ವತಸ್ಸಿದ್ಧವಲ್ಲವೆ ? ಹಾಗೆಯೇ ತಾವು ಸರ್ವಗುಣಾಕರರೆಂಬುದು ಸ್ವತಸ್ಸಿದ್ಧವಾಗಿಯೇ ಇದೆ ಎಂದಭಿಪ್ರಾಯವು.

ಕರ್ಮಸ್ಥಿತಿಂಜಂತುರನೇಕಭೂಮಿಂ
ನಯತ್ಯಮುಂಸಾಚಪರಸ್ಪರಸ್ಯ ।
ತ್ವಂನೇತೃಭಾವಂಹಿತಯೋರ್ಭವಾಬ್ಧೌ
ಜಿನೇಂದ್ರನೌನಾವಿಕಯೋರಿವಾಖ್ಯಃ ॥ ॥ ೧೨ ॥

೧೨. ತಾ॥ ಓ ಜಿನೇಂದ್ರರೇ ! ಜೀವನು ಅನೇಕ ಪ್ರಕಾರವಾದ ಶುಭಾಶುಭ ಕರ್ಮಗಳನ್ನು ಮಾಡುತ್ತಾನೆ, ಆ ನಾನಾ ಪ್ರಕಾರವಾದ ಕರ್ಮಗಳು ಜೀವನಿಗೆ ನಾನಾಪ್ರಕಾರವಾದ ಗತಿಗಳನ್ನುಂಟುಮಾಡುತ್ತವೆ. ಜೀವ ಮತ್ತು ಕರ್ಮಗಳು ಒಂದಕ್ಕೊಂದು ನಾನಾ ಪ್ರಕಾರವಾದ ಅವಸ್ಥೆಗಳನ್ನುಂಟುಮಾಡುತ್ತವೆಂದರ್ಥವು. ಜೀವನು ನಾನಾ ಬಗೆಯಾದ ಪುಣ್ಯಪಾಪಗಳನ್ನು ಮಾಡುವನು. ಆ ಪುಣ್ಯಪಾಪಗಳು ಜೀವನ ನಾನಾ ಜನ್ಮಗಳಿಗೆ ಕಾರಣವಾಗುತ್ತವೆ. ಹೇಗೆಂದರೆ ಅಂಬಿಗನು ಹರಿಗೋಲನ್ನು (ಹಡಗನ್ನು) ದಡತಲುಪಿಸುತ್ತಾನೆ, ಹರಿಗೋಲು ಅಂಬಿಗನನ್ನು ದಡತಲುಪಿಸುತ್ತದೆ. ಹಾಗೆಯೇ ಈ ಸಂಸಾರವೆಂಬ ಸಮುದ್ರದಲ್ಲಿ ಜೀವ ಮತ್ತು ಕರ್ಮಗಳೆರಡೂ ಒಂದಕ್ಕೊಂದು ಒಯ್ಯುತ್ತವೆಂಬುದಾಗಿ ತಾವು ಲೋಕಕ್ಕೆ ಉಪದೇಶಿಸುತ್ತೀರಿ.

ಸುಖಾಯದುಃಖಾನಿಗುಣಾಯದೋಷಾ
ಧರ್ಮಾಯಪಾಪಾನಿಸಮಾಚರಂತಿ ।
ತೈಲಾಯಬಾಲಾಸ್ಸಿಕತಾಸಮೂಹಂ
ನಿಪೀಡಯಂತಿಸ್ಫುಟಮತ್ವದೀಯಾಃ ॥ ॥ ೧೩ ॥

೧೩. ತಾ॥ ಓ ದೇವನೇ ! ಲೋಕದಲ್ಲಿ ತಮ್ಮ ಭಕ್ತರಲ್ಲದವರು ಸ್ವರ್ಗಾದಿ ಸುಖಗಳನ್ನುದ್ದೇಶಿಸಿ ದುಃಖಗಳನ್ನನುಭವಿಸುತ್ತಾರೆ. ದೋಷಗಳನ್ನು ಆಚರಿಸಿ ಗುಣವನ್ನು ಬಯಸುತ್ತಾರೆ. ಧರ್ಮವು ಬರುತ್ತದೆಂದು ತಿಳಿದು ಹಿಂಸಾದಿ ಪಾಪಗಳನ್ನು ಮಾಡುತ್ತಾರೆ. ಈ ಮೂಢಕೃತ್ಯಗಳನ್ನು ಮಾಡುವವರು ಎಣ್ಣೆಯನ್ನು ಅಪೇಕ್ಷಿಸಿ ಗಾಣದಲ್ಲಿ ಮರಳನ್ನು ಆಡಿಸುವ ಅಜ್ಞಾನಿಗಳಂತೆ ಆಗುತ್ತಾರೆ. ಆದರೆ ಅರ್ಹಂತರು ಅರ್ಪಣೆಮಾಡಿರುವ ದಾನಪೂಜಾತಪಸ್ಸುಗಳನ್ನು ಬಿಟ್ಟು ಮಿಥ್ಯಾದೇವಗುರು ಶಾಸ್ತ್ರಗಳಲ್ಲಿ ನಂಬಿಕೆಯನ್ನಿಟ್ಟು ಮಾಡುವ ದಾನಪೂಜಾತಪಸ್ಸು ವ್ರತ ಮುಂತಾದವುಗಳು ಮರಳಿನಿಂದ ಎಣ್ಣೆಯನ್ನು ತೆಗೆಯುವ ಪ್ರಯತ್ನದಂತೆ ನಿಷ್ಫಲಗಳೆಂದಭಿಪ್ರಾಯವು.

ವಿಷಾಪಹಾರಂಮಣಿಮೌಷಧಾನಿ
ಮಂತ್ರಂಸಮುದ್ದಿಶ್ಯರಸಾಯನಂಚ ।
ಭ್ರಾಮ್ಯಂತ್ಯಹೋನತ್ವಮಿತಿಸ್ಮರಂತಿ
ಪರ್ಯಾಯನಾಮಾನಿತವೈವತಾನಿ ॥ ॥ ೧೪ ॥

೧೪. ತಾ॥ ಓ ಭವರೋಗವೈದ್ಯನೇ ! ತಮ್ಮ ಮಹಿಮೆಯನ್ನರಿಯದ ಮೂಢಾತ್ಮರು ಮಣಿ ಔಷಧ ಮಂತ್ರ ಮತ್ತು ರಸಾಯನ ಇವುಗಳೆಲ್ಲ ವಿಷವನ್ನು ಪರಿಹರಿಸುವುದರಲ್ಲಿ ಸಮರ್ಥಗಳೆಂದು ತಿಳಿಯುತ್ತಾರೆ. ಸರ್ವಜ್ಞರಾಗಿಯೂ, ಸರ್ವಶಕ್ತರಾಗಿಯೂ, ಇರುವ ತಾವು ವಿಷಪರಿಹಾರಮಾಡುವ ಸಾಮರ್ಥ್ಯವುಳ್ಳವರೆಂದು ತಿಳಿಯದೆ ಭ್ರಾಂತಿಪಡುತ್ತಾರೆ. ಇದಾಶ್ಚರ್ಯ ! ಮಣಿ, ಮಂತ್ರ, ಔಷಧ, ರಸಾಯನ ಈ ಸಮಸ್ತವೂ ತಮ್ಮ ಪರ್ಯಾಯನಾಮಗಳೇ ಆಗಿವೆ. ಭಕ್ತಿಪೂರ್ವಕವಾಗಿ ಭಗವಂತನನ್ನು ಸ್ಮರಿಸುವವನಿಗೆ ಸಕಲ ವಿಪತ್ತುಗಳೂ ಪರಿಹಾರವಾಗುತ್ತವೆಂದಭಿಪ್ರಾಯವು.

ಚಿತ್ತೇನಕಿಂಚಿತ್ಕೃತವಾನಸಿತ್ವಂ
ದೇವಃಕೃತಶ್ಚೇತಸಿಯೇನಸರ್ವಂ
ಹಸ್ತೇಕೃತಂತೇನಜಗದ್ವಿಚಿತ್ರಂ
ಸುಖೇನಜೀವತ್ಯಪಿಚಿತ್ತಬಾಹ್ಯಃ ॥ ॥ ೧೫ ॥

೧೫. ತಾ॥ ಓ ವೀತರಾಗನೇ ! ತಾವು ತಮ್ಮ ಚಿತ್ತದಲ್ಲಿ ಯಾವುದನ್ನೂ ಸ್ಮರಿಸಿದವರಲ್ಲ. (ಭಕ್ತರಾದವರು ಯಾವ ಪೂಜಾಸ್ತೋತ್ರ ನಮಸ್ಕಾರಗಳನ್ನು ಮಾಡಿದರೂ ಇವನು ನನ್ನ ಭಕ್ತನಾದ್ದರಿಂದ ಇಂತಹ ಫಲವನ್ನು ಪಡೆಯಲಿ, ಇವನು ನನ್ನನ್ನು ಪೂಜಿಸಲಿಲ್ಲವಾದುದರಿಂದ ದುಃಖವನ್ನನುಭವಿಸಲಿ ಎಂಬ ಯಾವ ಭಾವವನ್ನೂ ತಾವು ಚಿತ್ತದಲ್ಲಿ ಮಾಡುವುದಿಲ್ಲ). ಯಾವನು ತಮ್ಮನ್ನು ಚಿತ್ತದಲ್ಲಿಟ್ಟುಕೊಳ್ಳುತ್ತಾನೋ (ಧ್ಯಾನಿಸುತ್ತಾನೋ) ಅಂತಹವನು ಸಮಸ್ತ ಜಗತ್ತನ್ನೇ ಸುಖವಾಗಿ ತನ್ನ ಕೈಯಲ್ಲಿಟ್ಟುಕೊಳ್ಳುತ್ತಾನೆ. ತಮ್ಮ ಚಿತ್ತಕ್ಕೆ ಹೊರಗಿರತಕ್ಕವನಾದರೂ (ತಾವು ವೀತರಾಗರಾದುದರಿಂದ ಉದಾಸೀನರಾಗಿದ್ದರೂ) ಸಮಸ್ತ ಸುಖಗಳನ್ನೂ ಪಡೆಯುತ್ತಾನೆಂಬುದು ಆಶ್ಚರ್ಯ ! ವೀತರಾಗಭಗವಂತನಲ್ಲಿ ಮಾಡುವ ತನ್ನ ಶುಭ ಪರಿಣಾಮದಿಂದಲೇ ಸಮಸ್ತ ಸುಖಗಳನ್ನೂ ಪಡೆಯುತ್ತಾನೆಂದು ಸಮಾಧಾನವು. ಇತರ ದೇವರುಗಳು ಭಕ್ತರಿಗೆ ಪೂಜಾದಿಗಳಿಂದ ಸಂತೋಷಿಸಿ ಫಲವನ್ನು ಕೊಡುವರೆಂದು ಹೇಳುವರು. ವೀತರಾಗದೇವನು ಭಕ್ತರ ವಿಷಯದಲ್ಲಿ ಯಾವಭಾವನೆಯನ್ನೂ ಮಾಡದಿದ್ದರೂ ಅವರವರ ಇಷ್ಟಸಿದ್ಧಿಯಾಗುವುದು ಬಹಳ ಆಶ್ಚರ್ಯವಾಗಿದೆಯೆಂದು ವೀತರಾಗಮಹಿಮೆಯು ಸ್ತುತಿಸಲ್ಪಟ್ಟಿತು.

ತ್ರಿಕಾಲತತ್ವಂತ್ವಮವೈಸ್ತ್ರಿಲೋಕೀ
ಸ್ವಾಮೀತಿಸಂಖ್ಯಾನಿಯತೇರಮೀಷಾಂ ।
ಬೋಧಾಧಿಪತ್ಯಂಪ್ರತಿನಾಭವಿಷ್ಯಂ
ಸ್ತೇನ್ಯೇಪಿಚೇದ್ವ್ಯಾಪ್ಸ್ಯದಮೂನಪೀದಂ ॥ ೧೬ ॥

೧೬. ತಾ॥ ಓ ಸರ್ವಜ್ಞಪರಮಾತ್ಮನೇ ! ತಾವು ಭೂತಭವಿಷ್ಯದ್ವರ್ತಮಾನ ರೂಪವಾದ ಕಾಲತತ್ವವನ್ನು ತಿಳಿದಿರುತ್ತೀರಿ. ಮೂರು ಲೋಕಗಳಿಗೂ ಸ್ವಾಮಿಯಾದವರು ಎಂಬುದಾಗಿ ಕಾಲಕ್ಕೂ, ಲೋಕಗಳಿಗೂ ಮೂರೆಂಬ ಸಂಖ್ಯೆಯನ್ನು ಕ್ಲೃಪ್ತಮಾಡಿದುದರಿಂದ ಸರ್ವಕಾಲದ ಜ್ಞಾನವೂ ಸರ್ವಲೋಕಾಧಿಪತ್ಯವೂ ತಮ್ಮಲ್ಲಿ ಹೊರತು ಮತ್ತಾವತತ್ವದಲ್ಲಿಯೂ ಸಂಭವಿಸುವುದಿಲ್ಲ. ಆದರೆ ಕಾಲತತ್ವವು ಮೂರುಲೋಕಗಳನ್ನೂ ವ್ಯಾಪಿಸುವಂತಹುದಾದರೂ ಜಡತತ್ವವಾಗಿದೆ. ಹಾಗೆಯೇ ಮೂರುಲೋಕಗಳೂ ಜಡರೂಪಗಳಾಗಿವೆ.

ಆದುದರಿಂದ ಇವೆರಡೂ ಸರ್ವಜ್ಞತೆಗೂ ಸರ್ವಸ್ವಾಮಿಯಾಗುವುದಕ್ಕೂ ಯೋಗ್ಯಗಳಲ್ಲ. ಸಕಲಕರ್ಮಕ್ಷಯವನ್ನು ಮಾಡಿ ಅನಂತಜ್ಞಾನಾದಿ ನಿಜಗುಣಾಷ್ಟಕಗಳಿಂದ ವಿರಾಜಮಾನರಾದ ತಾವು ಹೊರತು ಇತರರು ಹೇಗೆ ಸರ್ವಜ್ಞರಾದಾರು ಮತ್ತು ಸರ್ವಸ್ವಾಮಿಯಾದಾರೆಂದಭಿಪ್ರಾಯವು.

ನಾಕಸ್ಯಪತ್ಯುಃಪರಿಕರ್ಮರಮ್ಯಂ
ನಾಗಮ್ಯರೂಪಸ್ಯತವೋಪಕಾರಿ ।
ತಸ್ಯೈವಹೇತುಃಸ್ವಸುಖಸ್ಯಭಾನೋ
ರುದ್ಬಿಭ್ರತಶ್ಛತ್ರಮಿವಾದರೇಣ ॥೧೭॥

೧೭. ತಾ॥ ಓ ವೀತರಾಗಪರಮಾತ್ಮನೇ! ಪಂಚಕಲ್ಯಾಣಗಳಲ್ಲಿ ಸೌಧರ್ಮೇಂದ್ರ ಮೊದಲಾದ ಕಲ್ಪೇಂದ್ರರುಗಳು ತಮಗೆ ಮಾಡುವಂತಹ ಪೂಜಾಲಂಕಾರಾದಿ ವಿಭವಗಳು ಆ ಇಂದ್ರಾದಿಗಳ ಉತ್ತರೋತ್ತರ ಶ್ರೇಯಸ್ಸಿಗೆ (ಪುಣ್ಯಬಂಧಕ್ಕೆ) ಕಾರಣವಾಗುವುವೇ ಹೊರತು ನಿರಾಕಾರರಾದ ತಮಗೆ ಉಪಕಾರವಾಗಿ ಆಗುವುದಿಲ್ಲ. ಹೇಗೆಂದರೆ ಪ್ರೀತಿಯಿಂದ ಸೂರ್ಯನಿಗೆ ಕೊಡೆ ಹಿಡಿದರೆ ಅದರಿಂದ ಸೂರ್ಯನಿಗೇನೂ ಉಪಕಾರವಿಲ್ಲದೆ ಕೊಡೆಯನ್ನು ಹಿಡಿದವನಿಗೇ ಉಪಕಾರವಾಗುವಂತೆ ಸ್ವಾಮಿಯನ್ನು ಪೂಜಿಸಿದವರಿಗೆ ಪುಣ್ಯಬಂಧವಾಗುವುದೇ ಹೊರತು ಅದರಿಂದ ಭಗವಂತನಿಗೆ ಉಪಕಾರವಿಲ್ಲವೆಂದಭಿಪ್ರಾಯವು.

ಕ್ವೋಪೇಕ್ಷಕಸ್ತ್ವಂಕ್ವಸುಖೋಪದೇಶಃ
ಸಚೇತ್ಕಿಮಿಚ್ಛಾಪ್ರತಿಕೂಲವಾದಃ ।
ಕ್ವಾಸೌಕ್ವವಾಸರ್ವಜಗತ್ಪ್ರಿಯತ್ವಂ
ತನ್ನೋಯಥಾತಥ್ಯಮವೇವಿಜಂತೇ ॥೧೮॥

೧೮. ತಾ॥ ಓ ವೀತರಾಗನೇ! ಸಮಸ್ತ ವಿಷಯದಲ್ಲಿಯೂ ರಾಗವನ್ನು ತೊರೆದಂತಹ ತಾವೆಲ್ಲಿ? ಸರ್ವಾತ್ಮಗಳಿಗೂ ಶ್ರೇಯಸ್ಸಿನ ಮಾರ್ಗವಾದ ಧರ್ಮವನ್ನುಪದೇಶಿಸುವುದೆಂಬುದೆಲ್ಲಿ? ಆ ಉಪದೇಶವಾದರೋ ಸರ್ವಾತ್ಮಗಳಿಗೂ ಇಷ್ಟವಾದ ಸಂಸಾರಭೋಗವನ್ನು ಬಿಡಬೇಕೆಂದಿರುವುದಾದುದರಿಂದ ಎಲ್ಲರ ಇಚ್ಛೆಗೂ ವಿರೋಧ ಕ್ರಮವುಳ್ಳದ್ದಾಗಿದೆ. ಲೋಕದಲ್ಲಿ

ತಮ್ಮ ತಮ್ಮ ಇಚ್ಛೆಗೆ ಅನುಗುಣವಾಗಿ ಹೇಳಿದರೆ ಪ್ರೀತಿಪಡುವರೇ ಹೊರತು ತಮ್ಮ ಇಚ್ಛಾ ವಿರುದ್ಧವಾಗಿ ಉಪದೇಶಿಸಿದರೆ ಯಾರೂ ಪ್ರೀತಿಸುವುದಿಲ್ಲ. ಹೀಗೆ ಇಚ್ಛಾಪ್ರತಿಕೂಲವಾಗಿರುವುದೆಂಬುದೆಲ್ಲಿ? ಅಂತಹ ವೈರಾಗ್ಯಪ್ರಧಾನವಾದ ತಮ್ಮ ಉಪದೇಶದಲ್ಲಿ ಸರ್ವಜಗತ್ತಿಗೂ ಪ್ರೀತಿಯುಂಟಾಗುತ್ತದೆಂಬುದೆಲ್ಲಿ? ಅಂದರೆ ಇಂತಹ ವೈರಾಗ್ಯೋಪದೇಶದಲ್ಲಿ ಈ ಜಗತ್ತೇ ಪ್ರೀತಿಪಡುತ್ತದೆ, ಇದು ಬಹಳ ಆಶ್ಚರ್ಯ! ಆದುದರಿಂದ ತಮ್ಮ ಗಂಭೀರಸ್ವಭಾವ ಗುಣಾತಿಶಯವನ್ನು ಕುರಿತು ಹೀಗೆಯೇ ಸರಿಯೆಂದು ವಿವೇಚನೆ ಮಾಡಲಶಕ್ಯವೆಂದು ಭಾವವು.

ತುಂಗಾತ್ಫಲಂಯತ್ತದಕಿಂಚನಾಚ್ಚ
ಪ್ರಾಪ್ಯಂಸಮೃದ್ಧಾನ್ನಧನೇಶ್ವರಾದೇಃ ।
ನಿರಂಭಸೋಪ್ಯುಚ್ಚತಮಾದಿವಾದ್ರೇ
ರ್ನೈಕಾಪಿನಿರ್ಯಾತಿಧುನೀಪಯೋಧೇಃ ॥೧೯॥

೧೯. ತಾ॥ ಓ ವೀತರಾಗಪರಮಾತ್ಮನೇ! ಬಹಳ ದರಿದ್ರನ ದೆಸೆಯಿಂದ ಯಾವ ಪ್ರಯೋಜನವು ಹೊಂದಲಾಗುವುದೋ ಆ ಪ್ರಯೋಜನವು ಐಶ್ವರ್ಯ ಪರಿಪೂರ್ಣನಾದ ಕುಬೇರನ ದೆಸೆಯಿಂದಲೂ ಕೂಡ ಪಡೆಯಲಸಾಧ್ಯ. ಹೇಗೆಂದರೆ ನೀರಿಲ್ಲದ ಸ್ಥಾನವಾಗಿದ್ದರೂ ಅತ್ಯುನ್ನತವಾದ ಬೆಟ್ಟದಿಂದ ನದಿಯು ಹುಟ್ಟುತ್ತದೆ. ನೀರು ಅಪರಿಮಿತವಾಗಿ ಸಮೃದ್ಧಿಯಾಗಿದ್ದರೂ ಸಮುದ್ರದಿಂದ ಈಚೆಗೆ ಯಾವ ನದಿಯೂ ಹೊರಡುವುದಿಲ್ಲ. ವೀತರಾಗರಾಗಿ ಸರ್ವೋತ್ಕೃಷ್ಟ ದೇವರಾದ ತಮ್ಮಿಂದ ಆಗುವ ಆತ್ಮಕಲ್ಯಾಣವು ಮತ್ತಾವ ಐಶ್ವರ್ಯವುಳ್ಳ ದೇವರುಗಳಿಂದಲೂ ಆಗುವುದಿಲ್ಲವೆಂದಭಿಪ್ರಾಯವು.

ತ್ರೈಲೋಕ್ಯಸೇವಾನಿಯಮಾಯದಂಡಂ
ದಧ್ರೇಯದಿಂದ್ರೋವಿನಯೇನತಸ್ಯ ।
ತತ್ಪ್ರಾತಿಹಾರ್ಯಂಭವತಃಕುತಸ್ತ್ಯಂ
ತತ್ಕರ್ಮಯೋಗಾದ್ಯದಿವಾತವಾಸ್ತು ॥೨೦॥

೨೦. ತಾ॥ ಓ ಅರ್ಹಂತರೇ! ತಮ್ಮ ಪಂಚಕಲ್ಯಾಣಕಾಲದಲ್ಲಿ ಸೌಧರ್ಮೇಂದ್ರನು ವಿನಯಗುಣದೊಡಗೂಡಿ ಮೂರುಲೋಕದ ಭವ್ಯಪ್ರಾಣಿ

ಗಳನ್ನು ಗಲಾಟೆಯಿಲ್ಲದಂತೆ ದರ್ಶನವನ್ನು ಮಾಡಿಸುವುದಕ್ಕೋಸ್ಕರ ಒಂದು ಗುಂಪಾಗುತ್ತಲೆ ಮತ್ತೊಂದು ಗುಂಪನ್ನು ಒಳಕ್ಕೆ ಕ್ರಮವಾಗಿ ಕಳುಹಿಸುವ ದರ್ಶನಮಾಡಿಸುವ ದ್ವಾರಪಾಲಕನಾಗಿ ಕೈಯಲ್ಲಿ ದೊಣ್ಣೆಯನ್ನು ಹಿಡಿದು ಸೇವಕನಾಗಿದ್ದನು. ಆ ಇಂದ್ರನ ದ್ವಾರಪಾಲಕತ್ವವನ್ನು ತಮಗೆ ಒಂದು ಪ್ರಾತಿಹಾರ್ಯ ಸಂಪತ್ತನ್ನಾಗಿ ಹೇಳುತ್ತಾರೆ. ಆ ಸೇವಕ ವ್ಯಾಪಾರವು ಇಂದ್ರನಲ್ಲಿರುವುದೇ ಹೊರತು ತಮ್ಮದು ಹೇಗಾದೀತು? ಆ ಇಂದ್ರನು ಮಾಡುವ ಸೇವೆಗೆ ತಾವು ಪಾತ್ರರಾದುದರಿಂದ ಆ ಸೇವೆಯು ತಮ್ಮದಾಯಿತು. ಈ ಭಾವದಿಂದ ತಮ್ಮ ಪ್ರಾತಿಹಾರ್ಯವೆಂಬ ಮಾತು ಇಂದ್ರನು ಮಾಡುವ ಸೇವೆಗೆ ಒಪ್ಪತಕ್ಕದ್ದಾಗಿದೆ. ಲೋಕದಲ್ಲಿ ಸೇವೆಯೆಂಬುದು ಸೇವಕ, ಸೇವ್ಯ ಇವರಿಬ್ಬರನ್ನೂ ಸಂಬಂಧಿಸುತ್ತದೆ, ಆದುದರಿಂದ ಇಂದ್ರಸೇವಕತ್ವವು ತಮ್ಮದೆಂಬ ಮಾತು ಯುಕ್ತವೇ ಸರಿಯೆಂದು ಭಾವವು.

ಶ್ರಿಯೋಪರಂಪಶ್ಯತಿಸಾಧುನಿಸ್ಸ್ವಃ
ಶ್ರೀಮಾನ್ನಕಶ್ಚಿತ್ಕೃಪಣಂತ್ವದನ್ಯಃ ।
ಯಥಾಪ್ರಕಾಶಸ್ಥಿತಮಂಧಕಾರ
ಸ್ಥಾಯೀಕ್ಷತೇಸೌನತಥಾತಮಸ್ಥಂ ॥ ॥ ೨೧ ॥

೨೧. ತಾ॥ ಓ ಜಿನರಾಜನೇ! ಲೋಕದಲ್ಲಿ ದರಿದ್ರನು ಶ್ರೀಮಂತನನ್ನು ಚೆನ್ನಾಗಿ ನೋಡುತ್ತಾನೆ. ತಾವು ಹೊರತು ಮತ್ಯಾವ ಐಶ್ವರ್ಯವಂತನೂ ದರಿದ್ರನನ್ನು ಚೆನ್ನಾಗಿ ನೋಡುವುದಿಲ್ಲ. (ಜರಾಮರಣಾದಿ ದುಃಖಸಮುದ್ರದಲ್ಲಿ ಮುಳುಗುತ್ತಲಿರುವ ಆತ್ಮವರ್ಗಗಳನ್ನು ವೀತರಾಗ ಸರ್ವಜ್ಞರಾದ ತಾವು ಧರ್ಮಾಮೃತಪಾನವನ್ನು ಮಾಡಿಸಿ ಉದ್ಧರಿಸುವಿರೇ ಹೊರತು ಶ್ರೀಮಂತರಾದ ಮತ್ಯಾರೂ ಬಡವರನ್ನು ಕಣ್ಣಿನಿಂದಲೇ ನೋಡುವುದಿಲ್ಲವೆಂದು ಭಾವವು). ಹೇಗೆಂದರೆ ಕತ್ತಲೆಯಲ್ಲಿರುವವನು ಬೆಳಕಿನಲ್ಲಿರುವವನನ್ನು ನೋಡುವಂತೆ ಬೆಳಕಿನಲ್ಲಿರುವವನು ಕತ್ತಲೆಯಲ್ಲಿರುವವನನ್ನು ನೋಡುವುದಿಲ್ಲ. ಶ್ರೀಮಂತನು ಬೆಳಕಿನಲ್ಲಿರುವವನಹಾಗೆ, ದುಃಖಿಯಾದ ಆತ್ಮನು ಕತ್ತಲೆಯಲ್ಲಿರುವವನ ಹಾಗೆ ದೃಷ್ಟಾಂತಾರ್ಥವನ್ನು ತಿಳಿಯಬೇಕು. ರತ್ನತ್ರಯ ಪ್ರಕಾಶವುಳ್ಳ ಆತ್ಮನು ಬೆಳಕಿನಲ್ಲಿರುವವನಹಾಗೆ ಮೋಹನೀಯ ಕರ್ಮಾಕ್ರಾಂತನು ಕತ್ತಲೆಯಲ್ಲಿರುವವನಹಾಗೆಂದು ತಿಳಿಯಬೇಕು.

ಸ್ವವೃದ್ಧಿನಿಶ್ವಾಸನಿಮೇಷಭಾಜಿ
ಪ್ರತ್ಯಕ್ಷಮಾತ್ಮಾನುಭವೇಪಿಮೂಢಃ ।
ಕಿಂಚಾಖಿಲಜ್ಞೇಯವಿವರ್ತಿಬೋಧ
ಸ್ವರೂಪಮಧ್ಯಕ್ಷಮವೈತಿಲೋಕಃ ॥ ೨೨ ॥

೨೨. ತಾ॥ ಓ ಸರ್ವಜ್ಞಾತ್ಮನೇ! ತನ್ನ ಬೆಳವಣಿಗೆ, ಉಸಿರಾಡಿಸುವಿಕೆ ಮತ್ತು ರೆಪ್ಪೆಯಾಡಿಸುವಿಕೆ ಮೊದಲಾದ ಆತ್ಮಾನುಭವ ವ್ಯಾಪಾರಗಳನ್ನು ತಿಳಿಯಲರಿಯದ ಈ ಮೂಢಲೋಕ (ಜನ)ವು ಪ್ರತ್ಯಕ್ಷವಾಗಿ ತಿಳಿಯಬೇಕಾದ ಸಮಸ್ತ ಲೋಕಾಲೋಕಗಳನ್ನೂ, ಅನಂತಗುಣಪರ್ಯಾಯಾದಿಗಳನ್ನೂ ತಿಳಿಯಲು ಸಮರ್ಥವಾದ ಸರ್ವಜ್ಞತೆಯುಳ್ಳ ಶುದ್ಧ ಪರಮಾತ್ಮ ತತ್ವವನ್ನು ತಿಳಿಯುತ್ತದೆಯೊ? ಬಹಿರಾತ್ಮನನ್ನೇ ತಿಳಿಯಲರಿಯದವನು ಶುದ್ಧ ಪರಮಾತ್ಮ ತತ್ವವನ್ನು ಹೇಗೆ ತಿಳಿದಾನೆಂದಭಿಪ್ರಾಯವು.

ತಸ್ಯಾತ್ಮಜಸ್ತಸ್ಯಪಿತೇತಿದೇವ
ತ್ವಾಂಯೇವಗಾಯಂತಿ ಕುಲಂಪ್ರಕಾಶ್ಯ ।
ತೇದ್ಯಾಪಿನನ್ವಾಶ್ಮನಮಿತ್ಯವಶ್ಯಂ
ಪಾಣೌಕೃತಂಹೇಮಪುನಸ್ತ್ಯಜಂತಿ ॥ ೨೩ ॥

೨೩. ತಾ॥ ಓ ದೇವನೆ! ತಾವು ಇಂತಹವರ ಮಗನೆಂತಲೂ ಇಂತಹವರ ತಂದೆಯೆಂತಲೂ, ಇಂತಹ ಕುಲದಲ್ಲಿ ಹುಟ್ಟಿದವರೆಂತಲೂ, ತಮ್ಮನ್ನು ತಮ್ಮ ತಾಯಿತಂದೆ ಕುಲ ಗೋತ್ರಾದಿಗಳನ್ನು ಪ್ರಕಾಶಪಡಿಸಿ ಯಾರು ತಿಳಿಯುತ್ತಾರೋ ಅಂತಹವರು ಅವಶ್ಯವಾಗಿ ಈಗಲೂ ಕೈಯಲ್ಲಿರುವ ಬಂಗಾರವನ್ನು ಕಲ್ಲನ್ನಾಗಿ ತಿಳಿದುಕೊಂಡು ಬಿಸಾಡುತ್ತಾರೆಂದು ಹೇಳಬಹುದು. ಅಂದರೆ ತಮ್ಮ ನಿತ್ಯನಿರ್ಮಲಾನಂತ ಜ್ಞಾನಾಕಾರವನ್ನರಿಯದ ಮೂಢಾತ್ಮರೆಂದರ್ಥವು.

ದತ್ತಸ್ತ್ರಿಲೋಕ್ಯಾಂಪಟಹೋಭಿಭೂತಾಃ
ಸುರಾಸುರಾಸ್ತಸ್ಯಮಹಾನ್ಸಲಾಭಃ ।
ಮೋಹಸ್ಯಮೋಹಸ್ತ್ವಯಿಕೋವಿರೋದ್ಧು
ರ್ಮೂಲಸ್ಯನಾಶೋಬಲವದ್ವಿರೋಧಃ ॥ ೨೪ ॥

೨೪. ತಾ॥ ಓ ಜಿನರಾಜನೇ! ಮೋಹವೆಂಬ ವೀರನು ಮೂರು ಲೋಕವನ್ನೂ ಆಕ್ರಮಿಸಿ ಜಯಭೇರಿಯನ್ನು ಹೊಡಿಸಿಕೊಂಡನು. ಅಂದರೆ ಮೂರು ಲೋಕದಲ್ಲಿರುವ ಸರ್ವಪ್ರಾಣಿಜಾಲವೂ ಮೋಹವಶ್ಯವೆಂಬ ಪ್ರಸಿದ್ಧಿಯೇ ಜಯಭೇರಿಯನ್ನು ಹೊಡಿಸಿಕೊಂಡಹಾಗೆಂದು ಭಾವವು. ಆ ಮೋಹದಿಂದ ದೇವರುಗಳು ಅಸುರಕುಮಾರರು ಕೂಡ ತಿರಸ್ಕರಿಸಲ್ಪಟ್ಟರು. ಅಂದರೆ ಅವರೂ ಕೂಡ ಭೋಗಪರವಶರಾದರೆಂದರ್ಥವು. ಆ ಮೋಹರಾಜನಿಗೆ ಆ ಪ್ರಸಿದ್ಧಿಯೇ ಮಹಾಲಾಭವು. ಆದರೆ ಪ್ರಬಲರಾದ ತಮ್ಮಲ್ಲಿ ವಿರೋಧ ಮಾಡಿ ಸಮೂಲನಾಶವನ್ನು ಹೊಂದಿದ ಆ ಮೋಹರಾಜನ ಅಜ್ಞಾನವನ್ನು ಎಷ್ಟು ಹೇಳಿದರೂ ತೀರದು. ಬಲವಂತರಲ್ಲಿ ವಿರೋಧಮಾಡುವುದು ಮೂಲನಾಶಕ್ಕೆ ಕಾರಣವಲ್ಲವೇ? ಸ್ವಾಮಿಗೆ ಯಾವ ಅಜ್ಞಾನವೂ ಇಲ್ಲವೆಂದು ಭಾವವು.

ಮಾರ್ಗಸ್ತ್ವಯೈಕೋದದೃಶೇವಿಮುಕ್ತೇ
ಶ್ಚತುರ್ಗತೀನಾಂಗಹನಂಪರೇಣ ।
ಸರ್ವಂಮಯಾದೃಷ್ಟಮಿತಿಸ್ಮಯೇನ
ತ್ವಂಮಾಕದಾಚಿದ್ಭುಜಮಾಲುಲೋಕೇ ॥ ೨೫ ॥

೨೫. ಓ ವೀತರಾಗ ಪರಮಾತ್ಮನೇ! ತಾವು ಮೋಕ್ಷಕ್ಕೆ ಮುಖ್ಯ ಕಾರಣವಾದ ಮಾರ್ಗವನ್ನು ನೋಡಿದಿರಿ. ರಾಗಾಕ್ರಾಂತವಾದ ಇತರ ಆತ್ಮಗಳು ನರಸುರ ತಿರಿಯಙ್ನರಕ ಗತಿಗಳೆಂಬ ಮಹಾರಣ್ಯವನ್ನು ನೋಡಿದರು. ಈ ಪ್ರಕಾರ ಇತರರಿಗೆ ಸಾಧಾರಣವಲ್ಲದ ಮೋಕ್ಷಮಾರ್ಗವನ್ನು ತಾವು ನೋಡಿದವರಾಗಿದ್ದರೂ ಗರ್ವದಿಂದ ಯಾವಾಗಲೂ ತಮ್ಮ ಭುಜವನ್ನು ನೋಡಿಕೊಂಡವರಲ್ಲ, ಅಂದರೆ ಲೋಕದಲ್ಲಿ ಯಾವುದಾದರೊಂದು ಹೊಸ ವಿಷಯವನ್ನು ನೋಡಿದವನು ಗರ್ವದಿಂದ ತನ್ನ ತೋಳುಗಳನ್ನು ನೋಡಿಕೊಂಡು ಜಗತ್ತಿನಲ್ಲಿ ತನ್ನ ಸಮಾನ ಚತುರರಿಲ್ಲವೆಂದು ಗರ್ವದಿಂದ ಹಿಗ್ಗುವುದುಂಟು, ಹಾಗೆ ತಾವು ಇತರರಿಗೆ ಅಸಾಧ್ಯವಾದ ಮೋಕ್ಷಮಾರ್ಗವನ್ನು ನೋಡಿದವರಾಗಿದ್ದರೂ ನಾನು ಇಂತಹ ಮಹಿಮೆಯುಳ್ಳವನೆಂದು ಯಾವಾಗಲೂ ಗರ್ವಪಡಲಿಲ್ಲವೆಂದಭಿಪ್ರಾಯವು.

ಸ್ವರ್ಭಾನುರರ್ಕಸ್ಯಹವಿರ್ಭುಜೋಂಭಃ
ಕಲ್ಪಾಂತವಾತೋಂಬುನಿಧೇರ್ವಿಘಾತಃ ।
ಸಂಸಾರಭೋಗಸ್ಯವಿಯೋಗಭಾವೋ
ವಿಪಕ್ಷಪೂರ್ವಾಭ್ಯುದಯಾಸ್ತ್ವದನ್ಯೇ ॥ ೨೬ ॥

೨೬. ಓ ಜಿನ ಪರಮೇಷ್ಠಿಯೇ! ಲೋಕದಲ್ಲಿ ಸೂರ್ಯನಿಗೆ ರಾಹು ವಿಘಾತಕನು, ಬೆಂಕಿಗೆ ನೀರು ವಿಘಾತಕವು, ಸಮುದ್ರಕ್ಕೆ ಪ್ರಳಯಕಾಲದ ಗಾಳಿ ವಿಘಾತಕವು, ಸಂಸಾರಸುಖಕ್ಕೆ ಹೆಂಡತಿ ಮಕ್ಕಳು ಹಣ ಮುಂತಾದ ವಸ್ತುಗಳ ನಾಶವು ವಿಘಾತಕವು. ತಾವು ಹೊರತು ಸಮಸ್ತ ಪದಾರ್ಥಗಳೂ ನಾಶವನ್ನು ಹೊಂದುವಂತಹುಗಳಾಗಿವೆ. ನಿತ್ಯಸುಖರೂಪವಾದ ಅನಂತಜ್ಞಾನ ದರ್ಶನ ವೀರ್ಯಮಯಮೂರ್ತಿಯಾದ ತಾವೊಬ್ಬರೇ ನಿರ್ವಿಘಾತಸ್ವರೂಪರೆಂದಭಿಪ್ರಾಯವು.

ಅಜಾನತಸ್ತ್ವಾಂನಮತಃಫಲಂಯ
ತ್ತಜ್ಜಾನತೋನ್ಯಂನತುದೇವತೇತಿ ।
ಹರಿನ್ಮಣಿಂಕಾಚಧಿಯಾದಧಾನ
ಸ್ತಂತಸ್ಯಬುಧ್ಯಾವಹತೋನರಿಕ್ತಃ ॥ ೨೭ ॥

೨೭. ತಾ॥ ಓ ಅರ್ಹತ್ಪರಮೇಶ್ವರನೇ! ನಿತ್ಯನಿರ್ಮಲ ನಿರುಪಮ ಸಹಜಾನಂದ ಚೈತನ್ಯಮೂರ್ತಿಯಾದ ತಮ್ಮ ಸ್ವರೂಪ ಸ್ವಭಾವ ಗುಣಾದಿಗಳನ್ನರಿಯದೆ ನಮಸ್ಕಾರ ಮಾಡುವವನಿಗೆ ಯಾವ ಫಲವುಂಟಾಗುತ್ತದೋ ಆ ಫಲವು ಇತರ ದೇವರುಗಳನ್ನು ದೇವರೆಂದರಿತು ನಮಸ್ಕಾರ ಮಾಡುವವನಿಗುಂಟಾಗುವುದಿಲ್ಲ. ಹೇಗೆಂದರೆ ಪಚ್ಚೆರತ್ನವನ್ನು ಗಾಜೆಂದು ತಿಳಿದು ಧರಿಸಿಕೊಂಡಿರುವ ಮನುಷ್ಯನು, ಗಾಜನ್ನು ಪಚ್ಚೆರತ್ನವೆಂದು ತಿಳಿದು ಧರಿಸಿಕೊಂಡಿರುವವನಿಗಿಂತಲೂ ಶ್ರೇಷ್ಠನಲ್ಲವೆ? ಹಾಗೆಯೇ ತಮ್ಮನ್ನು ತಿಳಿಯದೆ ನಮಸ್ಕರಿಸುವವನಿಗುಂಟಾಗುವ ಫಲವು ಮತ್ತೊಂದು ದೇವತೆಯನ್ನು ತಿಳಿದು ನಮಸ್ಕರಿಸುವವನಿಗುಂಟಾಗುವುದಿಲ್ಲವೆಂದಭಿಪ್ರಾಯವು.

ಪ್ರಶಸ್ತವಾಚಶ್ಚತುರಾಃಕಷಾಯೈ
ರ್ದಗ್ಧಸ್ಯದೇವವ್ಯವಹಾರಮಾಹುಃ ।
ಗತಸ್ಯದೀಪಸ್ಯಹಿನಂದಿತತ್ವಂ
ದೃಷ್ಟಂಕಪಾಲಸ್ಯಚಮಂಗಳತ್ವಂ ॥ ೨೮ ॥

೨೮. ತಾ॥ ಓ ವೀತರಾಗನೇ ! ಶ್ರೇಷ್ಠವಾದ ಮಾತಿನಚತುರರು ರಾಗ, ದ್ವೇಷ, ಕ್ರೋಧ, ಲೋಭ, ಮಾನ, ಮಾಯಾರೂಪಗಳಾದ ಕಷಾಯಗಳಿಂದ ದಹಿಸಲ್ಪಟ್ಟ (ಕಲುಷಿತಮನಸ್ಸುಳ್ಳ) ದೇವತಾಂತರಗಳನ್ನೂ ಕೂಡ ದೇವರೆಂದು ಹೇಳುತ್ತಾರೆ. "ದೀವ್ಯತೀತಿದೇವಃ" ಎಂಬ ವ್ಯುತ್ಪತ್ತಿಯಿಂದ ದೇವ ಎಂಬ ಶಬ್ದಕ್ಕೆ ಪ್ರಕಾಶಿಸುವವನು ಎಂದರ್ಥವಾಗುತ್ತದೆ, ಯಾವವಸ್ತು ಸುಟ್ಟು ಹೋಗುತ್ತದೋ ಅದು ಪ್ರಕಾಶಿಸುವದಿಲ್ಲವಷ್ಟೆ ? ಹೇಗೆಂದರೆ, ಲೋಕದಲ್ಲಿ ಎಣ್ಣೆ ಬತ್ತಿಗಳೆರಡೂ ಉರಿದು ಆರಿ ಹೋದದೀಪವು ಪ್ರಕಾಶಿಸುವದಿಲ್ಲ, ಆ ದೀಪದಪಾತ್ರವಾದರೋ ದಹಿಸಲ್ಪಡದೇ ಇರುವುದರಿಂದ ಮಂಗಳರೂಪ ವಾಗಿಯೇ ಕಾಣುತ್ತದೆ. ದೀಪದಪಾತ್ರೆಯಲ್ಲಿ ಎಣ್ಣೆ ತೀರಿಹೋಗಲು ದಹಿಸಲ್ಪಟ್ಟ ಬತ್ತಿಯು ಕರ್ರಗೆ ಕಾಣುವುದೇ ಹೊರತು, ಪ್ರಕಾಶಿಸುವದಿಲ್ಲ. ಹಾಗೆಯೇ ಎಣ್ಣೆಯಂತಿರುವ ರಾಗಾದಿಗಳಿಂದ ಬತ್ತಿಯಂತೆ ದಹಿಸಲ್ಪಟ್ಟ ಮನಸ್ಸುಳ್ಳ ಆತ್ಮನು ದೇವಶಬ್ದಕ್ಕೆ ಅರ್ಥವಾಗುವುದಿಲ್ಲವೆಂದಭಿಪ್ರಾಯವು.

ನಾನಾರ್ಥಮೇಕಾರ್ಥಮದಸ್ತ್ವದುಕ್ತಂ
ಹಿತಂವಚಸ್ತೇನಿಶಮಯ್ಯವಕ್ತುಃ ।
ನಿರ್ದೋಷತಾಂಕೇನವಿಭಾವಯಂತಿ
ಜ್ವರೇಣಮುಕ್ತಸ್ಸುಗಮಃಸ್ವರೇಣ ॥ ೨೯ ॥

೨೯. ತಾ॥ ಓ ಅನೇಕಾಂತವಾದ ಸ್ಥಾಪಕರೆ ! ತಾವು ಈ ಜಗತ್ತನ್ನು ಆಪೇಕ್ಷಿಕ (ವ್ಯವಹಾರ) ನಯದಿಂದ ಅಂದರೆ ಗುಣಪರ್ಯಾಯ ದೇಶಕಾಲಾದಿಗಳನ್ನ ಪೇಕ್ಷಿಸಿ ನಾನಾತ್ವವುಳ್ಳದ್ದನ್ನಾಗಿಯೂ, ಶುದ್ಧನಯದಿಂದ ಸಮಸ್ತ ವಸ್ತು ವನ್ನೂ ಏಕತ್ವವುಳ್ಳದ್ದನ್ನಾಗಿಯೂ ಯಾವ ಅನೇಕಾಂತ ತತ್ತ್ವೋಪದೇಶವನ್ನು ಮಾಡಿದಿರೋ ಆ ಉಪದೇಶವನ್ನು ಕೇಳಿದೊಡನೆ ಒಂದು ವಸ್ತುವಿನಲ್ಲಿ ನಾನಾ ತ್ವವೂ ಏಕತ್ವವೂ ಒಂದೇ ಕಾಲದಲ್ಲಿ ಹೇಗೆ ಸಂಭವಿಸುವುದೆಂದು ಪೂರ್ವಾಪರ ವಿರೋಧವು ತೋರಿದರೂ ಸ್ಯಾದಸ್ತಿಸ್ಯಾನ್ನಾಸ್ತೀತ್ಯಾದಿಸಪ್ತಭಂಗೀ ನ್ಯಾಯ ಗರ್ಭಿತವಾದ ತಮ್ಮ ಹಿತವಚನವನ್ನು ವಿಚಾರಮಾಡಿ ನೋಡಲು ಯಾರು ತಾನೇ ನಿರ್ದೋಷವನ್ನಾಗಿ ತಿಳಿಯುವುದಿಲ್ಲ? ಎಲ್ಲರೂ ತಿಳಿಯುತ್ತಾರೆಂದರ್ಥವು ಹೇಗೆಂದರೆ :— ಲೋಕದಲ್ಲಿ ಮನುಷ್ಯನು ಜ್ವರದಿಂದ ಪೀಡಿತನಾಗಿರುವಾಗ

ದುಃಸ್ವರವುಳ್ಳವನಾದರೂ ಜ್ವರದಿಂದ ಬಿಡಲ್ಪಟ್ಟ ಮೇಲೆ ಒಳ್ಳೇ ಸ್ವರ ದೊಡನೆ ಕೂಡುತ್ತಾನಲ್ಲವೆ ? ಹಾಗೆಯೇ ವ್ಯವಹಾರ ನಯದಿಂದ ತಮ್ಮ ಸಿದ್ಧಾಂತದಲ್ಲಿ ಮೊದಲು ವಿರೋಧವನ್ನು ಶಂಕಿಸುವವನು ನಿಶ್ಚಯ ನಯದಿಂದ ಸಮಾಧಾನವನ್ನು ಹೊಂದುವನೆಂದು ಭಾವವು.

ನಕ್ವಾಪಿವಾಂಛಾವವೃತೇಚವಾಕ್ತೇ
ಕಾಲೇಕ್ವಚಿತ್ಕೋಪಿತಥಾನಿಯೋಗಃ ।
ನಪೂರಯಾಮ್ಯಂಬುಧಿಮಿತ್ಯುದಂಶುಃ
ಸ್ವಯಂಹಿಶೀತದ್ಯುತಿರಭ್ಯುದೇತಿ ॥ ೩೦ ॥

೩೦. ತಾ॥ ಓ ವೀತರಾಗಪರಮಾತ್ಮನೇ ! ತಮಗೆ ಯಾವುದರಲ್ಲಿಯೂ ಇಚ್ಛೆಯಿಲ್ಲವಾದುದರಿಂದ ತಮ್ಮ ವಾಣಿಯು ಯಾವ ಇಚ್ಛಾ ವಿಷಯದಲ್ಲಿಯೂ ಪ್ರವರ್ತಿಸುವುದಿಲ್ಲ. ಹಾಗೆಯೇ ಯಾವ ಕಾಲದಲ್ಲಿಯೂ, ಯಾವ ವಿಷಯ ದಲ್ಲಿಯೂ ತಮ್ಮ ಅಪ್ಪಣೆಯು ಉಂಟಾಗುವುದಿಲ್ಲ. ಅಂದರೆ ಈ ಭಕ್ತನು ಪುಣ್ಯಕೆಲಸವನ್ನು ಮಾಡಿದುದರಿಂದ ನಾನು ಇವನ ಇಷ್ಟಾರ್ಥವನ್ನು ಪೂರ್ತಿ ಮಾಡುತ್ತೇನೆಂದು ಮನಸ್ಸಿನಲ್ಲಿ ಮಾಡಿಕೊಂಡು ಫಲವನ್ನು ಕೊಡುವುದಿಲ್ಲ. ಕಿರಣಗಳಿಂದ ಆಕಾಶವನ್ನೂ ಭೂಮಿಯನ್ನೂ ಬೆಳಗುವವನಾಗಿ ಉದಯಿಸುವ ಚಂದ್ರನು ಸಮುದ್ರವನ್ನು ಹೆಚ್ಚಿಸುತ್ತೇನೆ (ಉಕ್ಕುವಂತೆ ಮಾಡುತ್ತೇನೆ) ಎಂಬುದಾಗಿ ಮನಸ್ಸಿನಲ್ಲಿ ಮಾಡಿಕೊಂಡು ಉದಯಿಸುವುದಿಲ್ಲವಷ್ಟೆ ? ಚಂದ್ರೋದಯವಾದೊಡನೆ ಸಮುದ್ರ ಹೆಚ್ಚುವುದು ವಸ್ತುಸ್ವಭಾವವು. ಅದ ರಂತೆ ದಾನಪೂಜಾತಪಸ್ಸು ವ್ರತಮುಂತಾದ ಧರ್ಮಾಚರಣೆಯಿಂದುಂಟಾಗುವ ಸುಕೃತವೇ ತಮ್ಮ ಭಕ್ತರಿಗೆ ನರೇಂದ್ರ ಸುರೇಂದ್ರ ನಾಗೇಂದ್ರಾದಿ ಪದವಿಯನ್ನು ಕೊಡುತ್ತದೆಂದಭಿಪ್ರಾಯವು.

ಗುಣಾಗಭೀರಾಃಪರಮಾಃಪ್ರಸನ್ನಾ
ಬಹುಪ್ರಕಾರಾಬಹವಸ್ತವೇತಿ ।
ದೃಷ್ಟೋಯಮಂತಃಸ್ತವನೇನತೇಷಾಂ
ಗುಣೋಗುಣಾನಾಂಕಿಮತಃಪರೋಸ್ತಿ ॥ ೩೧ ॥

೩೧. ತಾ॥ ಓ ಗುಣರತ್ನಾಕರನೆ ! ತಮ್ಮ ಅನಂತ ಜ್ಞಾನಾದಿಗುಣಗಳು ಗಂಭೀರವಾದವುಗಳು (ತಿಳಿಯಲಶಕ್ಯಗಳು) ಸರ್ವೋತ್ಕೃಷ್ಟಗಳು, ಶಾಂತವಾದವುಗಳು, ನಾನಾಪ್ರಕಾರಗಳು, ಅನೇಕಗಳು, ಹೀಗೆ ಸ್ತುತಿಸುವುದೇ ತಮ್ಮ ಗುಣಸ್ತುತಿಯಲ್ಲಿ ಕೊನೆಯ ಭಾಗವಾಗಿ ಕಾಣುತ್ತದೆ. ಇದಕ್ಕಿಂತಲೂ ತಮ್ಮ ಗುಣಗಳ ಹೊಗಳುವಿಕೆಯು ಬೇರೆಯಾವುದೂ ಇಲ್ಲವಷ್ಟೆ ?

ಸ್ತುತ್ವಾಪರಂನಾಭಿಮತಂಹಿಭಕ್ತ್ಯಾ
ಸ್ಮೃತ್ವಾಪ್ರಣತ್ಯಾಚತತೋಭಜಾಮಿ ।
ಸ್ಮರಾಮಿದೇವಂಪ್ರಣಮಾಮಿನಿತ್ಯಂ
ಕೇನಾಪ್ಯುಪಾಯೇನ ಫಲಂಹಿಸಾಧ್ಯಂ ॥ ೩೨ ॥

೩೨. ತಾ॥ ಓ ಜಿನಪರಮೇಶ್ವರರೇ ! ತಮ್ಮ ಸ್ತೋತ್ರದಿಂದಲೂ ಭಕ್ತಿಯಿಂದಲೂ, ಸದಾ ಸ್ಮರಣೆಯಿಂದಲೂ, ನಮಸ್ಕಾರದಿಂದಲೂ ಬೇರೆ ಯಾವ ಇಷ್ಟಫಲವನ್ನೂ ನಾನು ಪಡೆಯುವುದಿಲ್ಲ. ಲೋಕದಲ್ಲಿ ಸಾಧನವಿಲ್ಲದೆ ಫಲವು ಸಿದ್ಧಿಸುವುದಿಲ್ಲವಾದುದರಿಂದ ಆ ತಮ್ಮ ಸ್ತೋತ್ರಾದಿಗಳನ್ನೇ ಸಾಧನವನ್ನಾಗಿಟ್ಟುಕೊಂಡು ಅತೀಂದ್ರಿಯ ಸುಖರೂಪವಾದ ಫಲವನ್ನು ಪಡೆಯುವೆನು.

ತತಸ್ತ್ರಿಲೋಕೀನಗರಾಧಿದೇವಂ
ನಿತ್ಯಂಪರಂಜ್ಯೋತಿರನಂತಶಕ್ತಿಂ ।
ಅಪುಣ್ಯಪಾಪಂಪರಪುಣ್ಯಹೇತುಂ
ನಮಾಮ್ಯಹಂವಂದ್ಯಮವಂದಿತಾರಂ ॥ ॥ ೩೩ ॥

೩೩. ತಾ॥ ಓ ವೀತರಾಗದೇವನೇ ! ಹಿಂದೆ ಹೇಳಿದಂತೆ ತಮ್ಮ ಸ್ತೋತ್ರಾದಿಗಳೇ ಸಾಧನವಾಗಿರುವುದರಿಂದ ಮೂರುಲೋಕವೆಂಬ ಪಟ್ಟಣಕ್ಕೆ ಅಧಿಪತಿಯಾಗಿಯೂ ನಿತ್ಯರಾಗಿಯೂ, ಪರಂಜ್ಯೋತಿಸ್ವರೂಪರಾಗಿಯೂ, ಅನಂತಶಕ್ತಿಯುಳ್ಳವರಾಗಿಯೂ, ಪುಣ್ಯಪಾಪಗಳೆರಡೂ ಇಲ್ಲದವರಾಗಿಯೂ, ಸೇವೆಮಾಡುವ ಭವ್ಯಾತ್ಮರಪುಣ್ಯಕ್ಕೆ ಕಾರಣಭೂತರಾಗಿಯೂ, ಸಮಸ್ತರಿಂದಲೂ ನಮಸ್ಕರಿಸಲ್ಪಡತಕ್ಕವರಾಗಿಯೂ, ಯಾರಿಗೂ ನಮಸ್ಕಾರವನ್ನು ಮಾಡದವ

ರಾಗಿಯೂ, ಇರುವ ತಮ್ಮನ್ನು ನಾನು ನಮಸ್ಕರಿಸುತ್ತೇನೆ. ಇಷ್ಟುಗುಣವುಳ್ಳವರೇ ನಿಜವಾದ ದೇವರೆಂದಭಿಪ್ರಾಯವು.

ಅಶಬ್ದಮಸ್ಪರ್ಶಮರೂಪಗಂಧಂ
ತ್ವಾಂನೀರಸಂತದ್ವಿಷಯಾವಬೋಧಂ ।
ಸರ್ವಸ್ಯಮಾತಾರಮಮೇಯಮನ್ಯೈ
ರ್ಜಿನೇಂದ್ರಮಸ್ಮಾರ್ಯಮನುಸ್ಮರಾಮಿ ॥ ೩೪ ॥

೩೪. ತಾ॥ ಓ ಜಿನೇಂದ್ರರೇ ! ಈ ಪ್ರತ್ಯಕ್ಷಸಿದ್ಧವಾದಂತಹ ಪೃಥಿವೀ ಜಲ ತೇಜಸ್ಸು ವಾಯು ಆಕಾಶ ರೂಪಗಳಾದ ಜಡವಸ್ತುಗಳಂತೆ ಶಬ್ದಸ್ಪರ್ಶರೂಪಗಂಧರಸಗಳೆಂಬ ಪಂಚೇಂದ್ರಿಯಗಳಿಂದ ತಿಳಿಯಲ್ಪಡುವ ಗುಣಗಳಿಲ್ಲದವರಾಗಿಯೂ, ಕೇವಲಜ್ಞಾನವೇ ಆಕಾರವಾಗಿವುಳ್ಳವರಾಗಿಯೂ, ಸರ್ವಜ್ಞರಾಗಿಯೂ, ಮೂಢರಿಂದ ತಿಳಿಯಲಶಕ್ಯವಾದ ಪರತತ್ವಸ್ವರೂಪರಾಗಿಯೂ ಇರುವ ತಮ್ಮನ್ನು ಸ್ಮರಿಸುವದಕ್ಕಶಕ್ಯಸ್ವರೂಪರಾಗಿದ್ದರೂ ಹೆಜ್ಜೆಹೆಜ್ಜೆಗೂ ಸ್ಮರಿಸುತ್ತೇನೆ. ವೀತರಾಗಪರಮಾತ್ಮನ ಪರಿಶುದ್ಧ ಸ್ವರೂಪವು ಜಗದ್ವಿಲಕ್ಷಣವೆಂದಭಿಪ್ರಾಯವು.

ಅಗಾಧಮನ್ಯೈರ್ಮನಸಾಪ್ಯಲಂಘ್ಯಂ
ನಿಷ್ಕಿಂಚನಂಪ್ರಾರ್ಥಿತಮರ್ಥವದ್ಭಿಃ ।
ವಿಶ್ವಸ್ಯಪಾರಂತಮದೃಷ್ಟಪಾರಂ
ಪತಿಂಜಿನಾನಾಂಶರಣಂವ್ರಜಾಮಿ ॥ ೩೫ ॥

೩೫. ತಾ॥ ಸ್ವಾಮಿಯೇ ! ಅಪರಿಚ್ಛಿನ್ನಜ್ಞಾನಾನಂದಸ್ವರೂಪ ಪರಿಶುದ್ಧಪರಮಾತ್ಮನೆನಿಸಿ ಅನಂತಜ್ಞಾನಾದಿ ಪರಿಪೂರ್ಣಪರತತ್ವವಾದುದರಿಂದ ಕೊನೆಗಾಣಲಶಕ್ಯರಾದ ಕರ್ಮಬದ್ಧರಾದ ಸಂಸಾರಿ ಆತ್ಮಗಳಿಂದ ಮನಸ್ಸಿನಿಂದಲೂ ದಾಟಲಸಾಧ್ಯವಾದ, ದೇಹದೇಹಾನುಬಂಧಿಗಳಾದ ಸಮಸ್ತವನ್ನೂ ಪರಿತ್ಯಜಿಸಿದ ವೈರಾಗ್ಯನಿಧಿಯಾದ, ತತ್ವಾರ್ಥವನ್ನು ತಿಳಿದವರಿಂದ ಪ್ರಾರ್ಥಿಸಲ್ಪಡತಕ್ಕ, ಮೋಕ್ಷಾಪೇಕ್ಷಿಗಳಾಗಿ ಹೇಯೋಪಾದೇಯ ವಿವೇಕಜ್ಞಾನವುಳ್ಳವರಿಂದ ತಿಳಿಯಲ್ಪಡತಕ್ಕ ಅರ್ಥಗಳಲ್ಲಿ ಕೊನೆಯ ಅರ್ಥವಾದ, ಲೋಕಾಗ್ರದಲ್ಲಿ ಸ್ಥಿತಿಯುಳ್ಳ, ಯಾರಿಂದಲೂ ತಿಳಿಯಲಾಗದ ಎಲ್ಲೆಯುಳ್ಳ, ಏಕದೇಶ

ಜಿನರುಗಳಿಗೆ ಪತಿಯಾದ ತಮ್ಮನ್ನು ಭವಭೀತನಾದ ನಾನು ರಕ್ಷಕರನ್ನಾಗಿ ಹೊಂದುತ್ತೇನೆ.

ತ್ರೈಲೋಕ್ಯದೀಕ್ಷಾಗುರವೇನಮಸ್ತೇ
ಯೋವರ್ಧಮಾನೋಪಿನಿಜೋನ್ನತೋಭೂತ್ ।
ಪ್ರಾಗ್ಗಂಡಶೈಲಃಪುನರದ್ರಿಕಲ್ಪಃ
ಪಶ್ಚಾನ್ನಮೇರುಃಕುಲಪರ್ವತೋಭೂತ್ ॥ ೩೬ ॥

೩೬. ತಾ॥ ಓ ಜಿನೇಶ್ವರರೆ ! ಯಾವ ಭಗವಂತನು ವೃದ್ಧಿಹೊಂದುತ್ತಿರುವವರಾಗಿದ್ದರೂ, ಸ್ವಭಾವದಿಂದಲೇ ಉನ್ನತರಾಗಿ ಆದರೋ ಅಂದರೆ ಇದು ವಿರೋಧಾರ್ಥವು. ವರ್ಧಮಾನರೆಂದು ಕರೆಯಲ್ಪಡುವರಾಗಿಯೂ, ಸ್ವಭಾವದಿಂದಲೇ ಸರ್ವೋತ್ಕೃಷ್ಟರಾದವರೊ ಎಂದು ಸಮಾಧಾನಾರ್ಥವು. ಹೇಗೆಂದರೆ ಮೇರುಪರ್ವತವು ಮೊದಲು ಒಂದು ಗುಂಡು ಕಲ್ಲಾಗಿದ್ದು ಕ್ರಮೇಣ ವೃದ್ಧಿಹೊಂದಿ ಬೆಟ್ಟವೆನಿಸಿ, ಅನಂತರ ಎಲ್ಲಾ ಪರ್ವತಗಳಿಗೂ ರಾಜನಾದ ಕುಲಪರ್ವತವಾದದ್ದಲ್ಲ. ಸ್ವಭಾವದಿಂದ ಮೊದಲೇ ಕುಲಪರ್ವತವಾಗಿತ್ತಲ್ಲವೆ ? ಆದರಂತೆ ತಾವೂಕೂಡ ಸ್ವಭಾವದಿಂದಲೇ ವರ್ಧಮಾನರೆನಿಸಿಕೊಂಡವರೇ ಹೊರತು ಸ್ವಲ್ಪ ಸ್ವಲ್ಪವಾಗಿ ಜ್ಞಾನಾದಿಗಳ ವೃದ್ಧಿ ಹೊಂದಿ ವರ್ಧಮಾನರೆನಿಸಿಸಲಿಲ್ಲವೆಂದಭಿಪ್ರಾಯವು. ಅಂತಹ ಮೂರುಲೋಕಕ್ಕೂ ಮೋಕ್ಷದೀಕ್ಷೆಯನ್ನು ಕೊಡುವ ಗುರುವೇ ತಮಗೆ ನಮಸ್ಕಾರವು.

ಸ್ವಯಂಪ್ರಕಾಶಸ್ಯದಿವಾನಿಶಾವಾ
ನಬಾಧ್ಯತಾಯಸ್ಯನಬಾಧಕತ್ವಂ ।
ನಲಾಘವಂಗೌರವಮೇಕರೂಪಂ
ವಂದೇವಿಭುಂಕಾಲಕಲಾಮತೀತಂ ॥ ೩೭ ॥

೩೭. ತಾ॥ ಓ ಜಿನನಾಥರೇ ! ಸ್ವಯಂಪ್ರಕಾಶಸ್ವರೂಪರಾದ ಯಾವ ಭಗವಂತನಿಗೆ ಹಗಲು, ರಾತ್ರಿಗಳೆಂಬ ಭೇದವಿಲ್ಲವೋ, ಅಂದರೆ ಸಮಸ್ತ ಸಂಬಂಧವನ್ನೂ ತ್ಯಜಿಸಿ ಪರಮಾತ್ಮ ಭಾವವನ್ನು ಹೊಂದಿದ ತಮಗೆ ಹಸಿವು, ಬಾಯಾರಿಕೆ, ಶೋಕ, ಮೋಹ, ಭಯ, ತಂದ್ರೀ, ನಿದ್ರಾ, ಆಲಸ್ಯ, ಶಂಕಾ ಮೊದಲಾದ ದೇಹಧರ್ಮಗಳಾದ ದೋಷಗಳು ಯಾವುದೂ ಇಲ್ಲವಾದುದರಿಂದ

ಹಗಲು ಮತ್ತು ರಾತ್ರಿಗಳೆಂಬೀಕಾಲಗಳಲ್ಲಿ ಲೋಕದ ಜನಗಳು ಮಾಡುವ ಯಾವ ಕೆಲಸವೂ ಇಲ್ಲವೆಂದರ್ಥವು. ಯಾವ ವೀತರಾಗಪರಮಾತ್ಮ ತತ್ವವಾದ ತಮ್ಮ ಕೇವಲಜ್ಞಾನವೆಂಬ ಪ್ರಕಾಶವು (ಲೋಕಾಲೋಕವನ್ನೆಲ್ಲಾ ಬೆಳಗುವುದಾದ ತಮ್ಮ ಜ್ಞಾನಜ್ಯೋತಿಯು) ಅಗ್ನಿ, ಸೂರ್ಯ, ಚಂದ್ರಾದಿ ಜ್ಯೋತಿಸ್ಸುಗಳಂತೆ ಯಾವುದನ್ನೂ ನಾಶಮಾಡುವುದಿಲ್ಲ. ತಾನೂಕೂಡ ಯಾವುದರಿಂದಲೂ ನಾಶವನ್ನು ಹೊಂದುವುದಿಲ್ಲ. ಹಾಗೆ ತಮ್ಮ ಜ್ಞಾನವೆಂಬ ಜ್ಯೋತಿಯು ಯಾವುದನ್ನೂ ಬಾಧಿಸುವುದೂ ಇಲ್ಲ. ಇತರ ಪದಾರ್ಥದಿಂದ ಬಾಧಿಸಲ್ಪಡುವುದೂ ಇಲ್ಲ. ಗುರುತ್ವ ಲಘುತ್ವಗಳಿಲ್ಲದೆ ಯಾವಾಗಲೂ ಏಕರೂಪವಾಗಿರುವ ಮತ್ತು ಕಾಲಕಲಾಪ್ರಯುಕ್ತ ಬಾಲ್ಯ ಯೌವನವಾರ್ಧಕ್ಯಗಳೆಂಬೀದೇಹಪಿಂಡ ಸಂಬಂಧಿಯಾದ ಅವಸ್ಥೆಗಳನ್ನು ಅತಿಕ್ರಮಿಸಿರುವ, ಅಂತಹ ಸರ್ವವ್ಯಾಪಕ ತತ್ವವಾದ ತಮ್ಮನ್ನು ನಮಸ್ಕರಿಸುತ್ತೇನೆ.

ಇತಿಸ್ತುತಿಂದೇವವಿಧಾಯದೈನ್ಯಾ
ದ್ವರಂನಯಾಚೇತ್ವಮುಪೇಕ್ಷಕೋಸಿ ।
ಛಾಯಾತರುಂಸಂಶ್ರಯತಃಸ್ವತಃಸ್ಯಾ
ತ್ಕಶ್ಛಾಯಯಾಯಾಚಿತಯಾತ್ಮಲಾಭಃ ॥ ೩೮ ॥

೩೮. ತಾ॥ ಓ ಪರಮಾತ್ಮನೇ ! ಈ ಪ್ರಕಾರ ಸ್ತೋತ್ರವನ್ನು ಮಾಡಿ ಇಹಪರಸುಖದಾಯಕವಾದ ಯಾವವರವನ್ನಾದರೂ ಕೊಡಬೇಕೆಂದು ದೀನವೃತ್ತಿಯಿಂದ ತಮ್ಮಲ್ಲಿ ನಾನು ಬೇಡಿಕೊಳ್ಳುವುದಿಲ್ಲ. ವರವನ್ನು ಕೊಡುವಿರೆಂದರೆ ತಾವು ವೀತರಾಗರಾಗಿದ್ದೀರಿ. ಆದರೆ ಬಿಸಿಲಿನಲ್ಲಿ ಬಳಲಿದವನು ಮರದ ನೆರಳಿನಲ್ಲಿ ಕುಳಿತುಕೊಳ್ಳುವುದರಿಂದ ಕ್ಲೇಶ ಪರಿಹಾರವಾಗುತ್ತದೆ. ಆ ಮರದ ನೆರಳನ್ನು ಬೇಡಿಕೊಂಡರೆ ಯಾವ ಫಲವು ಲಭಿಸುವುದು? ಸುಖವು ತಾನಾಗಿಯೇ ಉಂಟಾಗುತ್ತದೆ. ಅದರಂತೆ ಆಶ್ರಿತರ ದುಃಖಪರಿಹಾರವು ತಮ್ಮನ್ನು ಶರಣರನ್ನಾಗಿ ತಿಳಿದು ಹೊಂದುವುದರಿಂದಲೇ ಆಗುತ್ತದೆಂದಭಿಪ್ರಾಯವು.

ಅಥಾಸ್ತಿದಿತ್ಸಾಯದಿವೋಪರೋಧ
ಸ್ತ್ವಯ್ಯೇವಸಕ್ತಾಂದಿಶಭಕ್ತಿಬುದ್ಧಿಂ ।
ಕರಿಷ್ಯತೇದೇವತಥಾಕೃಪಾಂಮೇ
ಕೋವಾತ್ಮಪೋಷ್ಯೇಸುಮುಖೋನಸೂರಿಃ ॥ ೩೯ ॥

೩೯. ತಾ॥ ಓ ಅರ್ಹತ್ಪರಮೇಶ್ವರನೇ ! ನಾನು ಯಾವ ವರವನ್ನೂ ಕೇಳದಿದ್ದರೂ ನನಗೇನಾದರೊಂದು ವರವನ್ನು ಕೊಡಬೇಕೆಂದು ತಮಗೆ ಇಚ್ಛೆಯುಂಟಾದರೆ ನಾನು ತಡೆಮಾಡುವುದಿಲ್ಲ. ಆದರೆ ಆ ವರವು ಯಾವ ರೀತಿಯಾಗಿರಬೇಕೆಂದರೆ ನನ್ನ ಬುದ್ಧಿಯು ತಮ್ಮಲ್ಲಿಯೇ ಭಕ್ತಿರೂಪವಾಗಿ ಸೇರಿಕೊಂಡಿರಬೇಕು. ಹೇಗೆಂದರೆ, ಲೋಕದಲ್ಲಿ ಪ್ರಾಜ್ಞನಾದ ಯಾವನು ತಾನೇ ತನ್ನಿಂದ ಪೋಷಿಸಲ್ಪಡುವವನಿಗೆ ಶ್ರೇಯಸ್ಸನ್ನುಂಟುಮಾಡುವುದಿಲ್ಲ ? ತನ್ನ ಪೋಷ್ಯವರ್ಗದ ಪೋಷಣೆಯು ಪೋಷಿಸುವ ಪ್ರಭುವಿಗೆ ಆವಶ್ಯಕವೆಂದಭಿಪ್ರಾಯವು.

ವಿತರತಿವಿಹಿತಾಯಥಾಕಥಂಚಿ
ಜ್ಜಿನವಿನತಾಯಮನೀಷಿತಾನಿಭಕ್ತಿಃ ।
ತ್ವಯಿನುತಿವಿಷಯಾಪುನರ್ವಿಶೇಷಾ
ದ್ದಿಶತಿಸುಖಾನಿಯಶೋಧನಂಜಯಂಚ ॥ ೪೦ ॥

೪೦. ತಾ॥ ಓ ಜಿನೇಶ್ವರನೇ ! ತಮ್ಮ ಸ್ವರೂಪಸ್ವಭಾವ ಗುಣ ಮಹಿಮೆಯನ್ನರಿಯದೆ ಮಾಡಿದ ಭಕ್ತಿಯೂ ಕೂಡ ಭಕ್ತನಿಗೆ ಸಮಸ್ತ ಇಷ್ಟಾರ್ಥಗಳನ್ನು ಕೊಡುತ್ತದೆ. ತಮ್ಮಲ್ಲಿ ಸ್ತುತಿವಿಷಯವಾದ ಭಕ್ತಿಯನ್ನು ಮಾಡಿದ ಭಕ್ತನಿಗಾದರೋ ಆ ಭಕ್ತಿಯು ವಿಶೇಷವಾಗಿ ಇಹಪರಲೋಕಸುಖಗಳನ್ನೂ, ಯಶಸ್ಸನ್ನೂ, ಧನವನ್ನೂ ಮತ್ತು ಜಯವನ್ನೂ ಕೊಡುತ್ತದೆ. ಈ ಶ್ಲೋಕದಲ್ಲಿ "ಧನಂಜಯ" ಎಂದು ಕವಿಯ ನಾಮವು ಸೂಚಿಸಲ್ಪಟ್ಟಿದೆ. ಈ ಪ್ರಕಾರವಾಗಿ ಶ್ರೀ ಧನಂಜಯ ಮಹಾಕವಿಯು ವೀತರಾಗಪರಮಾತ್ಮ ಸ್ತೋತ್ರರೂಪವಾದ ವಿಷಾಪಹಾರ ಸ್ತೋತ್ರವನ್ನು ಭವ್ಯಾತ್ಮರ ಆತ್ಮಕಲ್ಯಾಣಕ್ಕೋಸ್ಕರ ಮಾಡಿ ಸಮಸ್ತ ಭವ್ಯಾತ್ಮರಿಗೆ ಶ್ರೇಯಃ (ಜಯ) ಪ್ರಾರ್ಥನಾ ರೂಪವಾಗಿ ಮುದ್ರಿಸಿ ಪೂರ್ತಿಮಾಡಿರುತ್ತಾರೆ.

॥ ಇತಿ ಶ್ರೀ ಧನಂಜಯಕವಿಕೃತಂ ॥

॥ ವಿಷಾಪಹಾರ ಸ್ತೋತ್ರಂ ॥

—★—

॥ ಶ್ರೀ ಭೂಪಾಲಕವಿಪ್ರಣೀತಾ ॥

— ಜಿನಚತುರ್ವಿಂಶತಿಕಾ —

ಭೂಪಾಲಸ್ತೋತ್ರಂ

ಶ್ರೀಲೀಲಾಯತನಂಮಹೀಕುಲಗೃಹಂಕೀರ್ತಿಪ್ರಮೋದಾಸ್ಪದಂ ।
ವಾಗ್ದೇವೀರತಿಕೇತನಂಜಯರಮಾಕ್ರೀಡಾನಿಧಾನಂಮಹತ್ ॥
ಸಸ್ಯಾತ್ಸರ್ವಮಹೋತ್ಸವೈಕಭವನಂಯಃಪ್ರಾರ್ಥಿತಾರ್ಥಪ್ರದಂ ।
ಪ್ರಾತಃಪಶ್ಯತಿಕಲ್ಪಪಾದಪದಳಚ್ಛಾಯಂಜಿನಾಂಘ್ರಿದ್ವಯಂ ॥ ೧ ॥

೧. ತಾ॥ ಓ ಭವ್ಯಾತ್ಮಗಳಿರಾ ! ಯಾವ ಮನುಷ್ಯನು ಕಲ್ಪವೃಕ್ಷದ ಚಿಗುರಿನಂತೆ ಸುಕುಮಾರನಾಗಿ ಪ್ರಕಾಶಿಸುತ್ತಿರುವುದಾಗಿಯೂ, ಮುಕ್ತಿಲಕ್ಷ್ಮಿಯ ವಿಲಾಸಗೃಹವಾಗಿಯೂ, ಭೂಮಿಗೆ ಕುಲಗೃಹಪ್ರಾಯವಾಗಿಯೂ, (ಸಮಸ್ತ ಪ್ರಾಣಿಗಳೂ ಆಶ್ರಯಿಸುವುದಕ್ಕೆ ಯೋಗ್ಯವಾದ ಸ್ಥಾನವಾಗಿಯೂ) ಮತ್ತು ಕೀರ್ತಿ ಸಂತೋಷಗಳಿಗೆ ಮೂಲಾಧಾರವಾಗಿಯೂ, ಸರಸ್ವತೀದೇವಿಗೆ ಕ್ರೀಡಾ ಗೃಹವಾಗಿಯೂ, ಜಯಲಕ್ಷ್ಮಿಯ ಕ್ರೀಡೆಗೆ ಯೋಗ್ಯವಾದ ಸ್ಥಾನವಾಗಿಯೂ, ಸಮಸ್ತ ಇಷ್ಟಾರ್ಥಗಳನ್ನೂ ಕೊಡುವುದಾಗಿಯೂ, ಇರುವ ಶ್ರೀ ಜಿನೇಂದ್ರ ಪಾದಗಳನ್ನು ಯಾರು ಪ್ರಾತಃಕಾಲದಲ್ಲಿ ದರ್ಶನಮಾಡುತ್ತಾರೋ ಅಂತಹವರು ಸಮಸ್ತ ಶ್ರೇಯಸ್ಸು(ಮಂಗಳ)ಗಳಿಗೂ ಮುಖ್ಯಸ್ಥಾನರಾಗುವರು.

ಶಾಂತಂವಪುಃಶ್ರವಣಹಾರಿವಚಶ್ಚರಿತ್ರಂ ।
ಸರ್ವೋಪಕಾರಿತವದೇವತತಃಶ್ರುತಜ್ಞಾಃ ॥
ಸಂಸಾರಮಾರವಮಹಾಸ್ಥಲರುಂದ್ರಸಾಂದ್ರ ।
ಚ್ಛಾಯಾಮಹೀರುಹಭವಂತಮುಪಾಶ್ರಯಂತೇ ॥ ೨ ॥

೨. ತಾ॥ ಓ ಜಿನರಾಜನೇ ! ತಮ್ಮ ಶರೀರವು ಶಾಂತವಾದದ್ದು. (ಪ್ರಾಣಿಗಳಿಗೆ ಶಾಂತವಾದ ಚಿತ್ತಪರಿಣಾಮವನ್ನುಂಟುಮಾಡುವಂತಹುದು). ತಮ್ಮ ದಿವ್ಯವಚನವು ಕಿವಿಗಳನ್ನಪಹರಿಸುವಂತಹುದು, (ಕರ್ಣಾನಂದಕರವಾದದ್ದು) ತಮ್ಮ ಚರಿತ್ರವು ಸರ್ವಪ್ರಾಣಿಗಳಿಗೂ ಉಪಕಾರವನ್ನು ಮಾಡುವಂತಹುದು. ಆದುದರಿಂದಲೇ ಶಾಸ್ತ್ರವನ್ನು ತಿಳಿದಂತಹ ಮಹನೀಯರು ತಮ್ಮನ್ನು ಸಂಸಾರವೆಂಬ ನೀರು ನೆರಳಿಲ್ಲದ ಮರಳು ಕಾಡಿನಲ್ಲಿ ವಿಸ್ತಾರವಾದ ಮತ್ತು ದಟ್ಟವಾದ ನೆರಳುಳ್ಳ ಮರವನ್ನಾಗಿ ತಿಳಿದು ಸಂಸಾರ ದುಃಖಗಳನ್ನು ಪರಿಹರಿಸಿಕೊಳ್ಳುವುದಕ್ಕೋಸ್ಕರ ಆಶ್ರಯಿಸುತ್ತಾರೆ.

ಸ್ವಾಮಿನ್ನದ್ಯವಿನಿರ್ಗತೋಸ್ಮಿ ಜನನೀಗರ್ಭಾಂಧಕೂಪೋದರಾ ।
ದದ್ಯೋದ್ಘಾಟಿತದೃಷ್ಟಿರಸ್ಮಿ ಫಲವಜ್ಜನ್ಮಾಸ್ಮಿ ಚಾದ್ಯಸ್ಫುಟಂ ॥
ತ್ವಾಮದ್ರಾಕ್ಷಮಹಂಯದಕ್ಷಯಪದಾನಂದಾಯ ಲೋಕತ್ರಯೀ ।
ನೇತ್ರೇಂದೀವರಕಾನನೇಂದುಮಮೃತಸ್ಯಂದಿಪ್ರಭಾಚಂದ್ರಿಕಂ ॥ ೩ ॥

೩. ತಾ॥ ಓ ಸ್ವಾಮಿಯೇ! ಮೂರುಲೋಕದಲ್ಲಿರುವ ಪ್ರಾಣಿಗಳ ಕಣ್ಣುಗಳೆಂಬ ಕನ್ನೈದಿಲೇ ಪುಷ್ಪಗಳ ಅರಣ್ಯ (ಸಮೂಹ) ಕ್ಕೆ ಚಂದ್ರರಾದಂತಹ ಅಮೃತವನ್ನು ವರ್ಷಿಸುತ್ತಿರುವ ಪ್ರಭೆಯೆಂಬ ಬೆಳದಿಂಗಳುಳ್ಳಂತಹ, ಅಂದರೆ ಅಮೃತದಂತೆ ಸರ್ವೇಂದ್ರಿಯಾನಂದಕರವಾದ ತಮ್ಮನ್ನು ನಿತ್ಯನಿರ್ಬಾಧವಾಗಿ ನಿರತಿಶಯಾನಂದ ರೂಪವಾದ ಮೋಕ್ಷಕ್ಕೋಸ್ಕರ ದರ್ಶನವನ್ನು ಮಾಡಿದೆನಾದಕಾರಣ ಈಗ ನಾನು ತಾಯಿಯ ಗರ್ಭವೆಂಬ ಕತ್ತಲೆಯ ಬಾವಿಯಿಂದ ಈಚೆಗೆ ಬಂದೆನು. ಈಗ ತೆರೆಯಲ್ಪಟ್ಟ ಕಣ್ಣುಳ್ಳವನಾದೆನು. ಈಗ ಜನ್ಮವು ಸಫಲವಾಯಿತು, ನಿಶ್ಚಯವು. ಅಂದರೆ, ಈ ಚತುರ್ಗತಿಗಳಲ್ಲಿ ಆತ್ಮನು ಮೋಹಾಕ್ರಾಂತನಾಗಿ ಭೋಗರಸ ಪರವಶನಾಗಿ ಎಷ್ಟುಕಾಲ ಎಷ್ಟು ದುಃಖಕರವಾದ ಜನ್ಮಗಳನ್ನೆತ್ತುತ್ತಾನೋ ಅಷ್ಟು ಜನ್ಮಗಳೂ ನಿಷ್ಫಲವೆಂದೂ ಯಾವ ಜನ್ಮದಲ್ಲಿ ಮಹಾ ಪುಣ್ಯವಿಶೇಷದಿಂದ ಶ್ರೀ ಜಿನೇಶ್ವರನ ಪೂಜಾಭಕ್ತಿ ಸ್ತುತಿಗಳಲ್ಲಿ ಪ್ರವರ್ತಿಸುತ್ತಾನೋ ಆ ಜನ್ಮವೇ ಸಫಲವೆಂದೂ, ಅದೇ ಮೋಕ್ಷಯೋಗ್ಯವಾದ ಜನ್ಮವೆಂದೂ ತಾತ್ಪರ್ಯವು.

ನಿಶ್ಶೇಷತ್ರಿದಶೇಂದ್ರಶೇಖರಶಿಖಾರತ್ನಪ್ರದೀಪಾವಳೀ ।
ಸಾಂದ್ರೀಭೂತಮೃಗೇಂದ್ರವಿಷ್ಟರತಟೀಮಾಣಿಕ್ಯದೀಪಾವಳಿಃ ॥
ಕ್ವೇಯಂಶ್ರೀಃಕ್ವಚನಿಃಸ್ಪೃಹತ್ವಮಿದಮಿತ್ಯೂಹಾತಿಗಸ್ತ್ವಾದೃಶಃ ।
ಸರ್ವಜ್ಞಾನದೃಶಶ್ಚರಿತ್ರಮಹಿಮಾಲೋಕೇಶಲೋಕೋತ್ತರಃ ॥೪॥

೪. ತಾ॥ ಸರ್ವಜ್ಞರಾಗಿ ಸರ್ವವನ್ನೂ ಜ್ಞಾನದೃಷ್ಟಿಯಿಂದ ನೋಡುತ್ತಿರುವ ಜಿನೇಂದ್ರರೇ ! ಓ ಜಗತ್ಪತಿಯೇ ! ಸಮಸ್ತ ದೇವೇಂದ್ರರ ರತ್ನಕಿರೀಟಗಳ ಶಿಖಾಮಣಿರತ್ನಪ್ರದೀಪಗಳ ಕಾಂತಿಪರಂಪರೆಯಿಂದ ವ್ಯಾಪ್ತವಾದ ಸಿಂಹಾಸನದ ಸುತ್ತಲೂ ಇರುವ ಮಾಣಿಕ್ಯದೀಪಗಳ ಪರಂಪರೆಯುಳ್ಳ ತಮ್ಮ ಈ ಸಂಪತ್ತೆಲ್ಲಿ ? ಈ ವೈರಾಗ್ಯವೆಲ್ಲಿ ? ಎಂಬ ಈ ಊಹೆಯನ್ನು ಮೀರಿರುವ ತಮ್ಮಂತಹ ಸರ್ವಜ್ಞಾನದರ್ಶನವುಳ್ಳವರ ಚರಿತ್ರಮಾಹಾತ್ಮ್ಯವು ಲೋಕದಲ್ಲಿ ಸರ್ವೋತ್ಕೃಷ್ಟವಾದದ್ದು.

ರಾಜ್ಯಂಶಾಸನಕಾರಿನಾಕಪತಿಯತ್ತ್ಯಕ್ತಂತೃಣಾವಜ್ಞಯಾ ।
ಹೇಲಾನಿರ್ದಳಿತತ್ರಿಲೋಕಮಹಿಮಾಯನ್ಮೋಹಮಲ್ಲೋಜಿತಃ ॥
ಲೋಕಾಲೋಕಮಪಿಸ್ವಬೋಧಮುಕುರಸ್ಯಾಂತಃಕೃತಂಯತ್ತ್ವಯಾ
ಸೈಷಾಶ್ಚರ್ಯಪರಂಪರಾಜಿನವರಕ್ವಾನ್ಯತ್ರಸಂಭಾವ್ಯತೇ ॥ ೫ ॥

೫. ತಾ॥ ಓ ಜಿನಪತಿಯೇ ! ದೇವೇಂದ್ರನೇ ತಮ್ಮ ಆಜ್ಞಾಧಾರಕನಾಗಿವುಳ್ಳ (ಸ್ವರ್ಗಾಧಿಪತಿಯಾದ ದೇವೇಂದ್ರನು ಸ್ವಾಮಿಯಾದ ತಾವು ಯಾವುದನ್ನಾದರೂ ಆಜ್ಞಾಪಿಸಿದರೆ ಸಾಕು ತಾನು ಧನ್ಯನಾಗುತ್ತೇನೆಂದು ನಿರೀಕ್ಷಿಸಿರುವಂತಹ) ರಾಜ್ಯಸಂಪತ್ತನ್ನು ಹುಲ್ಲಿಗಿಂತಲೂ ಕಡೆಯನ್ನಾಗಿ ಎಣಿಸಿ ನಿರ್ವಾಣ ದೀಕ್ಷೆಯನ್ನಂಗೀಕರಿಸಿ ಮೋಹನೀಯ ಕರ್ಮವೆಂಬ ಮಹಾ ವೀರನಾದ ಆತ್ಮಶತ್ರುವನ್ನು ಜಯಿಸಿ ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಂತೆ ಪ್ರತಿಫಲಿಸಿ ಕಾಣುತ್ತಿರುವ ಲೋಕಾಲೋಕಗಳುಳ್ಳ ಕೇವಲಜ್ಞಾನವನ್ನೂ ಪಡೆದಿರಿ. ಈ ಆಶ್ಚರ್ಯಪರಂಪರೆಯು ತಮ್ಮಂತಹ ಜಿನನಾಥರನ್ನು ಬಿಟ್ಟು ಮತ್ತಾರಲ್ಲಿ ಊಹಿಸಲು ಸಾಧ್ಯ ? ಎಲ್ಲಿಯೂ ಇಲ್ಲವೆಂದರ್ಥವು.

ದಾನಂಜ್ಞಾನಧನಾಯದತ್ತಮಸಕೃತ್ಪಾತ್ರಾಯಸದ್ವೃತ್ತಯೇ ।
ಚೀರ್ಣಾನ್ಯುಗ್ರತಪಾಂಸಿತೇನಸುಚಿರಂ ಪೂಜಾಶ್ಚ ಬಹ್ವಿಃಕೃತಾಃ ॥
ಶೀಲಾನಾಂನಿಚಯಃಸಹಾಮಲಗುಣೈಃಸರ್ವಸ್ಸಮಾಸಾದಿತೋ ।
ದೃಷ್ಟಸ್ತ್ವಂಜಿನಯೇನದೃಷ್ಟಿಸುಭಗಃಶ್ರದ್ಧಾಪರೇಣಕ್ಷಣಂ ॥ ೬ ॥

೬. ತಾ॥ ಓ ಜಿನೇಶ್ವರರೇ ! ಯಾವ ಭವ್ಯಾತ್ಮನು ತಮ್ಮನ್ನು ಸ್ವಲ್ಪ ಕಾಲವಾದರೂ ಶ್ರದ್ಧಾತಿಶಯದಿಂದ ದರ್ಶನ ಮಾಡುವನೋ ಅಂತಹ ಆತ್ಮನು ಸಮ್ಯಜ್ಞಾನ ದರ್ಶನ ಚಾರಿತ್ರಸಂಪನ್ನರಾದ ಮಹಾಮುನಿಗಳಿಗೆ ಆಹಾರ ದಾನವನ್ನು ಮಾಡಿದ ಮಹಾಪುಣ್ಯಕ್ಕೆ ಪಾತ್ರನಾದನೆಂದೂ, ಬಹುಕಾಲ ಉಗ್ರೋಗ್ರ ತಪಸ್ಸನ್ನು ಮಾಡಿದನೆಂದೂ, ತಮಗೆ ಬಹು ಪೂಜೆಯನ್ನು ಮಾಡಿದನೆಂದೂ, ದಯಾದಿ ಸಮಸ್ತ ಗುಣಗಳೊಡಗೂಡಿ ಉತ್ತಮ ಆಚಾರ ಸಂಪನ್ನನೆಂದೂ ತಿಳಿಯಬೇಕು. ಶ್ರದ್ಧಾಪೂರ್ವಕವಾದ ತಮ್ಮ ದರ್ಶನದಿಂದ ದಾನ, ಪೂಜಾ, ತಪಸ್ಸಿನ ಫಲವು ದೊರಕುತ್ತದೆಂದಭಿಪ್ರಾಯವು.

ಪ್ರಜ್ಞಾಪಾರಮಿತಸ್ಸಏವಭಗವಾನ್ಪಾರಂಸಏವಶ್ರುತ ।
ಸ್ಕಂಧಾಬ್ಧೇರ್ಗುಣರತ್ನಭೂಷಣಇತಿಶ್ಲಾಘ್ಯಸ್ಸಏವಧ್ರುವಂ ॥
ನೀಯಂತೇಜಿನಯೇನಕರ್ಣಹೃದಯಾಲಂಕಾರತಾಂತ್ವದ್ಗುಣಾಃ ।
ಸಂಸಾರಾಹಿವಿಷಾಪಹಾರಮಣಯಸ್ತ್ರೈಲೋಕ್ಯಚೂಡಾಮಣೇ ॥೭॥

೭. ತಾ॥ ಓ ಮೂರುಲೋಕಕ್ಕೂ ಕಿರೀಟಾಗ್ರರತ್ನದಂತಿರುವ ಜಿನನಾಥರೇ! ಸಂಸಾರವೆಂಬ ಸರ್ಪದವಿಷವನ್ನು ಪರಿಹರಿಸುವ ಮಣಿಯಂತಿರುವ ತಮ್ಮ ಗುಣಗಳನ್ನು ಯಾರು ಕಿವಿಯಿಂದ ಕೇಳಿ ಮನಸ್ಸಿನಲ್ಲಿ ಧರಿಸಿ ಧ್ಯಾನಿಸುವನಾಗಿ ಆನಂದ ಪಡುತ್ತಾನೋ ಅವನೇ ಜ್ಞಾನದ ಪಾರವನ್ನು ಹೊಂದಿದವನೆಂದೂ, ಶಾಸ್ತ್ರವೆಂಬಸಮುದ್ರದ ತೀರವನ್ನು ಹೊಂದಿದವನೆಂದೂ ಮತ್ತು ತಮ್ಮ ಗುಣ ಗಳೆಂಬ ರತ್ನಾಭರಣವುಳ್ಳವನೆಂದೂ ಶ್ಲಾಘಿಸುವುದಕ್ಕೆ ಯೋಗ್ಯನಾದವನು, ಇದು ನಿಶ್ಚಯ. ತಮ್ಮ ಗುಣಶ್ರವಣದಲ್ಲಿ ಶ್ರದ್ಧೆಯುಳ್ಳವನು ಲೋಕಶ್ಲಾಘ್ಯ ನೆಂದಭಿಪ್ರಾಯವು.

ಜಯತಿದಿವಿಜಬೃಂದಾಂದೋಳಿತೈರಿಂದುರೋಚಿ ।
ರ್ನಿಚಯರುಚಿಭಿರುಚ್ಚೈಶ್ಚಾಮರೈರ್ವೀಜ್ಯಮಾನಃ ॥
ಜಿನಪತಿರನುರಜ್ಯನ್ಮುಕ್ತಿಸಾಮ್ರಾಜ್ಯಲಕ್ಷ್ಮೀ ।
ಯುವತಿನವಕಟಾಕ್ಷಕ್ಷೇಪಲೀಲಾಂದಧಾನೈಃ ॥೮॥

೮. ತಾ॥ ಚಂದ್ರಕಿರಣಗಳ ರಾಶಿಯಂತೆ ನಿರ್ಮಲವಾಗಿ ಥಳಥಳಿಸು ತ್ತಿರುವ ಮತ್ತು ಮೋಕ್ಷಸಾಮ್ರಾಜ್ಯಲಕ್ಷ್ಮಿಯೆಂಬ ಯೌವನಶಾಲಿಯಾದ ಸ್ತ್ರೀಯು ಹೊಸದಾದ ಪ್ರೇಮರಸವನ್ನು ಸುರಿಸುತ್ತಿರುವ ಕಡೆಗಣ್ಣ ನೋಟವೋ ಎಂಬಂತಿರುವ ದೇವತೆಗಳ ಗುಂಪಿನಿಂದ ಬೀಸಲ್ಪಡುತ್ತಿರುವ ಉನ್ನತಗಳಾದ ಚಾಮರಗಳಿಂದ ಯಾವ ಜಿನಪತಿಯು ಬೀಸಲ್ಪಡುತ್ತಾನೋ ಅಂತಹ ಅಂತರಂಗ ಬಹಿರಂಗ ಲಕ್ಷ್ಮೀಪತಿಯಾದ ಶ್ರೀ ಜಿನಪತಿಯು ಸರ್ವೋತ್ಕೃಷ್ಟರಾಗಿದ್ದಾರೆ. ಇದರಿಂದ ಜಿನಪತಿಗೆ ಸರ್ವದೇವಾಧಿಕ್ಯವು ಹೇಳಲ್ಪಟ್ಟಿತು.

ದೇವಃಶ್ವೇತಾತಪತ್ರತ್ರಯಚಮರಿರುಹಾಶೋಕಭಾಶ್ಚಕ್ರಭಾಷಾ ।
ಪುಷ್ಪೌಘಾಸಾರಸಿಂಹಾಸನಸುರಪಟಹೈರಷ್ಟಭಿಃಪ್ರಾತಿಹಾರ್ಯೈಃ ॥
ಸಾಶ್ಚರ್ಯೈರ್ಭ್ರಾಜಮಾನಸ್ಸುರಮನುಜಸಭಾಂಭೋಜಿನೀ ಭಾನುಮಾಲೀ ।
ಪಾಯಾನ್ನಃಪಾದಪೀಠೀಕೃತಸಕಲಜಗತ್ಪಾಲಮೌಳಿರ್ಜಿನೇಂದ್ರಃ ॥೯॥

೯. ತಾ॥ ಮೂರು ಬಿಳೀಕೊಡೆಗಳಿಂದಲೂ, ದಿವ್ಯಚಾಮರಗ ಳಿಂದಲೂ, ಅಶೋಕವೃಕ್ಷದಿಂದಲೂ, ಭಾಮಂಡಲದಿಂದಲೂ ಏಕಕಾಲದಲ್ಲಿ ಸರ್ವಭಾಷಾಸ್ವರೂಪವಾಗಿ ಹೊರಡುತ್ತಿರುವ ದಿವ್ಯಧ್ವನಿಯಿಂದಲೂ, ದೇವತೆ ಗಳಿಂದ ವರ್ಷಿಸಲ್ಪಡುತ್ತಿರುವ ಪುಷ್ಪವೃಷ್ಟಿಯಿಂದಲೂ, ಸಿಂಹಾಸನದಿಂದಲೂ, ದೇವತೆಗಳ ಭೇರೀವಾದ್ಯಗಳಿಂದಲೂ (ಎಂಟುಪ್ರಾತಿಹಾರ್ಯಗಳಿಂದ) ಪ್ರಕಾಶಿಸುತ್ತಿರುವ, ದೇವತೆಗಳಿಂದಲೂ ಮನುಷ್ಯರಿಂದಲೂ ತುಂಬಿರುವ ಸಮ ವಸರಣ ಸಭೆಯೆಂಬ ಕಮಲದ ಬಳ್ಳಿಗೆ ಸೂರ್ಯನಂತಿರುವ ಮತ್ತು ಸಮಸ್ತ ಲೋಕಪಾಲಕರ ಕಿರೀಟಗಳನ್ನು ಪಾದಪೀಠಗಳನ್ನಾಗಿ ಮಾಡಿರುವಂತಹ ಶ್ರೀ ಜಿನೇಂದ್ರರು ನಮ್ಮನ್ನು ರಕ್ಷಿಸಲಿ.

ನೃತ್ಯತ್ಸ್ವರ್ದಂತಿದಂತಾಂಬುರುಹವನನಟನ್ನಾಕನಾರೀನಿಕಾಯಃ ।
ಸದ್ಯಸ್ತ್ರೈಲೋಕ್ಯಯಾತ್ರೋತ್ಸವಕರನಿನದಾ ತೋದ್ಯಮಾದ್ಯ
ನ್ನಿಲಿಂಪಃ ॥
ಹಸ್ತಾಂಭೋಜಾತಲೀಲಾವಿನಿಹಿತಸುಮನೋದಾಮರಮ್ಯಾಮರಸ್ತ್ರೀ।
ಕಾಮ್ಯಃಕಲ್ಯಾಣಪೂಜಾವಿಧಿಷುವಿಜಯತೇದೇವ ದೇವಾಗಮಸ್ತೇ
॥೧೦॥

೧೦. ತಾ॥ ಓ ವೀತರಾಗಪರಮಾತ್ಮನೇ ! ಸಕಲಭವ್ಯಾತ್ಮಗಳೆಂಬ ಪೈರುಗಳಿಗೆ ಹರ್ಷಾಮೃತ ವರ್ಷವನ್ನು ಮಾಡುತ್ತಿರುವ ತಮ್ಮ ಪಂಚಕಲ್ಯಾಣ ಪೂಜಾಕಾರ್ಯಗಳಲ್ಲಿ ದೇವತೆಗಳ ಬರುವಿಕೆಯು ಕುಣಿಯುತ್ತಿರುವ ಐರಾವತದ ದಂತಗಳಲ್ಲಿರುವ ಕಮಲವನಗಳಲ್ಲಿ ದೇವಸ್ತ್ರೀಸಮೂಹದ ನಾಟ್ಯವುಳ್ಳದ್ದಾಗಿಯೂ, ತತ್‌ಕ್ಷಣದಲ್ಲಿಯೇ ಮೂರುಲೋಕದ ಜನರಿಗೂ ಪ್ರಯಾಣೋತ್ಸವವನ್ನುಂಟುಮಾಡುವ ವಾದ್ಯಧ್ವನಿಗಳಿಂದ ಆನಂದಪರವಶರಾದ ದೇವತೆಗಳುಳ್ಳದ್ದಾಗಿಯೂ, ಮತ್ತು ದೇವತಾ ಸ್ತ್ರೀಯರು ತಮ್ಮ ಕಮಲದಂತಿರುವ ಕೈಗಳಲ್ಲಿಟ್ಟುಕೊಂಡಿರುವ ಕಲ್ಪವೃಕ್ಷದ ಪುಷ್ಪಮಾಲಿಕೆಗಳಿಂದ ಬಹಳ ಮನೋಹರವಾಗಿಯೂ ಸರ್ವೋತ್ಕೃಷ್ಟವಾಗಿದೆ. ದೇವತೆಗಳು ಗುಂಪುಗುಂಪಾಗಿ ತಮ್ಮ ಪಂಚಕಲ್ಯಾಣಪೂಜೆಗೋಸ್ಕರ ಪರಮ ಸಂತುಷ್ಟರಾಗಿ ಬರುತ್ತಿದ್ದರೆಂದರ್ಥವು.

ಚಕ್ಷುಷ್ಮಾನಹಮೇವದೇವಭುವನೇನೇತ್ರಾಮೃತಸ್ಯಂದಿನಂ ।
ತ್ವದ್ವಕ್ತ್ರೇಂದುಮತಿಪ್ರಸಾದಸುಭಗೈಸ್ತೇಜೋಭಿರುದ್ಭಾಸಿತಂ ॥
ಯೇನಾಲೋಕಯತಾಮಯಾನತಿಚಿರಾಚ್ಚಕ್ಷುಃಕೃತಾರ್ಥೀಕೃತಂ ।
ದ್ರಷ್ಟವ್ಯಾವಧಿವೀಕ್ಷಣವ್ಯತಿಕರವ್ಯಾಜೃಂಭಮಾಣೋತ್ಸವಂ ॥೧೧॥

೧೧. ತಾ॥ ಓ ವೀತರಾಗದೇವನೇ ! ದರ್ಶನವನ್ನು ಮಾಡುವಂತಹ ಪ್ರಾಣಿಗಳ ಕಣ್ಣಿಗೆ ಅಮೃತವನ್ನು ವರ್ಷಿಸುವಂತಹುದಾಗಿಯೂ, ಅತ್ಯಂತ ಸೌಮ್ಯವಾದ ತೇಜಸ್ಸಿನಿಂದ ಬಹಳವಾಗಿ ಪ್ರಕಾಶಿಸುವಂತಹುದಾಗಿಯೂ ಇರುವ ತಮ್ಮ ಮುಖವೆಂಬ ಚಂದ್ರನನ್ನು ದರ್ಶನ ಮಾಡಿದೊಡನೆಯೆ ನನ್ನ ಕಣ್ಣುಗಳನ್ನು ಸಾರ್ಥಕಪಡಿಸಿದೆನು. ಮತ್ತು ನೋಡತಕ್ಕ ವಸ್ತುಗಳಲ್ಲಿ ಕೊನೆ ಎನಿಸಿದ ತಮ್ಮ ದಿವ್ಯಮೂರ್ತಿಯ ಸಂದರ್ಶನದಿಂದ ನನ್ನ ಕಣ್ಣುಗಳನ್ನು

ಆನಂದಪರಿಪೂರ್ಣವನ್ನಾಗಿ ಮಾಡಿದೆನು. ಆದಕಾರಣದಿಂದಲೇ ಈ ಭೂಲೋಕದಲ್ಲಿ ಕಣ್ಣುಳ್ಳಪ್ರಾಣಿಗಳಲ್ಲಿ ನಾನೇ ಕಣ್ಣುಳ್ಳವನು. ಅಂದರೆ ವೀತರಾಗ ಭಗವಂತನನ್ನು ದರ್ಶನ ಮಾಡದಿರುವವರ ಕಣ್ಣುಗಳು ಇದ್ದರೂ ಇಲ್ಲವೆಂದರ್ಥವು.

ಕಂತೋಃಸಕಾಂತಮಪಿಮಲ್ಲಮವೈತಿಕಶ್ಚಿ ।
ನ್ಮುಗ್ಧೋಮುಕುಂದಮರವಿಂದಜಮಿಂದುಮೌಳಿಂ ॥
ಮೋಘೀಕೃತತ್ರಿದಶಯೋಷಿದಪಾಂಗಪಾತ ।
ಸ್ತಸ್ಯತ್ವಮೇವವಿಜಯೀಜಿನರಾಜಮಲ್ಲಃ ॥ ೧೨ ॥

೧೨. ತಾ॥ ಓ ಜಗತ್ಪತಿಯೇ ! ವಿಷ್ಣು, ಬ್ರಹ್ಮ, ಶಿವ ಇವರು ಲಕ್ಷ್ಮಿ, ಸರಸ್ವತಿ, ಪಾರ್ವತಿಯರೆಂಬ ಕಾಂತೆಯರೊಡನೆ ಕೂಡಿದ್ದರೂ ವಿಷ್ಣು, ಬ್ರಹ್ಮ, ಶಿವರು ವೀರಮನ್ಮಥ (ಕಾಮ) ನನ್ನು ಜಯಿಸಿದವರೆಂದು ಒಬ್ಬ ಮೂಢನು ತಿಳಿಯುತ್ತಾನೆ. ಇದು ಅಸಂಗತವು ಏಕೆಂದರೆ, ಆ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿಮೂರ್ತಿಗಳೂ ಸರ್ವದಾ ಸ್ತ್ರೀಲೋಲ (ಕಾಮವಶ)ರಾದವರು. ಹೀಗಿರುವಾಗ ಇವರು ಕಾಮನನ್ನು ಗೆದ್ದವರೆಂದು ಹೇಗೆ ಹೇಳಬಹುದು ? ದೇವತಾಸ್ತ್ರೀಯರ ಕಡೆಗಣ್ಣನೋಟಗಳೆಂಬ ಕಾಮಬಾಣಗಳನ್ನು ವ್ಯರ್ಥಪಡಿಸಿದ ತಾವೇ ಮನ್ಮಥನನ್ನು ಗೆದ್ದ ವೀರರಾಗಿದ್ದೀರಿ. ಅಂದರೆ ರಾಗಾಕ್ರಾಂತನಾದವನು ಕಾಮವಿಜಯಿ ಎಂಬುವುದು ಯುಕ್ತವೋ, ವೀತರಾಗನು ಕಾಮವಿಜಯಿ ಎಂಬುವುದು ಯುಕ್ತವೋ, ಎಂಬುದು ವಿವೇಕಿಗಳಿಗೆ ತಾನಾಗಿಯೇ ಗೊತ್ತಾಗುತ್ತದೆಂದಭಿಪ್ರಾಯವು.

ಕಿಸಲಯಿತಮನಲ್ಪಂತ್ವದ್ವಿಲೋಕಾಭಿಲಾಷಾ ।
ತ್ಕುಸುಮಿತಮತಿಸಾಂದ್ರಂತ್ವತ್ಸಮೀಪಪ್ರಯಾಣಾತ್ ॥
ಮಮಫಲಿತಮಮಂದಂತ್ವನ್ಮುಖೇಂದೋರಿದಾನೀಂ ।
ನಯನಪಥಮವಾಪ್ತಾದ್ದೇವಪುಣ್ಯದ್ರುಮೇಣ ॥ ೧೩ ॥

೧೩. ತಾ॥ ಓ ದೇವನೇ ! ನನಗೆ ತಮ್ಮ ದರ್ಶನದಲ್ಲಿ ಅಭಿಲಾಷೆಯುಂಟಾದುದರಿಂದ ಈ ನನ್ನ ಪುಣ್ಯವೆಂಬ ಮರವು ಬಹಳವಾಗಿ ಚಿಗುರಿದಂತಾಯಿತು, ತಮ್ಮ ಸನ್ನಿಧಾನಕ್ಕೆ ಪ್ರಯಾಣಮಾಡಿದುದರಿಂದ ಬಹಳ ದಟ್ಟವಾಗಿ

ಹೂವು ಬಿಟ್ಟಂತಾಯಿತು. ತಮ್ಮ ಮುಖವೆಂಬ ಚಂದ್ರನನ್ನು ದರ್ಶನಮಾಡಿ ದುದರಿಂದ ಫಲವುಳ್ಳಂತಾಯಿತು. ಅಂದರೆ ಪೂರ್ವಜನ್ಮದಲ್ಲಿ ಮಹಾ ಪುಣ್ಯ ವನ್ನು ಸಂಪಾದಿಸಿರುವ ಆತ್ಮನಿಗೆ ಜಿನೇಂದ್ರರ ದರ್ಶನಾಭಿಲಾಷೆಯೂ, ಪ್ರಯಾಣವೂ, ದರ್ಶನವೂ ದೊರೆಯುತ್ತದೆಯೇ ಹೊರತು ಎಲ್ಲರಿಗೂ ಸಾಮಾನ್ಯವಾಗಿ ದೊರೆಯತಕ್ಕದ್ದಲ್ಲವೆಂದು ವೀತರಾಗ ಪರಮಾತ್ಮನ ದರ್ಶನ ಮಹಿಮೆಯು ತಿಳಿಸಲ್ಪಟ್ಟಿತು.

ತ್ರಿಭುವನವನಪುಷ್ಪ್ಯತ್ಪುಷ್ಪ ಕೋದಂಡದರ್ಪ ।
ಪ್ರಸರದವನವಾಂಭೋಮುಕ್ತಿಸೂಕ್ತಿಪ್ರಸೂತಿಃ ॥
ಸಜಯತಿಜಿನರಾಜವ್ರಾತಜೀಮೂತಸಂಘಃ ।
ಶತಮುಖಶಿಖಿನೃತ್ಯಾರಂಭನಿರ್ಬಂಧಬಂಧುಃ ॥ ೧೪ ॥

೧೪. ತಾ॥ ಕಾಡಿನಲ್ಲಿ ಕಾಡುಗಿಚ್ಚು ಹತ್ತಿಕೊಂಡು ಅಭಿವೃದ್ಧಿಯನ್ನು ಹೊಂದುವಂತೆ ಮೂರುಲೋಕವೆಂಬ ಕಾಡಿನಲ್ಲಿ ವ್ಯಾಪಿಸಿಕೊಂಡು ಸಂತಾಪ ಪಡಿಸುವ ಕಾಮನ ಗರ್ವವೆಂಬ ಕಾಡುಗಿಚ್ಚಿನ ವ್ಯಾಪನೆಯನ್ನು ಆರಿಸುವ ನೀರಿನರೀತಿಯಲ್ಲಿರುವ, ಮೋಕ್ಷಕ್ಕೆ ಕಾರಣವಾದ ಸದ್ಧರ್ಮೋಪದೇಶಕ್ಕೆ ಸ್ಥಾನ ವಾದ, ದೇವೇಂದ್ರನೆಂಬ ನವಿಲಿನ ನರ್ತನಕ್ಕೆ ಕಾರಣವಾದ ಜಿನರಾಜಸಮೂಹ ವೆಂಬ ಮೇಘಸಮೂಹವು ಸರ್ವೋತ್ಕೃಷ್ಟವಾಗಿದೆ. ಅಂದರೆ ಮಳೆಗಾಲದ ಮೇಘವು ಜಲವನ್ನು ವರ್ಷಿಸಿ ಯಾವಪ್ರಕಾರ ಬೇಸಿಗೆಯ ಬಿಸಿಲಿನಿಂದ ಸಂತಪಿಸುತ್ತಿರುವ ಭೂಮಿಯ ಸಂತಾಪವನ್ನು ಹೋಗಲಾಡಿಸಿ ಈ ಜೀವ ಲೋಕವನ್ನು ಸಂರಕ್ಷಿಸುತ್ತದೆಯೋ ಹಾಗೆ ಜಿನೇಂದ್ರರು ಧರ್ಮೋಪದೇಶವನ್ನು ಮಾಡಿ ಸರ್ವ ಭವ್ಯಾತ್ಮರ ಸಂಸಾರದುಃಖಗಳನ್ನು ಪರಿಹರಿಸಿ ಮೋಕ್ಷವನ್ನೈದಿ ಸುತ್ತಾರೆಂದು ಭಾವವು.

ಭೂಪಾಲಸ್ವರ್ಗಪಾಲಪ್ರಮುಖನರಸುರಶ್ರೇಣಿನೇತ್ರಾಳಿಮಾಲಾ ।
ಲೀಲಾಚೈತ್ಯಸ್ಯಚೈತ್ಯಾಲಯಮಖಿಲಜಗತ್ಕೌಮುದೀಂದೋರ್ಜಿನಸ್ಯ ॥
ಉತ್ತಂಸೀಭೂತಸೇವಾಂಜಲಿಪುಟನಲಿನೀ ಕುಟ್ಮಲಸ್ತ್ರಿಃಪರೀತ್ಯ ।
ಶ್ರೀಪಾದಚ್ಛಾಯಯಾಪಸ್ಥಿತಭವದವಥುಃಸಂಶ್ರಿತೋಸ್ಮೀವಮುಕ್ತಿಂ
॥ ೧೫ ॥

೧೫. ತಾ॥ ಓ ಭಗವಂತನೇ! ಭೂಮಿಯನ್ನು ಪರಿಪಾಲಿಸುವ ರಾಜರು ಮತ್ತು ಸ್ವರ್ಗವನ್ನು ಪರಿಪಾಲಿಸುವ ದೇವೇಂದ್ರ ಮುಂತಾದ ಮನುಷ್ಯರ ಮತ್ತು ದೇವತೆಗಳ ಕಣ್ಣುಗಳೆಂಬ ಭ್ರಮರಗಳ ಸಾಲಿಗೆ ಸ್ಥಾನ ವೆನಿಸಿದ, ಸಕಲಜಗತ್ತಿಗೆ ಬೆಳದಿಂಗಳನ್ನುಂಟುಮಾಡುವ ಜಿನರಾಜನೆಂಬ ಚಂದ್ರನಿಗೆ ಸ್ಥಾನವೆನಿಸಿದ ಚೈತ್ಯಾಲಯವನ್ನು ತಲೆಗೆ ಅಲಂಕಾರಪ್ರಾಯವಾದ ಕಮಲದ ಮೊಗ್ಗಿನಂತಿರುವ ಮುಗಿದ ಕೈಗಳುಳ್ಳವನಾಗಿ ಮೂರು ಪ್ರದಕ್ಷಿಣೆ ಯನ್ನು ಮಾಡಿ ತಮ್ಮ ಶ್ರೀಪಾದದ ನೆರಳಿನಿಂದ ಸಮಸ್ತ ಸಂಸಾರ ಸಂತಾಪ ಗಳನ್ನು ದೂರಕ್ಕೆ ತಳ್ಳಿದವನಾಗಿ ಮೋಕ್ಷವನ್ನೇ ಪಡೆದೆನೋ ಎಂಬಂತೆ ಸಂತೋಷಿಸುತ್ತೇನೆ. ಅಂದರೆ ಜಿನಚೈತ್ಯಾಲಯಪ್ರದಕ್ಷಿಣ ನಮಸ್ಕಾರಪೂರ್ವಕ ವಾದ ಜಿನಪಾದ ದರ್ಶನಾನಂದವು, ಮೋಕ್ಷಸುಖ ಸಮಾನವೆಂದಭಿಪ್ರಾಯವು.

ದೇವತ್ವದಂಘ್ರಿನಖಮಂಡಲದರ್ಪಣೇಸ್ಮಿ ।
ನ್ನರ್ಘ್ಯೇನಿಸರ್ಗರುಚಿರೇಚಿರದೃಷ್ಟವಕ್ತ್ರಃ ॥
ಶ್ರೀಕೀರ್ತಿಕಾಂತಿಧೃತಿಸಂಗಮಕಾರಣಾನಿ ।
ಭವ್ಯೋನಕಾನಿಲಭತೇಶುಭಮಂಗಲಾನಿ ॥ ೧೬ ॥

೧೬. ತಾ॥ ಓ ಜಿನದೇವನೇ! ಜಗತ್ಪೂಜ್ಯವಾಗಿಯೂ, ಸ್ವಭಾವದಿಂದ ಕಾಂತಿಮಯವಾಗಿಯೂ, ಥಳಥಳಿಸುತ್ತಿರುವ ತಮ್ಮ ಪಾದಗಳಲ್ಲಿರುವ ಉಗುರುಗಳೆಂಬ ಮಂಡಲಾಕಾರವಾದ ಕನ್ನಡಿಯಲ್ಲಿ ಬಹಳಕಾಲ ಮುಖವನ್ನು ನೋಡಿಕೊಂಡ (ಶ್ರೀ ಜಿನೇಂದ್ರಪಾದಕಮಲಗಳನ್ನು ನಮಸ್ಕರಿಸಿದ)ಭವ್ಯಾತ್ಮನು ಕೀರ್ತಿ ಕಾಂತಿ, ಮತ್ತು ಧೈರ್ಯ ಇವುಗಳ ಪ್ರಾಪ್ತಿಗೆ ಕಾರಣವಾದಂತಹ ಯಾವ ಶುಭಮಂಗಳಗಳನ್ನು ಹೊಂದುವುದಿಲ್ಲ? ಸಮಸ್ತ ಮಂಗಳಗಳನ್ನೂ ಹೊಂದುತ್ತಾನೆಂದು ಭಾವವು.

ಜಯತಿಸುರನರೇಂದ್ರಶ್ರೀಸುಧಾನಿರ್ಝರಿಣ್ಯಾಃ ।
ಕುಲಧರಣಿಧರೋಯಂಜೈನಚೈತ್ಯಾಭಿರಾಮಃ ॥
ಪ್ರವಿಪುಲಫಲಧರ್ಮಾನೋಕಹಾಗ್ರಪ್ರವಾಳೆ ।
ಪ್ರಸರಶಿಖರಶುಂಭತ್ಕೇತನಶ್ರೀನಿಕೇತಃ ॥ ೧೭ ॥

೧೭. ತಾ॥ ಓ ಉಭಯಲಕ್ಷ್ಮೀರಮಣನಾದ ಅರ್ಹತ್ಪರಮೇಶ್ವರನೇ ! ಸಮಸ್ತ ಸಂಪತ್ತುಗಳಿಗೂ ವಾಸಸ್ಥಾನವಾಗಿರುವ ತಮ್ಮ ಚೈತ್ಯಾಲಯವು ಕುಲಪರ್ವತದಂತೆ ಸರ್ವೋತ್ಕೃಷ್ಟವಾಗಿ ಪ್ರಕಾಶಿಸುತ್ತಿದೆ. ಹಿಮವತ್ಪರ್ವತ ಮುಂತಾದ ಕುಲಪರ್ವತಗಳು ಹೇಗೆ ನದಿಗಳಿಗೆ ಉತ್ಪತ್ತಿಸ್ಥಾನಗಳಾಗಿವೆಯೋ ಹಾಗೆ ತಮ್ಮ ಚೈತ್ಯಾಲಯವು ಸಮಸ್ತ ರಾಜರ ಮತ್ತು ಇಂದ್ರಾದಿಗಳ ಸಂಪತ್ತೆಂಬ ಅಮೃತ ನದಿಗೆ ಉತ್ಪತ್ತಿಸ್ಥಾನವಾಗಿದೆ. ಕುಲಪರ್ವತವು ಹೇಗೆ ತುದಿಯಲ್ಲಿ ಬೆಳೆದಿರುವ ಮರದ ಚಿಗುರುಗಳಿಂದ ಕೆಂಪಗೆ ಪ್ರಕಾಶಿಸುತ್ತದೆಯೋ, ಹಾಗೆ ತಮ್ಮ ಚೈತ್ಯಾಲಯವೂ ವಿಸ್ತಾರವಾದ ಫಲಗಳುಳ್ಳ ಧರ್ಮವೆಂಬ ಮರದ ತುದಿಯಲ್ಲಿರುವ ಧ್ವಜ (ಬಾವುಟ) ವೆಂಬ ಚಿಗುರಿನಿಂದ ಪ್ರಕಾಶಿಸುತ್ತದೆ. ಆದುದರಿಂದ ತಮ್ಮ ಚೈತ್ಯಾಲಯವು ಕುಲಪರ್ವತದಂತೆ ಪ್ರಕಾಶಿಸುತ್ತಲಿದೆ. ಹೀಗೆ ಶ್ರೀಜಿನಚೈತ್ಯಾಲಯವು ವರ್ಣಿಸಲ್ಪಟ್ಟಿತು.

ವಿನಮದಮರಕಾಂತಾಕುಂತಲಾಕ್ರಾಂತಕಾಂತಿ ।
ಸ್ಫುರಿತನಖಮಯೂಖದ್ಯೋತಿತಾಶಾಂತರಾಳಃ ॥
ದಿವಿಜಮನುಜರಾಜವ್ರಾತಪೂಜ್ಯಕ್ರಮಾಬ್ಜೋ ।
ಜಯತಿವಿಜಿತಕರ್ಮಾರಾತಿಜಾಲೋಜಿನೇಂದ್ರಃ ॥ ೧೮ ॥

೧೮. ತಾ॥ ನಮಸ್ಕರಿಸುತ್ತಿರುವ ದೇವಸ್ತ್ರೀಯರ ತಲೆಕೂದಲುಗಳಲ್ಲಿ ವ್ಯಾಪಿಸಿರುವ ಕಾಂತಿಯಿಂದ ಥಳಥಳಿಸುತ್ತಿರುವ ಉಗುರುಗಳ ಕಾಂತಿಗಳಿಂದ ದಿಕ್ಕುಗಳ ಮಧ್ಯಭಾಗವನ್ನು ಬೆಳಗುತ್ತಿರುವವರಾಗಿಯೂ, ದೇವೇಂದ್ರ ಮತ್ತು ನರೇಂದ್ರರುಗಳ ಗುಂಪುಗಳಿಂದ ಪೂಜಿಸುವುದಕ್ಕೆ ಯೋಗ್ಯವಾದ ಪಾದಾರವಿಂದವುಳ್ಳವರಾಗಿಯೂ, ಸಮಸ್ತ ಕರ್ಮಗಳೆಂಬ ಶತ್ರುಗಳನ್ನು ಜಯಿಸಿದಂತಹವರಾಗಿಯೂ ಇರುವ ಶ್ರೀ ಜಿನೇಂದ್ರರು ಸರ್ವೋತ್ಕೃಷ್ಟರಾಗಿದ್ದಾರೆ.

ಸುಪ್ತೋತ್ಥಿತೇನಸುಮುಖೇನಸುಮಂಗಲಾಯ ।
ದ್ರಷ್ಟವ್ಯಮಸ್ತಿಯದಿಮಂಗಳಮೇವವಸ್ತು ॥
ಅನ್ಯೇನಕಿಂತದಿಹನಾಥತವೈವವಕ್ತ್ರಂ ।
ತ್ರೈಲೋಕ್ಯಮಂಗಳನಿಕೇತನಮೀಕ್ಷಣೀಯಂ ॥ ೧೯ ॥

೧೯. ತಾ॥ ಓ ಜಿನರಾಜನೇ ! ಮಲಗಿ ನಿದ್ರೆಯನ್ನು ಮಾಡಿ ಪ್ರಾತಃಕಾಲದಲ್ಲಿ ಎದ್ದು ಸೌಮ್ಯವಾದ ಮುಖವುಳ್ಳವನಾಗಿ ತನಗೆ ಒಳ್ಳೆಯದಾಗುವುದಕ್ಕೋಸ್ಕರ ಮಂಗಳವಸ್ತುವನ್ನು ನೋಡಲೇಬೇಕೆಂಬುದು ಇರುವ ಪಕ್ಷದಲ್ಲಿ ಮೂರು ಲೋಕಗಳಲ್ಲಿರುವ ಸಕಲ ಮಂಗಳಗಳಿಗೂ ವಾಸಸ್ಥಾನವಾದ ತಮ್ಮ ಮುಖಕ್ಕಿಂತಲೂ ಮತ್ತಾವ ವಸ್ತುವು ಮಂಗಳಕರವಾದದ್ದು ? ಅಂದರೆ ಮನುಷ್ಯನು ಪ್ರಾತಃಕಾಲದಲ್ಲಿ ಎದ್ದು ಸಕಲ ಜಗನ್ಮಂಗಲವಾದ ಜಿನರಾಜ ಮುಖಕಮಲದ ಸಂದರ್ಶನವನ್ನು ಮಾಡುವುದು ಸರ್ವೋತ್ಕೃಷ್ಟವಾದದ್ದೆಂದಭಿಪ್ರಾಯವು. ಮಂಗಳಾರ್ಥವಾಗಿ ಶ್ರೀ ಜಿನಮುಖಕಮಲವನ್ನು ಪ್ರತಿನಿತ್ಯವೂ ಪ್ರಾತಃಕಾಲದಲ್ಲಿ ನೋಡತಕ್ಕದ್ದೆಂದು ಶಾಸ್ತ್ರದಲ್ಲಿ ಹೇಳಲ್ಪಟ್ಟವಚನವು ಸ್ತೋತ್ರರೂಪವಾಗಿ ಇದರಿಂದ ಹೇಳಲ್ಪಟ್ಟಿದೆ.

ತ್ವಂಧರ್ಮೋದಯತಾಪಸಾಶ್ರಮಶುಕಸ್ತ್ವಂಕಾವ್ಯಬಂಧಕ್ರಮ ।
ಕ್ರೀಡಾನಂದನಕೋಕಿಲಸ್ತ್ವಮುಚಿತಃಶ್ರೀಮಲ್ಲಿಕಾಷಟ್ಪದಃ ॥
ತ್ವಂಪುನ್ನಾಗಕಥಾರವಿಂದಸರಸೀಹಂಸಸ್ತ್ವಮುತ್ತಂಸಕೈಃ ।
ಕೈರ್ಭೂಪಾಲನಧಾರ್ಯಸೇಗುಣಮಣಿಸ್ರಙ್ಮಾಲಿಭಿರ್ಮೌಳಿಭಿಃ ॥
॥ ೨೦ ॥

೨೦. ತಾ॥ ಓ ಜಗತ್ಪರಿಪಾಲಕರಾದ ಸ್ವಾಮಿಯೇ ! ತಾವು ಧರ್ಮದ ಉದಯವೆಂಬ ಮುನಿಗಳ ವಾಸಸ್ಥಾನಕ್ಕೆ ಗಿಣಿಯಂತಿರುವಿರಿ. ತಾವು ತಮ್ಮ ವಿಷಯವಾದ ಕಾವ್ಯರಚನೆಯೆಂಬ ಕ್ರಮವುಳ್ಳ ಆಟದಿಂದ ಆನಂದವನ್ನುಂಟುಮಾಡುವ ಕೋಗಿಲೆಯಂತಿರುವಿರಿ. ತಾವು ಸಕಲಸಂಪತ್ತೆಂಬ ಮಲ್ಲಿಗೆ ಹೂವಿಗೆ ಭ್ರಮರದಂತಿರುವಿರಿ. ತಾವು ಪುರುಷಶ್ರೇಷ್ಠರ ಕಥೆಯೆಂಬ ಕಮಲ ಸರೋವರಕ್ಕೆ ಹಂಸಪಕ್ಷಿಯಂತಿರುವಿರಿ. ತಾವು ಯಾವ ಉತ್ತಮ ಪುರುಷರಿಂದ, ತಮ್ಮ ಗುಣಗಳೆಂಬ ರತ್ನಮಾಲಿಕೆಯುಳ್ಳ ಕಿರೀಟಾಲಂಕೃತವಾದ ಶಿರಸ್ಸುಗಳಿಂದ ಧರಿಸಲ್ಪಡುವುದಿಲ್ಲ ? ಅಂದರೆ ಸಮಸ್ತ ನರೇಂದ್ರ ಸುರೇಂದ್ರ ನಾಗೇಂದ್ರಾದಿ ಭಕ್ತಜನರ ಮಸ್ತಕಗಳಿಂದಲೂ ತಮ್ಮ ಗುಣಮಣಿಮಾಲಿಕೆಯು ಆಭರಣಪ್ರಾಯವಾಗಿ ಧರಿಸಲ್ಪಡುತ್ತದೆಂದರ್ಥವು. ಜಿನೇಂದ್ರಗುಣಸ್ತುತಿಯೇ ರತ್ನಮಾಲಿಕೆಯಂತೆ ಎಂದು ಭಾವವು.

ಶಿವಸುಖಮಜರಶ್ರೀಸಂಗಮಂಚಾಭಿಲಷ್ಯ ।
ಸ್ವಮಭಿನಿಗಮಯಂತಿಕ್ಲೇಶಪಾಶೇನಕೇಚಿತ್ ॥
ವಯಮಿಹತುವಚಸ್ತೇಭೂಪತೇರ್ಭಾವಯಂತ ।
ಸ್ತದುಭಯಮಪಿಶಶ್ವಲ್ಲೀಲಯಾನಿರ್ವಿಶಾಮಃ ॥ ೨೧ ॥

೨೧. ತಾ॥ ಓ ಜಿನಪತಿಯೇ ! ಈ ಲೋಕದಲ್ಲಿ ಕೆಲವರು ಮೋಕ್ಷ ಸುಖವನ್ನಪೇಕ್ಷಿಸಿಯೂ, ಇನ್ನು ಕೆಲವರು ಸ್ವರ್ಗಭೋಗವನ್ನಪೇಕ್ಷಿಸಿಯೂ, ತಮ್ಮ ಆತ್ಮನನ್ನು ಕ್ಲೇಶವೆಂಬ ಹಗ್ಗದಿಂದ ಕಟ್ಟುತ್ತಾರೆ. ಅಂದರೆ ಮೋಕ್ಷವನ್ನಾಗಲಿ ಅಥವಾ ಸ್ವರ್ಗವನ್ನಾಗಲಿ ಪಡೆಯಬೇಕೆಂಬ ಅಭಿಲಾಷೆಯಿಂದ ಉಗ್ರೋಗ್ರತಪಸ್ಸುಗಳನ್ನು ಮಾಡುತ್ತಾರೆಂದರ್ಥವು. ನಾವಾದರೋ ಜಗತ್ಪತಿಯಾದ ತಮ್ಮ ಪ್ರಥಮಾನುಯೋಗ ಕರಣಾನುಯೋಗ ಚರಣಾನುಯೋಗ ದ್ರವ್ಯಾನುಯೋಗ ರೂಪವಾಗಿರುವ ದಿವ್ಯವಾಣಿಯನ್ನು ಭಾವಿಸುವವರಾಗಿ ಅಂದರೆ ಮೋಕ್ಷಮಾರ್ಗವಾದ ರತ್ನತ್ರಯವನ್ನು ಪ್ರಕಾಶಪಡಿಸುವಂತಹ ಜಿನವಾಣಿ ವಿಚಾರಪರರಾಗಿ ಕ್ಲೇಶವಿಲ್ಲದೆ ಆ ಸ್ವರ್ಗ ಮೋಕ್ಷಜನ್ಯವಾದ ಎರಡು ಸುಖಗಳನ್ನೂ ಬಾರಿಬಾರಿಗೂ ಅನುಭವಿಸುತ್ತಿದ್ದೇವೆ, ಜಿನವಾಣೀಸಾರಜ್ಞರ ಆನಂದವು ಸ್ವರ್ಗ ಮೋಕ್ಷ ಸುಖಸಮಾನವೆಂದು ಭಾವವು.

ದೇವೇಂದ್ರಾಸ್ತ್ರವಮಜ್ಜನಾನಿವಿದಧುರ್ದೇವಾಂಗನಾಮಂಗಳಾ ।
ನ್ಯಾಪೇಠುಃಶರದಿಂದುನಿರ್ಮಲಯಶೋಗಂಧರ್ವದೇವಾಜಗುಃ ॥
ಶೇಷಾಶ್ಚಾಪಿಯಥಾನಿಯೋಗಮಖಿಲಸ್ಸೇವಾಂಸುರಾಶ್ಚಕ್ರಿರೆ ।
ತತ್ಕಿಂದೇವವಯಂವಿದಧ್ಮಇತಿನಶ್ಚಿತ್ತಂತುಡೋಲಾಯತೇ ॥ ೨೨ ॥

೨೨. ತಾ॥ ಓ ವೀತರಾಗಪರಮಾತ್ಮನೇ ! ಸೌಧರ್ಮಾದಿಕಲ್ಪೇಂದ್ರರುಗಳು ತಮಗೆ ಜನ್ಮಾಭಿಷೇಕ ಕಲ್ಯಾಣವನ್ನು ಮಾಡಿದರು. ದೇವಸ್ತ್ರೀಯರು ಮಂಗಳಗಾನವನ್ನು ಮಾಡಿದರು. ಗಂಧರ್ವ ದೇವತೆಗಳು ಶರತ್ಕಾಲದ ಪೂರ್ಣಚಂದ್ರನಂತೆ ಪರಮನಿರ್ಮಲವಾದ ತಮ್ಮ ಯಶಸ್ಸನ್ನು ಗಾನಮಾಡಿದರು. ಇತರ ದೇವರುಗಳು ಅವರವರ ಯೋಗ್ಯತಾನುಸಾರವಾಗಿ ಸ್ವಾಮಿಯ ಅಪ್ಪಣೆಯ ಪ್ರಕಾರ (ಶಾಸ್ತ್ರಾನುಸಾರ) ತಮ್ಮ ಸೇವೆಯನ್ನು ಮಾಡಿ ಧನ್ಯರಾದರು. ನಾವು ಯಾವ ಸೇವೆಯನ್ನು ಮಾಡಿ ಕೃತಾರ್ಥರಾಗಬಹುದೆಂದು

ನಮ್ಮ ಮನಸ್ಸು ಉಯ್ಯಾಲೆಯಾಡುತ್ತಿದೆ. ಅಂದರೆ ಆ ಜಿನಜನ್ಮಾಭಿಷೇಕ ಸೇವೆಯು ಪರಮ ದುರ್ಲಭವಾದುದರಿಂದ ಅಂತಹ ಸುಕೃತವನ್ನು ನಾವು ಹೇಗೆ ಪಡೆಯಲು ಯೋಗ್ಯರಾದೇವೆಂದು ಚಿಂತಿಸುತ್ತೇವೆಂದು ಭಾವವು.

ದೇವತ್ವಜ್ಜನನಾಭಿಷೇಕಸಮಯೇರೋಮಾಂಚಸತ್ಕಂಚುಕೈಃ ।
ದೇವೇಂದ್ರೈರ್ಯದನರ್ತಿನರ್ತನವಿಧೌಲಬ್ಧಪ್ರಭಾವೈಃಸ್ಫುಟಂ ॥
ಕಿಂಚಾನ್ಯತ್ಸುರಸುಂದರೀಕುಚತಟಪ್ರಾಂತಾವನದ್ಧೋತ್ತಮ ।
ಪ್ರೇಂಖದ್ವಲ್ಲಕಿನಾದಝಂಕೃತಮಹೋತತ್ಕೇನಸಂವರ್ಣ್ಯತೇ ॥
॥ ೨೩ ॥

೨೩. ತಾ॥ ಓ ದೇವನೇ ! ತಮ್ಮ ಜನ್ಮಾಭಿಷೇಕ ಸಮಯದಲ್ಲಿ ಆನಂದದಿಂದ ಕವಚದಂತೆ ಶರೀರದಲ್ಲಿ ವ್ಯಾಪ್ತವಾಗಿರುವ ಮೈಕೂದಲುಳ್ಳವರಾಗಿ ಮಹಾಮಹಿಮೆಯುಳ್ಳ ದೇವೇಂದ್ರರು ಯಾವ ನರ್ತನವನ್ನು ಮಾಡಿದರೋ ಮತ್ತು ದೇವಸ್ತ್ರೀಯರು ಸ್ತನಸಮೀಪದಲ್ಲಿಟ್ಟುಕೊಂಡು ಯಾವ ವೀಣಾಗಾನವನ್ನು ಮಾಡಿದರೋ ಆ ಆನಂದಪರವಶದಿಂದುಂಟಾದ ದೇವತೆಗಳ ಸೇವೆಯನ್ನು ವರ್ಣಿಸಲು ಯಾರು ಸಮರ್ಥರು ? ವರ್ಣಿಸಲಶಕ್ಯವೆಂದರ್ಥವು.

ದೇವತ್ವತ್ಪ್ರತಿಬಿಂಬಮಂಬುಜದಳಸ್ಮೇರೇಕ್ಷಣಂಪಶ್ಯತಾಂ ।
ಯತ್ರಾಸ್ಮಾಕಮಹೋಮಹೋತ್ಸವರಸೋದೃಷ್ಟೇರಿಯಾನ್ವರ್ತತೇ ॥
ಸಾಕ್ಷಾತ್ತತ್ರಭವಂತಮೀಕ್ಷಿತವತಾಂಕಲ್ಯಾಣಕಾಲೇತದಾ ।
ದೇವಾನಾಮನಿಮೇಷಲೋಚನತಯಾವೃತ್ತಸ್ಸಕಿಂವರ್ಣ್ಯತೇ ॥
॥ ೨೪ ॥

೨೪. ತಾ॥ ಓ ವೀತರಾಗಪ್ರಭುವೇ! ಈ ಕಾಲದಲ್ಲಿ ಈ ಕ್ಷೇತ್ರದಲ್ಲಿ ಕಮಲದ ಎಸಳಿನಂತೆ ಪ್ರಸನ್ನವಾಗಿಯೂ ಪರಮ ಸುಂದರವಾಗಿಯೂ ಇರುವ ನೇತ್ರಗಳುಳ್ಳ ತಮ್ಮ ಪ್ರತಿಬಿಂಬದ ದರ್ಶನವನ್ನು ಮಾಡುತ್ತಿರುವ ನಮ್ಮ ಕಣ್ಣುಗಳಿಗೆ ಈ ಪ್ರಕಾರವಾಗಿ ಹೇಳಲಶಕ್ಯವಾದ ನೇತ್ರಾನಂದವು ನಮ್ಮ ಅನುಭವೈಕ ವೇದ್ಯವಾಗುತ್ತಿರಲು ಆ ಜನ್ಮಾಭಿಷೇಕ ಕಾಲದಲ್ಲಿ ಪ್ರತ್ಯಕ್ಷವಾಗಿ ರೆಪ್ಪೆಇಲ್ಲದ ಕಣ್ಣುಗಳಿಂದ ತಮ್ಮನ್ನು ದರ್ಶನ ಮಾಡಿದ ದೇವತೆಗಳಿಗೆ ಉಂಟಾದ

ಸಂತೋಷವನ್ನು ವರ್ಣಿಸಲು ಯಾರು ಶಕ್ತರಾದಾರು ? ಆ ದೇವಾನಂದವನ್ನು ವರ್ಣಿಸಲು ಯಾರೂ ಶಕ್ತರಲ್ಲವೆಂದಭಿಪ್ರಾಯವು.

ದೃಷ್ಟಂಧಾಮರಸಾಯನಸ್ಯಮಹತಾಂದೃಷ್ಟಂನಿಧೀನಾಂಪದಂ ।
ದೃಷ್ಟಂಸಿದ್ಧರಸಸ್ಯಸದ್ಮಸದನಂದೃಷ್ಟಂಚಚಿಂತಾಮಣೇಃ ॥
ಕಿಂದೃಷ್ಟೈರಥವಾನುಷಂಗಿಕಫಲೈರೇಭಿರ್ಮಯಾದ್ಯಧ್ರುವಂ ।
ದೃಷ್ಟಂಮುಕ್ತಿವಿವಾಹಮಂಗಳಗೃಹಂದೃಷ್ಟೇಜಿನಶ್ರೀಗೃಹೇ ॥ ೨೫ ॥

೨೫. ತಾ॥ ಓ ಭವ್ಯಾತ್ಮರುಗಳಿರಾ ! ಶ್ರೀ ಜಿನಮಂದಿರವನ್ನು ದರ್ಶನ ಮಾಡಿದುದರಿಂದ ದಿವ್ಯರಸಾಯನವೆಂಬ ಔಷಧದ ಸ್ಥಾನವನ್ನೇ ದರ್ಶನಮಾಡಿದಂತಾಯಿತು. ಅಂದರೆ ಭವರೋಗ ವೈದ್ಯನಾದ ಶ್ರೀ ಜಿನೇಶ್ವರನ ಮಂದಿರದ ದರ್ಶನವೂಕೂಡಾ ಭವರೋಗವನ್ನು ಪರಿಹರಿಸುವ ದಿವ್ಯರಸಾಯನಪ್ರಾಯವೆಂದಭಿಪ್ರಾಯವು. ಮಹಾ ನಿಧಿಗಳ ಸ್ಥಾನವನ್ನು ನೋಡಿದಂತಾಯಿತು. ಸಿದ್ಧರಸಸ್ಥಾನವನ್ನು ಕಂಡಂತಾಯಿತು. ಅಪೇಕ್ಷಿತ ಸಮಸ್ತ ವಸ್ತುಗಳನ್ನು ಕೊಡುವ ಚಿಂತಾಮಣಿಯ ಸ್ಥಾನವನ್ನು ನೋಡಿದಂತಾಯಿತು. ಅಥವಾ ಅಪ್ರಧಾನ ಫಲಗಳನ್ನು ಕೊಡುವ ರಸಾಯನ ನಿಧಿ ಚಿಂತಾಮಣಿಗಳ ದರ್ಶನವು ಏನು ಪ್ರಯೋಜನ ? ನಾನು ಈಗ ಮೋಕ್ಷಲಕ್ಷ್ಮೀ ವಿವಾಹ ಮಂದಿರ ದರ್ಶನವನ್ನೇ ಮಾಡಿದೆನು, ಇದು ನಿಶ್ಚಯ. ಈ ಪ್ರಕಾರವಾಗಿ ಭೂಪಾಲ ಕವಿಯು ಜಿನಮಂದಿರ ದರ್ಶನದ ಮಹಿಮೆಯನ್ನು ತಿಳಿಸುತ್ತಾನೆ.

ದೃಷ್ಟಸ್ತ್ವಂಜಿನರಾಜಚಂದ್ರವಿಕಸದ್ಭೂಪೇಂದ್ರನೇತ್ರೋತ್ಪಲೈಃ ।
ಸ್ನಾತಂತ್ವನ್ನುತಿಚಂದ್ರಿಕಾಂಭಸಿಭವದ್ವಿದ್ವಚ್ಚಕೋರೋತ್ಸವೇ ॥
ನೀತಶ್ಚಾದ್ಯನಿದಾಘಜಃ ಕ್ಲಮಭರಃಶಾಂತಿಂಮಯಾಗಮ್ಯತೇ ।
ದೇವತ್ವದ್ಗತಚೇತಸೈವಭವತೋಭೂಯಾತ್ಪುನರ್ದರ್ಶನಂ ॥ ೨೬ ॥

೨೬. ತಾ॥ ಓ ಜಿನರಾಜಚಂದ್ರನೇ ! ತಾವು ಜನ್ಮಾಭಿಷೇಕ ಕಲ್ಯಾಣದಲ್ಲಿ ದರ್ಶನಾನಂದದಿಂದ ಅರಳುತ್ತಿರುವ ನರೇಂದ್ರ ದೇವೇಂದ್ರ ಮುಂತಾದ ಭವ್ಯಾತ್ಮರ ಕಮಲದಂತಿರುವ ಕಣ್ಣುಗಳಿಂದ ದರ್ಶನಮಾಡಲ್ಪಟ್ಟಿರಿ. ನಿತ್ಯ

ನಿರ್ಮಲನಿರುಪಮ ಸಹಜಾತ್ಮ ಸ್ವರೂಪರಾದ ತಮ್ಮ ಪರಮಾತ್ಮ ಸ್ವರೂಪವನ್ನು ತಿಳಿದು ತಮ್ಮನ್ನೇ ಧ್ಯಾನಿಸುವ ಜ್ಞಾನಿಗಳೆಂಬ ಚಕೋರ ಪಕ್ಷಿಗಳಿಗೆ ಬೆಳದಿಂಗಳಿನಂತೆ ಹರ್ಷವನ್ನುಂಟುಮಾಡುವ ತಮ್ಮ ಸ್ತೋತ್ರವೆಂಬ ನೀರಿನಲ್ಲಿ ನಾನು ಸ್ನಾನವನ್ನು ಮಾಡಿದೆನು. ಈಗ ನಾನು ಬೇಸಿಗೆಯ ಬಿಸಿಲಿನಂತೆ ಅತ್ಯಂತ ಸಂತಾಪಕರವಾದ ಸಂಸಾರ ದುಃಖದಿಂದ ಬಿಡಲ್ಪಟ್ಟೆನು. ತಮ್ಮನ್ನೇ ಹೊಂದಿರುವ ಚಿತ್ತವುಳ್ಳವನಾದ ನಾನು ಈಗ ಹೋಗುತ್ತೇನೆ. ಇಂತಹ ಅಮೋಘ ದರ್ಶನವು ಮರಳಿ ನನಗೆ ಉಂಟಾಗಲಿ.

ಇತಿ ಶ್ರೀ ಭೂಪಾಲ ಕವಿಕೃತಂ

॥ ಭೂಪಾಲಸ್ತೋತ್ರಂ ॥

ಸಂಪೂರ್ಣಂ

ರಾಗ ಕೋಡಿ–ಆದಿತಾಳ

ವೃಷಭೇಶ! ಪಾಲಿಸೆನ್ನನು, ಶಶಿಸೂರ್ಯಕೋಟಿತೇಜನೆ! ಶ್ರೀಯುತ, ಪ್ರಪೂತ, ಅನಾಥರಕ್ಷಕ ॥ ವೃಷಭೇಶ ॥ ಪಲ್ಲ ॥ ಅಕಲಂಕರೂಪನೆ! ಮಕರಾಂಕನಾಶನೆ! । ಸಕಲೋರ್ವಿಗೀಶನೆ! ಸುಖದಚಿದ್ರೂಪನೆ! ಪಾಲಿ ॥ ೧ ॥

ಮಂದರಧೀರನೆ! ವಂದಿಸಿಪೂಜಿಪೆ । ಚಂದದಿಂದಲಿ ಆರ, ವಿಂದಗಳಿಂದಲಿ ॥ ಪಾಲಿ ॥ ॥ ೨ ॥

ಸಾಸಿರನಾಮನೆ! ಭಾಸುರತೇಜನೆ! । ದಾಸನಾದೆನ್ನನು, ಪೋಷಿಸು ಕರುಣದಿ ॥ ಪಾಲಿ ॥ ॥ ೩ ॥

ರಾಜರಾಜವಂದ್ಯದೇವ! ರಾಜಸೇವ್ಯ್ತರಿಂಸ್ತುತ! ಮೂಜಗದೊಳು ನಿನ್ನ, ಪೂಜಿಪಭವ್ಯರ ॥ ಪಾಲಿ ॥ ॥ ೪ ॥

ಧರೆಯೋಳ್ ಸಿರ್ತಾಡಿಯಿಂ, ಬೂರೊಳುನೆಲಸಿದೆ! । ಪುರುಪರಮೇಶನೆ! ಶರಣರ ರಕ್ಷಕ! ॥ ಪಾಲಿ ॥ ॥ ೫ ॥

ರಾಗ ಕಮಾಚ್–ಅಟ್ಟತಾಳ

ಕಾಪಾಡಬಾರದೇನ್ನೈ! ಶ್ರೀ ಜಿನದೇವ! ॥ ಪಲ್ಲವಿ ॥ ಆದಿಯಿಲ್ಲದ ಕರ್ಮ, ವೇದನೆಯುಲಿಸಿಲುಕಿ । ಬಾಧೆಪಡುವಯೆನ್ನ; ಸಾದರದಿಂದಲಿ ॥ಕಾಪಾ॥ ॥ ೧ ॥

ಸುರನರತಿರಿಯಂಚ, ನರಕ ಗತಿಗಳೆಂಬ । ಉರುತರಘೋರಸಂ, ಸಾರ ದೋಳ್ ತೊಳಲುವೆ ॥ ಕಾಪಾ ॥ ॥ ೨ ॥

ಸತಿಸುತಮೋಹದಿಂ, ದತಿದುಃಖಭುಂಜಿಸಿ । ಗತಿಯೆಂದು ನಾ ನಿನ್ನ, ನುತಿಸುವೆ ಮುದದಿ ॥ ಕಾಪಾ ॥ ॥ ೩ ॥

ಕಂದರ್ಪಹರನೆ ನಿ, ನ್ನಂದದಚರಣವ । ಚಂದದಿ ವಂದಿಪೆ, ಕಂದನ ಸಲ ಹೀಗ ॥ ಕಾಪಾ ॥ ॥ ೪ ॥

ಅನಘರೂಪಾತ್ಮನೆ, ! ಜಿನನೆ ! ನಾ ನಿನ್ನನು । ವಿನಯದಿಂನಮಿಸೀಗ, ಸನುಮತಿಬೇಡುವೆ ॥ ಕಾಪಾ ॥ ॥ ೫ ॥

ಎ. ಶಾಂತಿರಾಜಯ್ಯ

ಶ್ರೀ ನವದೇವತಾ

ನಮ್ಮಲ್ಲಿ ದೊರೆಯುವ ಗ್ರಂಥಗಳು

				ರೂ. ಪೈ.
೧.	ದಶಲಕ್ಷಣ ಧರ್ಮಗಳು	...	...	3-00
೨.	ಮೃತ್ಯುಮಹೋತ್ಸವ	...	...	3-00
೩.	ಜಿನಭಜನಸಾರ	...	...	8-00
೪.	ನಾರೀ-ಕರ-ದರ್ಪಣ	...	...	3-00
೫.	ದ್ವಾದಶಾನುಪ್ರೇಕ್ಷೆ	...	...	4-00
೬.	ಧರ್ಮಪರೀಕ್ಷೆ	...	...	14-00
೭.	ದ್ರವ್ಯಸಂಗ್ರಹಃ (ಜೈನಸಿದ್ಧಾಂತ ಸಂಗ್ರಹ)		...	7-00
೮.	ಪರಮಾತ್ಮಬೋಧೆ	...	...	3-00
೯.	ಶ್ರೀಪಾರ್ಶ್ವತೀರ್ಥಕರಚರಿತ	...	...	3-50
೧೦.	ಶತಕತ್ರಯ (ರತ್ನಾಕರ ವಿರಚಿತ)	...	...	10-00
೧೧.	ಜೈನಧರ್ಮದ ಸನಾತನತ್ವ ಮತ್ತು ಮಹತ್ತ್ವ		...	3-00
೧೨.	ಜೈನವೇದ ಮತ್ತು ಶ್ರುತಪಂಚಮಿ	...	...	3-50
೧೩.	ಪುರುಷಾರ್ಥಸಿದ್ಧ್ಯುಪಾಯಃ	...	...	6-00
೧೪.	ಇಷ್ಟೋಪದೇಶ	...	...	4-00
೧೫.	ದಶಭಕ್ತಿಃ	...	...	14-00
೧೬.	ಸುಕುಮಾರಚರಿತ್ರಾದಿಸಂಗ್ರಹ	...	...	4-00
೧೭.	ಅನ್ಯಯೋಗವ್ಯವಚ್ಛೇದಿಕಾ	...	...	6-50
೧೮.	ಶತಕದ್ವಯ (ರತ್ನಾಕರ ವಿರಚಿತ)	...	...	7-00
೧೯.	ಪೂಜಾಸಾರಸಮುಚ್ಚಯಃ	...	...	16-00
೨೦.	ಯೋಗಾಮೃತಶತಕಂ	...	...	4-00
೨೧.	ಸಜ್ಜನಚಿತ್ತವಲ್ಲಭಃ	...	...	4-00
೨೨.	ಭಕ್ತಾಮರಾದಿ ಪಂಚಸ್ತೋತ್ರ ಭಾವಪ್ರಕಾಶಿಕಾ		...	10-00

ವಿಳಾಸ :- ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್,
ನಂ. ೩೭೯, ೪೨ನೇ ಅಡ್ಡರಸ್ತೆ, ೮ನೇ ಬ್ಲಾಕ್,
ಜಯನಗರ, ಬೆಂಗಳೂರು – ೫೬೦ ೦೮೨.

ಪಂಡಿತರತ್ನ ಎತ್ತೂರು ಶಾಂತಿರಾಜ ಶಾಸ್ತ್ರಿಗಳು

ಜನನ : 1888 ಮರಣ: 1952

ಎತ್ತೂರು ಶಾಂತಿರಾಜ ಶಾಸ್ತ್ರಿಗಳು ಆದರ್ಶ ಧಾರ್ಮಿಕ ಪುರುಷ, ಸದಾಚಾರ ಸಂಪನ್ನ, ನಿಗರ್ವಿ, ನಿರಸೂಯ, ಬಹುಭಾಷಾವಿದ, ಸುಸಂಸ್ಕೃತ, ಸರಸ ಸಜ್ಜನಿಕೆಯ ಸಾಕಾರಮೂರ್ತಿ, ಸಮಾಜಸೇವಕ, ಶ್ರೇಷ್ಠ ವಿದ್ವಾಂಸ, ಶುದ್ಧ, ನಿರ್ಮಲ, ಪವಿತ್ರರೀತಿಯಲ್ಲಿ ಬಾಳಿದವರು. ಹೆಸರಿಗಾಗಿ, ಹಣಕ್ಕಾಗಿ, ಸ್ವಾರ್ಥಕ್ಕಾಗಿ ಎಂದೂ ಬಾಳಿದವರಲ್ಲ. ಅವರ ಜೀವನವನ್ನು ಸಮಾಜ ಹಾಗೂ ಸಾಹಿತ್ಯ ಸೇವೆಗೆಂದೇ ಮುಡುಪಾಗಿಟ್ಟು ದುಡಿದವರು, ಗುರಿಯತ್ತ ನಡೆದವರು. ಅವರ ಕಾರ್ಯಕ್ಷೇತ್ರ ವಿಶಾಲವಾದದ್ದು, ಸಾಹಿತ್ಯ ಸೇವೆ ಅಪಾರವಾದುದು, ಅತಿಶಯವಾದುದು. ಧರ್ಮ, ನೀತಿ, ಸ್ತೋತ್ರ, ಸಿದ್ಧಾಂತ, ಆಚಾರ, ಪೂಜಾಪಾಠ, ಸಾಹಿತ್ಯ—ಹೀಗೆ ಇವರ ಕೃತಿಗಳ ಹರವು, ಇವು ಈಗ ದೊರೆತಿರುವಂತೆ 50ಕ್ಕೂ ಮೀರಿವೆ; ಇವರ ಭಾಷಣಗಳು ಮತ್ತು ಲೇಖನಗಳು 77ಕ್ಕೂ ಮೀರಿವೆ. ಇವರ ಕೃತಿ ಶ್ರೇಣಿಯಲ್ಲಿ ಮಹಾ ಮೇರು ಕೃತಿ ಆಚಾರ್ಯ ಜಿನಸೇನ–ಗುಣಭದ್ರರಿಂದ ವಿರಚಿತವಾದ **'ಮಹಾಪುರಾಣ',** ಇಪ್ಪತ್ತು ಸಾವಿರ ಸಂಸ್ಕೃತ ಶ್ಲೋಕಗಳುಳ್ಳ ಈ ಮೇರುಕೃತಿಯನ್ನು ಸರಳ ಹೊಸಗನ್ನಡದಲ್ಲಿ **'ಭಾವಾರ್ಥ'**ವನ್ನು ಮೂಲದ ಯಾವುದೊಂದು ಶಬ್ದಾರ್ಥವನ್ನೂ ಬಿಡದೆ ಬರೆದು, ಕನ್ನಡದ ಜನತೆಗೆ ನೀಡಿ ಮಹೋಪಕಾರ ಮಾಡಿದ್ದಾರೆ. ಈ ಕೃತಿ ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಒಂದು ಆಕರಗ್ರಂಥ. ಹೀಗೆ ಸಂಸ್ಕೃತ, ಪ್ರಾಕೃತ, ಕನ್ನಡ ಪಾಂಡಿತ್ಯದ ಪ್ರತಿಭೆಯಿಂದ ಕನ್ನಡ ಸಾಹಿತಿಯಾಗಿ, ಸಾಹಿತ್ಯ ಪರಿಚಾರಕರಾಗಿ ಅಮೋಘ ಸೇವೆ ಸಲ್ಲಿಸಿದವರು. 'ವಿಶ್ವಬಂಧು' ಹಾಗೂ 'ವಿವೇಕಾಭ್ಯುದಯ' ಪತ್ರಿಕೆಗಳ ಜನಕರು. ಎತ್ತೂರು ಶಾಂತಿರಾಜ ಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಗೌರವಿಸಲ್ಪಟ್ಟ—ಬಹುಶಃ ಏಕೈಕ ಸಂಸ್ಕೃತ ವಿದ್ವಾಂಸರು. ಇವರ ಅಪಾರ ವಿದ್ವತ್ತಿನ ಕೀರ್ತಿಗಾಗಿ ಗುರುಮನೆಗಳಿಂದ ಸಂದ ಗೌರವಗಳಲ್ಲದೆ, ಅರಮನೆಯಿಂದಲೂ ಮೊದಲು ಆಸ್ಥಾನ ವಿದ್ವಾನರೆಂದೂ, ಅನಂತರ ಆಸ್ಥಾನ ಮಹಾವಿದ್ವಾನರೆಂದೂ ಗೌರವಿಸಲ್ಪಟ್ಟು, **'ಪಂಡಿತರತ್ನ'** ಎಂಬ ಬಿರುದನ್ನೂ ಪಡೆದು ಸಮಾಜದ ಪ್ರೀತಿ, ಆದರ, ಗೌರವಗಳಿಗೆ ಪಾತ್ರರಾದ ಹಿರಿಯ ಆದರ್ಶ ವ್ಯಕ್ತಿ.